# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ –2023**

**ಸಂಪುಟ–V, ಸಂಖ್ಯೆ – 4**

**ಪ್ರಕಟಣೆ:**

**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**

**ಕರ್ನಾಟಕ ವಿಧಾನ ಸಭೆ ಸಚಿವಾಲಯ,**

**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**

**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ

**http://kla.kar.nic.in** ನಲ್ಲೂ ಲಭ್ಯವಿದೆ

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ –V ರ ನಾಲ್ಕನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2023ನೇ ಸಾಲಿನ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಮಾನ್ಯ ಸದಸ್ಯರುಗಳು ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 03.08.2024

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀ ಬಿ.ಎಸ್. ಮಹಾಲಿಂಗೇಶ್ : ನಿರ್ದೇಶಕರು
3. ಶ್ರೀ ಬಿ.ಎಂ.ಶಂಭು : ಜಂಟಿ ನಿರ್ದೇಶಕರು
4. ಶ್ರೀಮತಿ ವಿ.ಭಾಗ್ಯ : ಉಪ ನಿರ್ದೇಶಕರು
5. ಶ್ರೀ ಬಿ.ಎ. ಸತೀಶ್ : ಸಹಾಯಕ ನಿರ್ದೇಶಕರು

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಅಪರ ಕಾರ್ಯದರ್ಶಿ

# ಕರ್ನಾಟಕ ಶಾಸಕಾಂಗ ಪತ್ರಿಕೆ
## (ತ್ರೈಮಾಸಿಕ ಪತ್ರಿಕೆ)

**ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ – 2023**

**ಸಂಪುಟ–V, ಸಂಖ್ಯೆ– 4**

## ಪರಿವಿಡಿ

## ಭಾಗ–1

## ಕರ್ನಾಟಕ ವಿಧಾನಮಂಡಲದ ಸುದ್ದಿಗಳು

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು | 3–35 |
| 2 | ದೆಹಲಿಯಲ್ಲಿ ಬೆಂಗಳೂರು ಕ್ಲಬ್‌ಗಳ ಅಧ್ಯಯನ | 36 |
| 3 | ಅಧಿವೇಶನದಲ್ಲಿ ಉಕ ಸಮಸ್ಯೆ ಚರ್ಚೆಗೆ ಆದ್ಯತೆ | 36–37 |
| 4 | ಶಾಸಕರಿಗೆ ಗಂಡ ಭೇರುಂಡ ಲಾಂಛನವುಳ್ಳ ಬ್ಯಾಡ್ಜ್ : ಖಾದರ್ | 37 |
| 5 | ಶಿಕ್ಷಣ ನೀಡುವುದೇ ದೇಶಪ್ರೇಮ: ಸ್ಪೀಕರ್ | 37–38 |
| 6 | ಆರ್.ಅಶೋಕ್ ವಿಪಕ್ಷ ಸಾಮ್ರಾಟ್ | 38 |
| 7 | ಜತ್ತಿ ಕನಸು ಸಿಎಂಆರ್ ಸಂಸ್ಥೆ ಈಡೇರಿಸಿದೆ | 38–39 |
| 8 | ವಿದ್ಯಾರ್ಜನೆ ಶ್ರೇಷ್ಠ ಕಾರ್ಯ | 39 |
| 9 | ಸದನ ಹೊರಗಿನ ಪ್ರತಿಭಟನೆಗಳನ್ನು ತಗ್ಗಿಸಿ | 39–40 |
| 10 | ಮೇಘಾಲಯ ಗ್ರಂಥಾಲಯ ಸಮಿತಿ ನಿಯೋಗದೊಂದಿಗೆ ಸಭಾಪತಿ ಭೇಟಿ | 40–41 |
| 11 | ಬಸವಕಲ್ಯಾಣ ಅಂತಾರಾಷ್ಟ್ರೀಯ ಸ್ಥಳವಾಗಲಿ | 41 |
| 12 | ಗುಣಾತ್ಮಕ ಚರ್ಚೆಗೆ 60 ದಿನ ಕಲಾಪ ಅಗತ್ಯ | 41–42 |
| | **ಭಾಗ–2**<br>**ಕರ್ನಾಟದ ವಿಧಾನಮಂಡಲದ ಕಾರ್ಯಚಟುವಟಿಕೆಗಳು** | |
| 1 | ವಿಧಾನ ಪರಿಷತ್ತಿನ 151ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 45–46 |
| 2 | 16ನೇ ವಿಧಾನಸಭೆ, 2ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 47–48 |
| 3 | ಕರ್ನಾಟಕ ವಿಧಾನ ಮಂಡಲದ/ವಿಧಾನ ಸಭೆಯ ವಿವಿಧ ಸ್ಥಾಯಿ ಸಮಿತಿಗಳನ್ನು ನಿಯಮಿತವಾಗಿ ನಡೆಸುವ ಸಂಬಂಧ ಹೊರಡಿಸಲಾದ ಲಘು ಪ್ರಕಟಣೆ | 49–50 |
| 4 | ನಿಯಮಾವಳಿ ಸಮಿತಿ ರಚನೆಗೆ ಸಂಬಂಧಿಸಿದ ಲಘು ಪ್ರಕಟಣೆ | 51 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 5 | ಸರ್ಕಾರಿ ಭರವಸೆಗಳ ಸಮಿತಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಿರುವ ಲಘು ಪ್ರಕಟಣೆ | 52 |
| 6 | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಅಧ್ಯಕ್ಷರನ್ನು ನಾಮ ನಿರ್ದೇಶನದ ಮಾಡಿರುವ ಲಘು ಪ್ರಕಟಣೆ | 53 |
| 7 | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಸದಸ್ಯರ ನಾಮ ನಿರ್ದೇಶನದ ಲಘು ಪ್ರಕಟಣೆ | 54 |
| 8 | ಅರ್ಜಿಗಳ ಸಮಿತಿಯ ಉಪಸಮಿತಿ ರಚನೆಗೆ ಸಂಬಂಧಿಸಿದ ಲಘು ಪ್ರಕಟಣೆ | 55–56 |
| | **ಭಾಗ–3**<br>**ಸಂಸತ್ ಸುದ್ದಿಗಳು** | |
| 1 | Om Birla slams EU Parliament for raising India’s internal issues | 59–60 |
| 2 | House panels don’t have criminal jurisdiction: MP | 60 |
| 3 | ಮೂರು ಕ್ರಿಮಿನಲ್ ಕಾಯ್ದೆ ಬದಲಿಸುವ ವರದಿಗೆ ಸಂಸತ್ ಸಮಿತಿ ಒಪ್ಪಿಗೆ | 61–62 |
| 4 | ಮಹುವಾ ಉಚ್ಚಾಟನೆಗೆ ಶಿಫಾರಸು | 62–63 |
| 5 | Over 700 bills by private members pending in LS | 63–64 |
| | **ಭಾಗ–4**<br>**ಕೇಂದ್ರ ಸರ್ಕಾರದ ಸುದ್ದಿಗಳು** | |
| 1 | Terrorism, for any reason, is against humanity:Modi | 67–68 |
| 2 | ಇಸ್ರೋಗೆ 2 ಟಾರ್ಗೆಟ್ | 68–69 |
| 3 | ಒಂದು ರಾಷ್ಟ್ರ, ಒಂದು ಚುನಾವಣೆ ದೇಶ ಹಿತಕ್ಕೆ ಪೂರಕ ಎಂದ ಕೋವಿಂದ್ | 69 |
| | **ಭಾಗ–5**<br>**ರಾಜ್ಯ ಸರ್ಕಾರದ ಸುದ್ದಿಗಳು** | |
| 1 | ಮೇಕೆದಾಟು ಉತ್ಸಾಹಕ್ಕೆ ಹೊಗೇನಕಲ್ ತಣ್ಣೀರು | 73–74 |
| 2 | State notifies 5.7k acres as forest in just 120 days | 74–75 |
| 3 | ವರ್ಷವಿಡೀ ಸುವರ್ಣ ಕರ್ನಾಟಕ ಸಂಭ್ರಮ | 75–76 |
| 4 | ಒಬಿಸಿಗೆ ಮೀಸಲು ಬಲ | 76–77 |
| 5 | ಪಲ್ಲಕ್ಕಿ ಬಸ್ ಸೇವೆಗೆ ಹಸಿರು ನಿಶಾನೆ | 77–78 |
| 6 | ಬರ ಪರಿಸ್ಥಿತಿ ಮನವರಿಕೆ | 78–79 |
| 7 | ನವೆಂಬರ್ 14 ರಿಂದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ | 79–80 |
| 8 | ಸುವರ್ಣ ಸಂಭ್ರಮದಲ್ಲಿ ದೇವರಾಜ ಅರಸು ವೈಭವ | 80–82 |
| 9 | 9ನೇ ಬಾರಿಗೆ ಖಾಸಗಿ ದರ್ಬಾರ್ ನಡೆಸಿದ ಯದುವೀರ್ ಒಡೆಯರ್ | 82–83 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 10 | ರೈತರಿಗೆ 3 ಪಾಳಿ ವಿದ್ಯುತ್ | 83 |
| 11 | ರಾಜ್ಯದಲ್ಲಿ ಕನ್ನಡ ಮಾತನಾಡುವ ಅನಿವಾರ್ಯತೆ ಸೃಷ್ಟಿ ಅಗತ್ಯ | 84 |
| 12 | ಗ್ರಾಮೀಣ ವೈದ್ಯ ಸೇವೆ ಕಡ್ಡಾಯವಲ್ಲ | 84–85 |
| 13 | ಭವಿಷ್ಯದಲ್ಲಿ ಮೈಸೂರಿಗೂ ಮೆಟ್ರೋ ಸೇವೆ | 85–86 |
| 14 | ಸೀಬರ್ಡ್ ನಿರಾಶ್ರಿತರಿಗೆ ಪರಿಹಾರ, ಉದ್ಯೋಗ | 86 |
| 15 | ಕಂದಾಯ ಭೂಮಿ ರಕ್ಷಣೆಗೆ 'ಅರಣ್ಯ ಕಾಯ್ದೆ' ಮಾದರಿ | 86–88 |
| 16 | ರಾಜಧಾನಿಯೆಲ್ಲೆಡೆ ಕನ್ನಡ ಡಿಂಡಿಮ | 88–89 |
| 17 | ವಿಶ್ವವಿದ್ಯಾಲಯಗಳ ಅಧಿನಿಯಮದ ತಿದ್ದುಪಡಿಗೆ ಸಮಿತಿ ರಚಿಸಲು ಸೂಚನೆ | 89–90 |
| 18 | ಕಾರ್ಮಿಕರಿಗೆ ಭದ್ರತೆ ಒದಗಿಸಲು ಕಾನೂನು | 90 |
| 19 | ಹವಾಮಾನ ಕ್ರಿಯಾಯೋಜನೆಗೆ ಸಜ್ಜು | 90–91 |
| 20 | 188 ಇಂದಿರಾ ಕ್ಯಾಂಟೀನ್ ಸ್ಥಾಪನೆಗೆ ಅಸ್ತು | 91 |
| 21 | ಹಸಿರು ಕ್ರಾಂತಿಯಿಂದ ಸುಸ್ಥಿರ ಕೃಷಿ ಬೆಳವಣಿಗೆ | 91–92 |
| 22 | 324 ಕೋಟಿ ಬರ ಪರಿಹಾರ ಬಿಡುಗಡೆ | 92 |
| | **ಭಾಗ–6**<br>**ನ್ಯಾಯಾಲಯ ಸುದ್ದಿಗಳು** | |
| 1 | Court issues notice to RS Secretariat over AAP MP' suspension | 95 |
| 2 | ಮಹಾರಾಷ್ಟ್ರ ಸ್ಪೀಕರ್‌ಗೆ ಗಡುವು | 96 |
| 3 | SC puts Maharashtra Speaker on deadline over defection pleas | 97–98 |
| 4 | TN guv delaying nod for bills a serious concern, says SC | 99 |
| | **ಭಾಗ–7**<br>**ಹೊರರಾಜ್ಯಗಳ ಸುದ್ದಿಗಳು** | |
| 1 | ಬಿಹಾರದಲ್ಲಿ ದೇಶದ ಮೊದಲ ಜಾತಿಗಣತಿ ವರದಿ ಬಿಡುಗಡೆ | 103–104 |
| 2 | ನವೆಂಬರ್ 7ರಿಂದ ಪಂಚರಾಜ್ಯ ಮಹಾಸಮರ | 104 |
| 3 | ಮೀಸಲಾತಿ ಹೆಚ್ಚಳಕ್ಕೆ ಸಂಪುಟ ಅಸ್ತು | 105–106 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 4 | TN Assembly adopts 10 bills | 106–107 |
| 5 | Additional affidavits | 108 |
| | **ಭಾಗ–8**<br>**ಶ್ರದ್ಧಾಂಜಲಿ** | |
| 1 | ಡಿ.ಬಿ.ಚಂದ್ರೇಗೌಡರು, ಮಾಜಿ ಸಚಿವರು | 111–112 |
| 2 | ಪಿ.ಬಿ.ಆಚಾರ್ಯ, ಮಾಜಿ ರಾಜ್ಯಪಾಲರು | 112 |
| 3 | ಸಿ.ವೆಂಕಟೇಶಪ್ಪ, ಮಾಜಿ ಶಾಸಕರು | 113 |
| | **ಭಾಗ – 9**<br>**ಪ್ರಮುಖ ಲೇಖನಗಳು** | |
| 1 | ಚುನಾವಣಾ ಬಾಂಡ್ ವ್ಯವಸ್ಥೆ ಸಲ್ಲ ಇದು ಪ್ರಜಾತಂತ್ರಕ್ಕೆ ಅಪಾಯಕಾರಿ | 117–118 |
| 2 | 370ನೇ ವಿಧಿಯ ರದ್ದತಿ ಸಿಂಧುವಾದದ್ದು ಹೇಗೆ | 118–121 |
| 3 | ನ್ಯಾಯಾಲಯವು ಶ್ರೇಷ್ಠ ಭಾರತ್ ಮನೋಭಾವವನ್ನು ಬಲಪಡಿಸಿದೆ | 121–125 |
| 4 | ಸಂಸತ್ತಿನ ಘನತೆಯನ್ನು ಸದಸ್ಯರು ಕಾಪಾಡಲಿ | 125–126 |
| 5 | ಸಂಹಿತೆಗಳ ಪ್ರಮುಖ ವೈಶಿಷ್ಟ್ಯಗಳು | 126–128 |
| 6 | ನ್ಯಾಯವೇ ದೇವರು | 128–130 |


ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪತ್ರಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.

ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

## ಕರ್ನಾಟಕ ವಿಧಾನ ಮಂಡಲದ ಸುದ್ದಿಗಳು

# 1. ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು

## ಸನ್ಮಾನ್ಯ ಸಭಾಧ್ಯಕ್ಷರಿಗೆ ಶುಭ ಹಾರೈಕೆ









ದಿನಾಂಕ: 01.10.2023 ರಂದು ಸನ್ಮಾನ್ಯ ಸಭಾಧ್ಯಕ್ಷರು 66ನೇ ಕಾಮನ್ ವೆಲ್ತ್ ಸಂಸದೀಯ ಸಮ್ಮೇಳನ, ಆಕ್ರಾ, ಘಾನಾದಲ್ಲಿ ಭಾಗವಹಿಸಲು ವಿದೇಶಕ್ಕೆ ತೆರಳುವ ಮುನ್ನ ಅವರಿಗೆ ಶುಭ ಹಾರೈಸುತ್ತಿರುವುದು.

# 66ನೇ ಕಾಮನ್ ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಸನ್ಮಾನ್ಯ ಸಭಾಪತಿ ಹಾಗೂ ಸನ್ಮಾನ್ಯ ಸಭಾಧ್ಯಕ್ಷರು












66ನೇ ಕಾಮನ್‌ವೆಲ್ತ್ ಪಾರ್ಲಿಮೆಂಟ್ (ಸಿ.ಪಿ.ಎ) ಸಮ್ಮೇಳನದಲ್ಲಿ ಭಾಗವಹಿಸುವ ಪೂರ್ವದಲ್ಲಿ ವಿವಿಧ ರಾಜ್ಯಗಳಿಂದ ಆಗಮಿಸಿದ ಸಭಾಧ್ಯಕ್ಷರು, ಸಭಾಪತಿಗಳು, ಸಂಸದೀಯ ವ್ಯವಹಾರಗಳ ಇಲಾಖೆಯ ಮುಖ್ಯಸ್ಥರು, ಹಿರಿಯ ಅಧಿಕಾರಿಗಳು ಸಾಲಾಗಿ ಒಂದಾಗಿ ಭಾರತೀಯತೆ ಮೆರೆಯುವ ಮೂಲಕ ಘಾನ ಪಾರ್ಲಿಮೆಂಟ್ ಸಭಾಭವನ ಪ್ರವೇಶಿದ ಕ್ಷಣ.






ದಿನಾಂಕ: 02.10.2023 ರಿಂದ 06.10.2023 ರವರೆಗೆ ಪಶ್ಚಿಮ ಆಫ್ರಿಕಾ ದೇಶದ ಗಿನಿಯಾ ಕೊಲ್ಲಿಯ ಕರಾವಳಿ ಪ್ರದೇಶದಲ್ಲಿನ ಘಾನಾ ದೇಶದ ಆಕ್ರಾದಲ್ಲಿ ನಡೆದ ಕಾಮನ್ ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ ಕರ್ನಾಟಕ ಪ್ರತಿನಿಧಿಗಳಾಗಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಮತ್ತು ಮಾನ್ಯ ವಿಧಾನಸಭಾ ಸಭಾಧ್ಯಕ್ಷರಾದ ಶ್ರೀ ಯು.ಟಿಖಾದರ್ ರವರು ಭಾಗವಹಿಸಿರುತ್ತಾರೆ.





ಪಶ್ಚಿಮ ಆಫ್ರಿಕಾದ ಪ್ರವಾಸದ ಸಂದರ್ಭದಲ್ಲಿ ಗೌರವಾನ್ವಿತ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ಅವರು ಹಾಗೂ ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ. ಖಾದರ್ ರವರು "ಘಾನಾದ" ರಾಜಧಾನಿಯಲ್ಲಿರುವ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ಪುಟ್ಟ ಬಡ ಮಕ್ಕಳೊಂದಿಗೆ ಆಟವಾಡಿದರು.






ಘಾನಾದಲ್ಲಿ ನೆಲೆಸಿರುವ ಕನ್ನಡಿಗರು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಮತ್ತು ಮಾನ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ರವರಿಗೆ ಸನ್ಮಾನಿಸಿ ಗೌರವಿಸಿದರು.





66ನೇ ಕಾಮನ್ವೆಲ್ತ್ ಪಾರ್ಲಿಮೆಂಟ್ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ (ಸಿ.ಪಿ.ಎ) ಮುಗಿದ ನಂತರ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಹೊರಟ್ಟಿ ಹಾಗೂ ವಿಧಾನಸಭೆಯ ಅಧ್ಯಕ್ಷರಾದ ಯು.ಟಿ. ಖಾದರ್‌ರವರು ಸೇರಿದಂತೆ ದೇಶದ ವಿವಿಧ ರಾಜ್ಯದ ಪ್ರತಿನಿಧಿಗಳು ಯುರೋಪ್‌ನತ್ತ ಪ್ರವಾಸ ಹೊರಟು ರೋಮನಜ್ಯುರಿಚ್‌ನ (ಸ್ವಿಜರ್‌ಲ್ಯಾಂಡ್) ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸರ, ಸ್ವಚ್ಛತೆ, ಆರೋಗ್ಯ, ಆಡಳಿತ, ಕಾನೂನು ವ್ಯವಸ್ಥೆ ಶೈಕ್ಷಣಿಕ ಪದ್ಧತಿ ಅಲ್ಲಿನ ನಾಗರಿಕರ ದೈನಂದಿನ ಚಟುವಟಿಕೆಗಳು ಮುಂತಾದ ವಿಚಾರಗಳ ಬಗ್ಗೆ ಅಧ್ಯಯನ ಮಾಡುವುದರ ಜೊತೆಗೆ ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದರು.









ಅಕ್ಟೋಬರ್ 1 ರಿಂದ ಯುರೋಪ್ ದೇಶಗಳ ಪ್ರವಾಸದಲ್ಲಿರುವ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ಸನ್ಮಾನ್ಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರೊಂದಿಗೆ ಪಶ್ಚಿಮ ಆಫ್ರಿಕಾದಲ್ಲಿ ನಡೆದ ಅಂತರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನ ಮುಗಿಸಿ ತದನಂತರ ರೋಮ್ ಇಟಲಿ ಸ್ವಿಡ್ಜರ್‌ಲ್ಯಾಂಡ್ ನಂತಹ ದೇಶಗಳಲ್ಲಿರುವ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ ಫ್ರಾನ್ಸ್ ದೇಶದ ಪ್ಯಾರಿಸ್ ನಗರದ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದರು.



ಯುರೋಪ್ ದೇಶಗಳ ಪ್ರವಾಸದ ಸಂದರ್ಭದಲ್ಲಿ ಮಾನ್ಯ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಸಮ್ಮೇಳನದ ತಂಡವು ಫ್ರಾನ್ಸ್ ದೇಶದ ಪ್ಯಾರಿಸ್ ನಗರದಲ್ಲಿ 125 ವರ್ಷಗಳ ಹಿಂದೆ ಕಬ್ಬಿಣದಿಂದ ನಿರ್ಮಾಣಗೊಂಡ ವಿಶ್ವ ಪ್ರಸಿದ್ಧ ಕಟ್ಟಡಗಳಲ್ಲಿ ಒಂದಾದ ”ಐಫೆಲ್ ಗೋಪುರ” (Eiffel Tower) ವೀಕ್ಷಿಸಿದ ಸಂತಸದ ಕ್ಷಣ.

## ಲಂಡನ್‌ನಿನ ಕನ್ನಡಿಗರ ಬಸವ ಬಳಗ ಸದಸ್ಯರಿಂದ ಸ್ವಾಗತ








ದಿನಾಂಕ:16.10.2023 ರಂದು ಲಂಡನ್‌ಗೆ ಬಂದ ತಕ್ಷಣ ಮಾನ್ಯ ಸಭಾಪತಿ ಶ್ರೀ ಬಸವರಾಜ್ ಹೊರಟ್ಟಿ, ಅವರ ತಂಡವನ್ನು ಲಂಡನ್‌ನ್ನಿನ ಕನ್ನಡಿಗರಾದ ಬಸವ ಬಳಗದ ಸದಸ್ಯರು ಬಸವಣ್ಣನವರ "ಕಾಯಕವೇ ಕೈಲಾಸ" ಎಂಬ ತತ್ವದ ಬಿತ್ತಿ ಪತ್ರ ಹಿಡಿದು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ತದನಂತರ ಥೇಮ್ಸ್‌ನ ದಂಡೆಯಲ್ಲಿ ಸ್ಥಾಪಿಸಿದ ಜಗಜ್ಯೋತಿ ಬಸವಣ್ಣನವರ ಮೂರ್ತಿಗೆ ಗೌರವ ಸಲ್ಲಿಸಿದ ಮಾನ್ಯ ಸಭಾಪತಿ ಅವರು ಅಲ್ಲಿನ ಕನ್ನಡಿಗರನ್ನು ಕುರಿತು ಮಾತನಾಡಿ, ವಿದೇಶದಲ್ಲಿದ್ದರು ಕನ್ನಡ ಅಭಿಮಾನ ಕನ್ನಡ ಮೇಲಿನ ಪ್ರೀತಿ ಜಗಜ್ಯೋತಿ ಬಸವಣ್ಣನವರ ಆಚಾರ ವಿಚಾರಗಳನ್ನು ಪಾಲಿಸುತ್ತಿರುವ ತಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆಗೆ ಕಾರಣಿಕರ್ತರು ಕನ್ನಡಿಗರು ಹಾಗೂ ಲಂಡನ್ನಿನ ಮಾಜಿ ಮೇಯರ್‌ರಾದ ಡಾ.ನೀರಜ್ ಪಾಟೀಲ್ ಅವರು ಮಾತನಾಡಿ ನಾವು ಎಲ್ಲೇ ಇದ್ದರೂ ನಮ್ಮ ನೆಲ, ಭಾಷೆ, ನಮ್ಮ ಪೂರ್ವಿಕರನ್ನ ಸ್ಮರಿಸಿಕೊಂಡೆ ದಿನದ ಪ್ರತಿಕ್ಷಣವನ್ನು ಕಳೆಯುತ್ತೇವೆ. ಕನ್ನಡಿಗರು ಜಗತ್ತಿನ ಮೂಲೆ-ಮೂಲೆಯಲ್ಲಿ ವಾಸಿಸುವ ಮೂಲಕ ತಮ್ಮದೇ ಆದ ಸಾಧನೆ ಮೂಲಕ ಕನ್ನಡದ ಕಂಪನ್ನು ಜಗತ್ತಿನ ತುಂಬೆಲ್ಲ ಬಿತ್ತರಿಸಿದ್ದಾರೆ ಹೆಚ್ಚಿನ ಸಂಖ್ಯೆ ಕನ್ನಡಿಗರು ಇಲ್ಲಿ ಇದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್‌ರವರು ಸೇರಿದಂತೆ ವಿವಿಧ ಜನಪ್ರತಿನಿಧಿಗಳು ಹಿರಿಯ ಅಧಿಕಾರಿಗಳು ಲಂಡನ್‌ನಲ್ಲಿ ವಾಸಿಸುತ್ತಿರುವ ಕನ್ನಡ ಅಭಿಮಾನಿಗಳು ಮುಂತಾದವರು ಉಪಸ್ಥಿತರಿದ್ದರು.

## ಲಂಡನ್‌ನ ಕರ್ನಾಟಕ ಕಲ್ಚರಲ್ ಫೌಂಡೇಷನ್‌ನ ಸದಸ್ಯರು–ಸ್ಪೀಕರ್‌ಗೆ ಶುಭ ಹಾರೈಕೆ








ದಿನಾಂಕ: 18.10.2023 ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಯುನೈಟೆಡ್ ಕಿಂಗ್ ಡಮ್‌ನ ಲಂಡನ್‌ನಲ್ಲಿ ಕರ್ನಾಟಕ ಕಲ್ಚರಲ್ ಫೌಂಡೇಷನ್ (KCF) ಸದಸ್ಯರು ಭೇಟಿ ಮಾಡಿ ಶುಭ ಹಾರೈಸಿದ ಸಂದರ್ಭ.

## ಮಂಗಳೂರಿನ ಎಮ್ಮೆಕೆರೆಯಲ್ಲಿ ಈಜು ಕೊಳ, ಕ್ರೀಡಾಂಗಣ ವೀಕ್ಷಣೆ







ದಿನಾಂಕ: 21.10.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಮ್ಮೆಕೆರೆಯಲ್ಲಿ ನಿರ್ಮಾಣವಾಗುತ್ತಿರುವ ಅಂತರರಾಷ್ಟ್ರೀಯ ಮಟ್ಟದ ಈಜು ಕೊಳ, ಕ್ರೀಡಾಂಗಣ ವೀಕ್ಷಣೆ ನಡೆಸಿದ ಸಂದರ್ಭ.

## ಡಾ: ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ ಪುಣ್ಯ ಸ್ಮರಣೆ ಕಾರ್ಯಕ್ರಮ





ದಿನಾಂಕ: 24.10.2023 ರಂದು ಕನ್ನಡದ ಕುಲ ಗುರುಗಳು, ಸೌಹಾರ್ದತೆಯ ಹರಿಕಾರರೆಂದು ಖ್ಯಾತರಾದ ಲಿಂಗೈಕ್ಯ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ ಐದನೇ ಪುಣ್ಯ ಸ್ಮರಣೆ ಮರಣವೇ ಮಹಾನವಮಿ ಆಚರಣೆ ಹಾಗೂ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಧಾನ, ಗ್ರಂಥಗಳ ಬಿಡುಗಡೆ ಸಮಾರಂಭದಲ್ಲಿ ನಾನು ನಂಬಿರುವ ಕೆಲವೇ ಕೆಲವು ಸ್ವಾಮೀಜಿಗಳಲ್ಲಿ ತೋಂಟದ ಶ್ರೀಗಳು ಅಗ್ರಮಾನ್ಯರು. ಹೀಗಾಗಿ ಅವರ ಮಾತುಗಳು ನನಗೆ ವೇದವಾಕ್ಯ. ಅವರ ಆದರ್ಶಗಳನ್ನು ಇಂದಿಗೂ ನಾನು ಪಾಲಿಸಿಕೊಂಡು ಬರುತ್ತಿರುವೆ ಎಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ದಕ್ಷ ಪ್ರಮಾಣಿಕ ಅಧಿಕಾರಿಯೆಂದೇ ಖ್ಯಾತರಾದ ನಿವೃತ್ತ ಐ.ಎ.ಎಸ್.ಅಧಿಕಾರಿ ಡಾ.ಎಸ್.ಎಂ.ಜಾಮ್‌ದಾರ ಅವರಿಗೆ ಡಾ.ತೋಂಟದ ಸಿದ್ದಲಿಂಗ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಮಾಡಿದರು. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ ಪಾಟೀಲ್‌ರವರು ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ.

## ವಿದ್ಯಾರ್ಥಿಗಳ ಸಂವಾದ ಕಾರ್ಯಕ್ರಮದಲ್ಲಿ–ಸನ್ಮಾನ್ಯ ಸಭಾಪತಿಗಳು





ದಿನಾಂಕ: 25.10.2023 ರಂದು ಶ್ರೀ ಬಸವರಾಜ ಹೊರಟ್ಟಿ ದಂಪತಿಗಳು ದತ್ತು ಪಡೆದ ಸರಕಾರಿ ಪ್ರೌಢಶಾಲೆ, ಸಿದ್ದಲಿಂಗ ನಗರ, ಗದಗ ಇವರ ಆಶ್ರಯದಲ್ಲಿ ಬನ್ನಿ ಮುಡಿಯುವ ಕಾರ್ಯಕ್ರಮ, ವಿವಿಧ ಕಟ್ಟಡ ಕಾಮಗಾರಿಗಳ ವೀಕ್ಷಣೆ ಹಾಗೂ ಗೌರವಾನ್ವಿತ ಸಭಾಪತಿಗಳೊಂದಿಗೆ ಸಂವಿಧಾನ, ಪ್ರಜಾಪ್ರಭುತ್ವ ಕುರಿತು ವಿದ್ಯಾರ್ಥಿಗಳಿಂದ ಸಂವಾದ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಭಾಗವಹಿಸಿದರು.

## ಪವರ್ ಲಿಫ್ಟಿಂಗ್ ಚಾಂಪಿಯನ್‌ಗೆ – ಸ್ಪೀಕರ್ ಅಭಿನಂದನೆ



ದಿನಾಂಕ: 25.10.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಮಂಗೋಲಿಯಾದಲ್ಲಿ ನಡೆದ ವಿಶ್ವ ಮಾಸ್ಟರ್ಸ್ ಕ್ಲಾಸಿಕ್ ಅಂಡ್ ಎಕ್ವಿಪ್ಡ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪದಕ ಪಡೆದ ಲತಾ ಜಿ ನಟರಾಜ್ ರವರನ್ನು ಅಭಿನಂದಿಸಿದ ಸಂದರ್ಭ.

## ವಾಹನ ಚಾಲಕರುಗಳು – ಸನ್ಮಾನ್ಯ ಸಭಾಧ್ಯಕ್ಷರ ಭೇಟಿ





ದಿನಾಂಕ: 26.10.2023 ರಂದು ಶಾಸಕರ ಭವನದ ಚಾಲಕರು ಹಾಗೂ ಸಿಬ್ಬಂದಿ ವರ್ಗದವರು ಅವರುಗಳ ವಿವಿಧ ಬೇಡಿಕೆಗಳನ್ನು ಪೂರೈಸಿರುವ ಕುರಿತು ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿ ಆತ್ಮೀಯವಾಗಿ ಗೌರವಿಸಿದ ಸಂದರ್ಭ

## ವಿಶ್ವ ಬಂಟರ ಸಮ್ಮೇಳನ 2023, ಉದ್ಘಾಟನಾ ಸಮಾರಂಭ





ದಿನಾಂಕ: 28.10.2023ರಂದು ಅಜ್ಜರಕಾಡು ಮೈದಾನ, ಉಡುಪಿಯಲ್ಲಿ ನಡೆದ ವಿಶ್ವ ಬಂಟರ ಸಮ್ಮೇಳನ–2023ರ ಉದ್ಘಾಟನಾ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾನ್ಯ ಸಭಾಧ್ಯಕ್ಷರು.

## ಆಸ್ಟರ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭ











ದಿನಾಂಕ: 01.11.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ವೈಟ್ ಫೀಲ್ಡ್‌ನಲ್ಲಿ ನೂತನವಾಗಿ ನಿರ್ಮಾಣಗೊಂಡ ಆಸ್ಟರ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ.

## ಸುವರ್ಣ ಮಹೋತ್ಸವ ಕರ್ನಾಟಕ ಸಂಭ್ರಮ ಕಾರ್ಯಕ್ರಮ










ದಿನಾಂಕ: 03.11.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಗದಗ ಇವರ ಸಹಯೋಗದಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವ ಕರ್ನಾಟಕ ಸಂಭ್ರಮ ಕಾರ್ಯಕ್ರಮದಲ್ಲಿ.

## Consul General of Saudi Arabia- ಸ್ಪೀಕರ್ ಭೇಟಿ








ದಿನಾಂಕ: 04.11.2023 ರಂದು ಸನ್ಮಾನ್ಯ ಸಭಾಧ್ಯಕ್ಷರು H.E Mr. Bandar Fahad A Al Dayel, Consul General of Saudi Arabia ರವರನ್ನು ತಮ್ಮ ಕಛೇರಿಯಲ್ಲಿ ಭೇಟಿ ನೀಡಿ ಮಾತುಕತೆ ನಡೆಸಿದರು.

## 2023ರ ಪುರಸ್ಕಾರ ಕಾರ್ಯಕ್ರಮ






ದಿನಾಂಕ: 06.11.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ಗಾಂಧಿ ಭವನದಲ್ಲಿ ನಡೆದ ಮಹಾತ್ಮ ಗಾಂಧಿ ಸದ್ಭಾವನಾ ಅಂತರರಾಷ್ಟ್ರೀಯ ಪ್ರಶಸ್ತಿ 2023 ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಸನ್ನಿವೇಶ.

## ಸನ್ಮಾನ್ಯ ಸಭಾಧ್ಯಕ್ಷರು ಅರಸೀಕೆರೆ ಕೋಡಿ ಮಠಕ್ಕೆ ಭೇಟಿ




ದಿನಾಂಕ:07.11.2023ರಂದು ಸನ್ಮಾನ್ಯ ಸಭಾಧ್ಯಕ್ಷರು ಅರಸೀಕೆರೆ ಶಾಸಕರಾದ ಶ್ರೀ ಕೆ.ಎಂ. ಶಿವಲಿಂಗೇ ಗೌಡರ ಜೊತೆ ಕೋಡಿ ಮಠದ ಶ್ರೀಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

## ಚಳಿಗಾಲ ಅಧಿವೇಶನ ಮುನ್ನ ಬೆಳಗಾವಿಯ ಸುವರ್ಣ ಸೌಧ ವೀಕ್ಷಣೆ





ದಿನಾಂಕ: 07.11.2023 ರಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಹಾಗೂ ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಅವರು ಚಳಿಗಾಲದ ಅಧಿವೇಶನದ ಹಿನ್ನಲೆಯಲ್ಲಿ ಅಧಿಕಾರಿಗಳು ಮತ್ತು ವಿವಿಧ ಸಮಿತಿಗಳ ಮುಖ್ಯಸ್ಥರ ಜೊತೆ ಬೆಳಗಾವಿಯ ಸುವರ್ಣ ಸೌಧ ಪೂರ್ವಸಿದ್ಧತೆಯ ಕಾರ್ಯದ ಬಗ್ಗೆ ವೀಕ್ಷಣೆ ಹಾಗೂ ಪರಿಶೀಲನೆ.

## ಚಳಿಗಾಲ ಅಧಿವೇಶನದ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ





ದಿನಾಂಕ: 08.11.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆಯ ಚಳಿಗಾಲದ ಅಧಿವೇಶನ ನಡೆಯುವ ಬೆಳಗಾವಿಯ ಸುವರ್ಣಸೌಧಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಧಿವೇಶನ ಸೂಕ್ತವಾಗಿ ನಡೆಯಲು ಬೇಕಾಗುವ ಕ್ರಮಗಳು ಬಗ್ಗೆ ಅಧಿಕಾರಿಗಳ ಸಭೆ.

## ಕರ್ನಾಟಕ ವಿಧಾನಸಭೆಯ ನಿಯಮಾವಳಿ ಸಮಿತಿ ಸಭೆ







ದಿನಾಂಕ: 09.11.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನಸಭೆಯ ನಿಯಮಾವಳಿ ಸಮಿತಿಯ ಸಭೆಯಲ್ಲಿ ಚರ್ಚೆ ನಡೆಸುತ್ತಿರುವ ಸಂದರ್ಭ.

## ಉಪರಾಷ್ಟ್ರಪತಿ ಹಾಗೂ ರಾಜ್ಯ ಸಭೆಯ ಸಭಾಪತಿ ಭೇಟಿ



ದಿನಾಂಕ: 21.11.2023 ರಂದು ಸನ್ಮಾನ್ಯ ಸಭಾಧ್ಯಕ್ಷರ ನೇತೃತ್ವದ ನಿಯೋಗವು ಸನ್ಮಾನ್ಯ ಉಪ ರಾಷ್ಟ್ರಪತಿಗಳು ಹಾಗೂ ರಾಜ್ಯ ಸಭೆಯ ಸಭಾಪತಿಯವರಾದ ಶ್ರೀ ಜಗದೀಪ್ ಧನಕರ್ ಹಾಗೂ ರಾಜ್ಯ ಸಭಾ ಸೆಕ್ರೆಟರಿ ಜನರಲ್ ಅವರನ್ನು ಭೇಟಿ ಮಾಡಿ ರಾಜ್ಯ ಸಭೆಯಲ್ಲಿ ಇ-ವಿಧಾನ್ ಪದ್ಧತಿಯನ್ನು ಜಾರಿಗೆ ತಂದಿರುವ ಹಾಗೂ ಕಾರ್ಯವೈಖರಿಯ ಬಗ್ಗೆ ಮಾತುಕತೆ.

## ಸನ್ಮಾನ್ಯ ಸಭಾಧ್ಯಕ್ಷರು–ಲೋಕಸಭಾ ಸೆಕ್ರಟರಿ ಜನರಲ್ ಭೇಟಿ





ದಿನಾಂಕ: 21/11/2023 ರಂದು ಸನ್ಮಾನ್ಯ ಸಭಾಧ್ಯಕ್ಷರ ನೇತೃತ್ವದ ನಿಯೋಗವು ಲೋಕ ಸಭಾ ಸೆಕ್ರೆಟರಿ ಜನರಲ್ ರವರಾದ ಶ್ರೀ ಉತ್ಪಲ್ ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿ ಲೋಕಸಭೆಯಲ್ಲಿ ಇ–ವಿಧಾನ್ ಪದ್ಧತಿಯನ್ನು ಜಾರಿಗೆ ತಂದಿರುವ ಹಾಗೂ ಕಾರ್ಯವೈಖರಿಯ ಬಗ್ಗೆ ಚರ್ಚಿಸಿದ ಸಂದರ್ಭ.

## ಸನ್ಮಾನ್ಯ ಸಭಾಧ್ಯಕ್ಷರು–ದೆಹಲಿ ವಿಧಾನಸಭಾಧ್ಯಕ್ಷರ ಭೇಟಿ








ದಿನಾಂಕ: 21.11.2023ರಂದು ಸನ್ಮಾನ್ಯ ಸಭಾಧ್ಯಕ್ಷರ ನೇತೃತ್ವದ ನಿಯೋಗವು ಕರ್ನಾಟಕ ವಿಧಾನಸಭೆ ಕಲಾಪಗಳನ್ನು ಡಿಜಿಟಲೀಕರಣಗೊಳಿಸಲು ಮತ್ತು ಕಾಗದ ರಹಿತ (ಎ–ಡಿಜಿಟಲ್ ಭವಿಷ್ಯ–ಇ–ವಿಧಾನ ಸಭೆ) ಆಗಿ ಪರಿವರ್ತಿಸಲು ಯೋಜನೆ ರೂಪಿಸುವ ನಿಮಿತ್ತ ದೆಹಲಿ ವಿಧಾನಸಭಾ ಸಭಾಧ್ಯಕ್ಷರಾದ ಶ್ರೀ ರಾಮ್ ನಿವಾಸ್ ಗೋಯೆಲ್ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ ಸಂದರ್ಭ.

## ಸನ್ಮಾನ್ಯ ಸಭಾಧ್ಯಕ್ಷರು–ಪಂಜಾಬ್ ವಿಧಾನಸಭೆ ಸಭಾಧ್ಯಕ್ಷರ ಭೇಟಿ






ದಿನಾಂಕ: 22.11.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಅವರ ನೇತೃತ್ವದ ನಿಯೋಗವು ಪಂಜಾಬ್ ವಿಧಾನಸಭಾಧ್ಯಕ್ಷರಾದ ಶ್ರೀ ಎಸ್.ಕುಲ್ತಾರ್ ಸಿಂಗ್ ಸಂಧ್ವಾನ್ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಿ, ಪಂಜಾಬ್ ವಿಧಾನಸಭೆಯಲ್ಲಿ ಮೊದಲ ಬಾರಿಗೆ ಜಾರಿಗೆ ತಂದ ರಾಷ್ಟ್ರೀಯ ಇ–ವಿಧಾನ ಕುರಿತು ನಡೆದ ಸಭೆ.

## ಸನ್ಮಾನ್ಯ ಸಭಾಧ್ಯಕ್ಷರು– ಉತ್ತರ ಪ್ರದೇಶದ ವಿಧಾನಸಭೆ ಸ್ಪೀಕರ್ ಭೇಟಿ






ದಿನಾಂಕ: 22.11.2023 ರಂದು ಕರ್ನಾಟಕ ವಿಧಾನ ಸಭಾಧ್ಯಕ್ಷರ ಹಾಗೂ ಅವರ ನೇತೃತ್ವದ ನಿಯೋಗವು ಉತ್ತರ ಪ್ರದೇಶ ವಿಧಾನಸಭೆಯ ಗೌರವಾನ್ವಿತ ಸ್ಪೀಕರ್ ಶ್ರೀ ಸತೀಶ್ ಮಹಾನಾ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿದ ಸಂದರ್ಭ.

## ಸನ್ಮಾನ್ಯ ಸಭಾಧ್ಯಕ್ಷರು– ಹಿಮಾಚಲ ಪ್ರದೇಶ ವಿಧಾನಸಭೆ ಸಭಾಧ್ಯಕ್ಷರ ಭೇಟಿ










ದಿನಾಂಕ: 23.11.2023 ರಂದು ಕರ್ನಾಟಕ ವಿಧಾನ ಸಭಾಧ್ಯಕ್ಷರು ಹಾಗೂ ಅವರ ನೇತೃತ್ವದ ನಿಯೋಗವು ಹಿಮಾಚಲ ಪ್ರದೇಶ ವಿಧಾನಸಭೆಯ ಗೌರವಾನ್ವಿತ ಸಭಾಧ್ಯಕ್ಷರಾದ ಶ್ರೀ ಕುಲ್‌ದೀಪ್ ಸಿಂಗ್ ಪಥಾನಿಯ ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಿಧಾನ ಸಭೆ ಸಭಾಂಗಣಕ್ಕೆ ಭೇಟಿ ನೀಡಿ ಸಭೆ ನಡೆಸಿ ಚರ್ಚಿಸಿದ ಸಂದರ್ಭ.

## ಸನ್ಮಾನ್ಯ ಸಭಾಧ್ಯಕ್ಷರು–ಹಿಮಾಚಲ ಪ್ರದೇಶದ ವಿಧಾನಸಭೆ ಅಧ್ಯಕ್ಷರು ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ









## ಮೇಘಾಲಯ ರಾಜ್ಯದ ಗ್ರಂಥಾಲಯ ಸಮಿತಿ–ಸನ್ಮಾನ್ಯ ಸಭಾಪತಿಯವರ ಭೇಟಿ







ದಿನಾಂಕ: 23.11.2023 ರಂದು ಗೌರವಾನ್ವಿತ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ ಅವರನ್ನು ಮೇಘಾಲಯ ರಾಜ್ಯದ ಗ್ರಂಥಾಲಯ ಸಮಿತಿ ನಿಯೋಗ ಭೇಟಿಯಾಗಿ ಸನ್ಮಾನಿಸಿ ಶುಭ ಕೋರಿದರು. ತಾವು ಬಂದ ಉದ್ದೇಶದ ಕುರಿತು ಅಧ್ಯಯನದ ಬಗ್ಗೆ ಸಭಾಪತಿ ಅವರ ಗಮನಕ್ಕೆ ತಂದರು. ಈ ಸಂದರ್ಭದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಕರ್ನಾಟಕ ವಿಧಾನಪರಿಷತ್ತಿನ ಶತಮಾನದ ಇತಿಹಾಸ ನಡೆದು ಬಂದ ದಾರಿ ಕುರಿತು ಸುದೀರ್ಘವಾಗಿ ವಿವರಿಸಿದರು. ಕರ್ನಾಟಕದಲ್ಲಿರುವ ಮೇಲ್ಮನೆ ಕೆಳಮನೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ನಿಯೋಗಕ್ಕೆ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯಕಲಾಪಗಳು ನಡೆಯುವ ಸಭಾಂಗಣದ ಕುರಿತು ಮಾಹಿತಿ ನೀಡಿ ಸಮಗ್ರವಾಗಿ ವಿವರಿಸಿದರು. ಮೇಘಾಲಯದ ಗ್ರಂಥಾಲಯ ಸಮಿತಿ ನಿಯೋಗವನ್ನು ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ಅವರು ಪರಿಷತ್ತಿನ ಪರವಾಗಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಮುಂತಾದವರು ಉಪಸ್ಥಿತರಿದ್ದರು.

## ಸನ್ಮಾನ್ಯ ಸಭಾಪತಿಗಳು–ಪುಸ್ತಕ ಬಿಡುಗಡೆ ಸಮಾರಂಭ



ದಿನಾಂಕ: 26.11.2023 ರಂದು ಸಿರುಗುಪ್ಪ ತಾಲೂಕಿನ ಸಿರಿಗೇರಿ ಹೋಬಳಿ ಗ್ರಾಮದಲ್ಲಿ ಸಿರಿಗೇರಿಯ ಅನ್ನಪೂರ್ಣ ಪ್ರಕಾಶನದವರು ಹಿರಿಯ ಚಿಂತಕ ಬರಹಗಾರರ ವಿವಿಧ ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಲೇಖಕರಾದ ಡಾ॥ ಈಶ್ವರ್ ದೈತೋಟರವರು ರಚಿಸಿದ “ವಿಧಾನಮಂಡಲ ವರದಿಗಾರಿಕೆ” ಪುಸ್ತಕವನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಬಿಡುಗಡೆ ಮಾಡಿದರು.

## ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ– ಶುಭ ಹಾರೈಕೆ



ಹಿರಿಯ ಐಎಎಸ್ ಅಧಿಕಾರಿ ರಜನೀಶ್ ಗೋಯಲ್ ಅವರು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿ ನೇಮಕಗೊಂಡ ನಂತರ ಮೊದಲ ಬಾರಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ಅವರನ್ನು ಭೇಟಿಯಾಗಿ ಕುಶಲೋಪರಿಯನ್ನ ಹಂಚಿಕೊಂಡು ಸಭಾಪತಿಗಳಿಗೆ ಗೌರವ ಅರ್ಪಿಸಿದರು. ಆ ಸಂದರ್ಭದಲ್ಲಿ ರಜನೀಶ್ ಗೋಯಲ್ ಅವರನ್ನು ಸಭಾಪತಿಗಳು ಅಭಿನಂದಿಸಿ ಶುಭಕೋರಿದರು.

## ಬೆಂಗಳೂರಿನ ಕಂಬಳ ಕಾರ್ಯಕ್ರಮ









ದಿನಾಂಕ: 26.11.2023 ರಂದು ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ನಡೆದ ತುಳುನಾಡಿನ ಜನಪ್ರಿಯ ಕ್ರೀಡೆ ಕಂಬಳ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಉಪಸ್ಥಿತರಿದ್ದರು.

# ಡಾ: ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಕಾರ್ಯಕ್ರಮ








ದಿನಾಂಕ: 02.12.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಲೋಕ ನಾಯಕ ಡಾ: ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಅಭಿನಂದನಾ ಸಮಿತಿ ವತಿಯಿಂದ ಹಮ್ಮಿಕೊಂಡ ಅಖಿಲ ಭಾರತ ವೀರಶೈವ ಲಿಂಗಾಯುತ ಮಹಾಸಭಾ(ರಿ) ಡಾ:ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭ ಹಾರೈಸಿದರು.

## ಯುನೈಟೆಡ್ ಅರಬ್ ಎಮಿರೇಟ್ಸ್‌ನ 52ನೇ ಯೂನಿಯನ್ ಡೇ ಕಾರ್ಯಕ್ರಮ







ದಿನಾಂಕ: 02.12.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಯುನೈಟೆಡ್ ಅರಬ್ ಎಮಿರೇಟ್ಸ್‌ನ 52ನೇ ಯೂನಿಯನ್ ಡೇ ಕಾರ್ಯಕ್ರಮದಲ್ಲಿ ಇಂಡಿಯನ್ ಗ್ರ್ಯಾಂಡ್ ಮುಫ್ತಿ ಸುಲ್ತಾನುಲ್ ಉಲಮಾ ಎ ಪಿ ಅಬೂಬಕ್ಕರ್ ಮುಸ್ಲಿಯಾರ್ ಹಾಗೂ ಪ್ರತಿಷ್ಠಿತ ಲುಲು ಸಂಸ್ಥೆಯ ಮಾಲೀಕರಾದ ಯೂಸುಫ್ ಆಲಿ ರವರೊಂದಿಗೆ ಭಾಗವಹಿಸಿ ಶುಭ ಹಾರೈಸಿದರು.

## ಶಾಶ್ವತ ವಿದ್ಯುತ್ತೀಕರಣ ಉದ್ಘಾಟನಾ ಕಾರ್ಯಕ್ರಮ





ದಿನಾಂಕ: 04.12.2023 ರಂದು ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನದ ಮೊದಲ ದಿನ ಸೋಮವಾರ ಸುವರ್ಣಸೌಧದಲ್ಲಿ ಸಂಜೆ ನಡೆದ ಶಾಶ್ವತ ವಿದ್ಯುತ್ತೀಕರಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಸನ್ಮಾನ್ಯ ಶ್ರೀ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಕಾರ್ಯಕ್ರಮ ಉದ್ಘಾಟಿಸಿ ಸುವರ್ಣಸೌಧಕ್ಕೆ ಅಲಂಕರಿಸಿದ ವಿದ್ಯುತ್ ಅಲಂಕಾರ ನೋಡಿ ಸಂತೋಷಪಟ್ಟರು. ಸಮಾರಂಭದಲ್ಲಿ ಘನ ಉಪಸ್ಥಿತಿ ವಹಿಸಿದ್ದ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಹೊರಟ್ಟಿ, ಸಭಾಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಟಿ.ಖಾದರ್ ಕಾರ್ಯಕ್ರಮದ ಘನತೆ ಹೆಚ್ಚಿಸಿದರು. ಸಮಾರಂಭದಲ್ಲಿ ಹಲವಾರು ಹಿರಿಯ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಿರಿಯ ಅಧಿಕಾರಿಗಳು ಸೇರಿದಂತೆ ಹಲವಾರು ಗಣ್ಯ ಮಾನ್ಯರು ಉಪಸ್ಥಿತರಿದ್ದರು.

## ಸಮಯಕ್ಕೆ ಸರಿಯಾಗಿ ಅಧಿವೇಶನಕ್ಕೆ ಹಾಜರಾದ ಶಾಸಕರುಗಳಿಗೆ ಬಹುಮಾನ













ದಿನಾಂಕ: 06.12.2023 ರಂದು ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿ ಘೋಷಿಸಿದಂತೆ ಸಮಯಕ್ಕೆ ಸರಿಯಾಗಿ ಅಧಿವೇಶನಕ್ಕೆ ಹಾಜರಾದ ಮೊದಲ 25 ಶಾಸಕರುಗಳಿಗೆ ರಾಷ್ಟ್ರ ಮತ್ತು ರಾಜ್ಯ ಲಾಂಛನವಿರುವ ವಿಶಿಷ್ಟವಾಗಿ ತಯಾರಿಸಿದ ಕಪ್ ಮತ್ತು ಸಾಸರ್‌ನ್ನು ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್‌ರವರು ಬಹುಮಾನವಾಗಿ ವಿತರಿಸಿದರು.

# ಡಾ॥ ಬಿ.ಆರ್.ಅಂಬೇಡ್ಕರ್ ಪತ್ರಿಮೆಗೆ ಮಾಲಾರ್ಪಣೆ






ದಿನಾಂಕ: 07/12/2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಬೆಳಗಾವಿ ಸುವರ್ಣ ಸೌಧದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ರವರ ಜೊತೆಗೂಡಿ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

## ಸನ್ಮಾನ್ಯ ಸಭಾಪತಿಗಳಿಗೆ ಸ್ವಾಗತ



ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಯುಎಇ ಘಟಕದ ವತಿಯಿಂದ ನಡೆಯುವ ದುಬೈ ಗಡಿನಾಡ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ದುಬೈಗೆ ಆಗಮಿಸಿದ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿಯವರನ್ನು ದುಬೈ ವಿಮಾನ ನಿಲ್ದಾಣದಲ್ಲಿ ಅಕಾಡೆಮಿ ಅಧ್ಯಕ್ಷ ನ್ಯಾಯವಾದಿ ಇಬ್ರಾಹಿಂ ಖಲೀಲ್ ಅರಿಮಲೆ, ಪ್ರಧಾನ ಕಾರ್ಯದರ್ಶಿ ಅಮರದೀಪ ಕಲ್ಲೂರಾಯ, ಕೋಶಾಧಿಕಾರಿ ಇಬ್ರಾಹಿಂ ಬಾಜೂರಿ, ಸಂಘಟಕರಾದ ಝುಡ್ಎಕಯ್ಯಾರ್, ವಿಜಯಕುಮಾರ ಶೆಟ್ಟಿ ಗಾಣದ ಮೂಲೆ ಮಜಿಬೈಲು, ಎಸ್ಆರ್.ಸುಬ್ಬಯ್ಯಕಟ್ಟೆ ಮುಂತಾದವರು ಸ್ವಾಗತಿಸಿದರು.

## ವುಡ್ಲೆಮ್ ಪಾರ್ಕ್ ಶಾಲಾ ಆವರಣದಲ್ಲಿ ಗಡಿನಾಡು ರತ್ನ ಪ್ರಶಸ್ತಿ ಪ್ರಧಾನ ಸಮಾರಂಭ







ದಿನಾಂಕ: 10.12.2023 ರಂದು ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಯು.ಎ.ಇ ಘಟಕದ ವತಿಯಿಂದ ವುಡ್ಲೆಮ್ ಪಾರ್ಕ್ ಶಾಲಾ ಆವರಣದಲ್ಲಿ ಆಯೋಜಿಸಿದ್ದ ದುಬೈ ಗಡಿನಾಡ ಉತ್ಸವ ಹಾಗೂ ಗಡಿನಾಡು ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಗತ್ತಿನಾದ್ಯಂತ ಕನ್ನಡಿಗರು ಆಯಾ ನಾಡಿನಲ್ಲಿ ಮನೆ ಮಾತಾಗುವ ಮೂಲಕ ಕನ್ನಡದ ಸಿರಿಯನ್ನು ಹೆಚ್ಚಿಸಿದ್ದಾರೆ. ಅದೇ ರೀತಿ ದುಬೈನಲ್ಲಿಯೂ ಸಾಕಷ್ಟು ಕನ್ನಡಿಗರು ನೆಲೆಯೂರುವ ಮೂಲಕ ಕನ್ನಡದ ಕಂಪನ್ನು ಹರಡಿ ಕನ್ನಡಾಭಿಮಾನ ಮೆರೆದಿದ್ದಾರೆ ಎಂದು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ತಮ್ಮ ಮನದಾಳದ ಮಾತನ್ನು ಹೇಳಿದರು.


## ಸುವರ್ಣ ಕರ್ನಾಟಕ ಸಂಭ್ರಮಾಚರಣೆ












ದಿನಾಂಕ: 12.12.2023 ರಂದು ಕರ್ನಾಟಕ ವಿಧಾನ ಮಂಡಲ ವತಿಯಿಂದ ಸುವರ್ಣ ಕರ್ನಾಟಕ ಸಂಭ್ರಮಾಚರಣೆಯ ಸವಿನೆನಪಿನಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ, ವಿಧಾನಮಂಡಲದ ಮಾಜಿ ಸಭಾಧ್ಯಕ್ಷರು ಹಾಗೂ ಮಾಜಿ ಸಭಾಪತಿಗಳಿಗೆ ಸನ್ಮಾನ ಸಮಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರು ಉದ್ಘಾಟನೆ ಮಾಡಿದರು. ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್ ಹೊರಟ್ಟಿ, ಶ್ರೀ ಸಿದ್ದರಾಮಯ್ಯ ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಡಿ.ಕೆ.ಶಿವಕುಮಾರ್, ಮಾನ್ಯ ಉಪಮುಖ್ಯಮಂತ್ರಿಗಳು, ಮಾನ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ ಪಾಟೀಲ ಹಾಗೂ ಇತರ ಶಾಸಕರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮಾಜಿ ವಿಧಾನ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಹಾಗೂ ಮಾಜಿ ಸಭಾಪತಿಗಳು ಸನ್ಮಾನ ಸ್ವೀಕರಿಸಿದರು.

## ಸದನದ ಕಾರ್ಯಕಲಾಪಗಳ ಸಭೆ







ದಿನಾಂಕ: 13.12.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ವಿಪಕ್ಷ ನಾಯಕರು, ಸಚಿವ ಸಂಪುಟದ ಸಚಿವರು ಹಾಗೂ ಕೆಲ ಶಾಸಕರೊಂದಿಗೆ ಸದನದ ಕಾರ್ಯ ಕಲಾಪಗಳ ಕುರಿತು ಸಭೆ ನಡೆಸಿದ ಸಂದರ್ಭ.

## ಸುವರ್ಣ ಕರ್ನಾಟಕ ಸಂಭ್ರಮಚರಣೆಗೆ ಕಾರ್ಯಕ್ರಮದಲ್ಲಿ ಮಾಜಿ ಸಭಾಪತಿಗಳು ಹಾಗೂ ಸಭಾಧ್ಯಕ್ಷರುಗಳಿಗೆ ಸನ್ಮಾನ











ಕರ್ನಾಟಕ ವಿಧಾನ ಮಂಡಲ


ಕರ್ನಾಟಕ ವಿಧಾನ ಮಂಡಲ


ಕರ್ನಾಟಕ ವಿಧಾನ ಮಂಡಲ


ಕರ್ನಾಟಕ ವಿಧಾನ ಮಂಡಲ




ಕರ್ನಾಟಕ ವಿಧಾನ ಮಂಡಲ





ದಿನಾಂಕ: 13.12.2023 ರಂದು ಸನ್ಮಾನ್ಯ ಸಭಾಧ್ಯಕ್ಷರು, ಸನ್ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತು ಅವರೊಂದಿಗೆ ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ "ಕರ್ನಾಟಕ" ನಾಮಕರಣದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಧಾನ ಮಂಡಲದ ಮಾಜಿ ಸಭಾಪತಿಗಳು ಹಾಗೂ ಸಭಾಧ್ಯಕ್ಷರುಗಳನ್ನು ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರುಗಳ ಉಪಸ್ಥಿತಿಯಲ್ಲಿ ಸನ್ಮಾನಿಸಿದ ಸಂದರ್ಭ.

## "ಸೈಬರ್ ಸೇಫ್ ಗರ್ಲ್" ನ ಕನ್ನಡ ಆವೃತ್ತಿ ಬಿಡುಗಡೆ ಸಮಾರಂಭ





ದಿನಾಂಕ: 14.12.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಡಿಜಿಟಲ್ ಸಾಕ್ಷರತೆ ಮತ್ತು ಸೈಬರ್ ಸುರಕ್ಷತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಡಾ. ಅನಂತ್ ಪ್ರಭು ಅವರು ಬರೆದಿರುವ "ಸೈಬರ್ ಸೇಫ್ ಗರ್ಲ್" ನ ಕನ್ನಡ ಆವೃತ್ತಿಯನ್ನು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರು, ಸರ್ಕಾರಿ ಮುಖ್ಯ ಸಚೇತಕರೊಂದಿಗೆ ಜತೆಗೂಡಿ ಅನಾವರಣಗೊಳಿಸಿದರು.

# ಕಬ್ಬಡಿ ಪಂದ್ಯಾಟದ ವಿಜೇತರಿಗೆ ಸನ್ಮಾನ












ದಿನಾಂಕ: 15.12.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಅಖಿಲ ಭಾರತ ವಿಶ್ವ ವಿದ್ಯಾನಿಲಯಗಳ ಕ್ರೀಡಾ ಕೂಟದ ಕಬಡ್ಡಿ ಪಂದ್ಯಾಟದಲ್ಲಿ ವಿಜೇತರಾದ ಮಂಗಳೂರು ವಿಶ್ವವಿದ್ಯಾನಿಲಯದ ತಂಡವನ್ನು ಸನ್ಮಾಸಿದರು.

## ವಿಸ್ತಾರ ನ್ಯೂಸ್ ಬೆಸ್ಟ್ ಟೀಚರ್ ಅವಾರ್ಡ್–2023







ದಿನಾಂಕ: 22.12.2023 ರಂದು ವಿಸ್ತಾರ ನ್ಯೂಸ್ ವತಿಯಿಂದ "ವಿಸ್ತಾರ ನ್ಯೂಸ್ ಬೆಸ್ಟ್ ಟೀಚರ್ ಅವಾರ್ಡ್ 2023"ನೇ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಹಾಗೂ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಶ್ರೀ ಮಧು ಬಂಗಾರಪ್ಪ ರವರು ಶಿಕ್ಷಕರಿಗೆ ಬೆಸ್ಟ್ ಟೀಚರ್ ಪ್ರಶಸ್ತಿ ಪ್ರದಾನ ಮಾಡಿದರು. ಮಾಜಿ ಶಾಸಕಿ ಶ್ರೀಮತಿ ತಾರಾ ಅನುರಾಧರವರು ಸಹ ಭಾಗವಹಿಸಿದ್ದರು.

## ಬಹರೈನ್‌ನಲ್ಲಿರುವ ಕನ್ನಡ ಭವನಕ್ಕೆ ಸನ್ಮಾನ್ಯ ಸಭಾಧ್ಯಕ್ಷರು





ದಿನಾಂಕ: 22.12.2023 ರಂದು ಸನ್ಮಾನ್ಯ ಸಭಾಧ್ಯಕ್ಷರು ಕನ್ನಡ ಸಂಘದ ಬಹರೈನ್‌ನಲ್ಲಿರುವ ಕನ್ನಡ ಭವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರಾದ ಅಮರನಾಥ್ ರೈ ಹಾಗೂ ಸಮಿತಿಯ ಸದಸ್ಯರು ಸನ್ಮಾನಿಸಿದರು.

## ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ ಸ್ಮರಣಾರ್ಥ 'ಅವ್ವ' ನ – ವಿಶೇಷ ಉಪನ್ಯಾಸ ಕಾರ್ಯಕ್ರಮ





ದಿನಾಂಕ: 25.12.2023 ರಂದು ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ–ಗದಗದಲ್ಲಿ ನಡೆದ ಲಿಂಗಾಯತ ಪ್ರಗತಿಶೀಲ ಸಂಘ ಹಾಗೂ ಅವ್ವ ಸೇವಾ ಟ್ರಸ್ಟ್, ಹುಬ್ಬಳ್ಳಿ ವತಿಯಿಂದ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ ಸ್ಮರಣಾರ್ಥ "ಅವ್ವ"ನ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯವನ್ನು ಪೂಜ್ಯ ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿರವರು ಭಾಗವಹಿಸಿದ್ದರು.

ಹುಬ್ಬಳ್ಳಿ ಸಂಘಟನೆ ಹೋರಾಟಗಳಿಂದಲೇ ಇಷ್ಟೊಂದು ಎತ್ತರಕ್ಕೆ ಬೆಳೆದ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿರವರು ಅವರು ಸಂಘಟನೆ ಹೋರಾಟಕ್ಕೆ ಕೈ ಜೋಡಿಸಿದ ಹಿಂದಿನ ಯಾವ ಸ್ನೇಹಿತರನ್ನು ಮರೆತಿಲ್ಲ ಸ್ನೇಹಕ್ಕೆ ಅವರು ನೀಡುವ ಬೆಲೆ ಬಹು ದೊಡ್ಡದು. ಹೀಗಾಗಿ ಇಷ್ಟೊಂದು ಎತ್ತರಕ್ಕೆ ಬೆಳೆಯಲು ಸಾಧ್ಯವಾಗಿದೆ.

## ಮಾನ್ಯ ಸಭಾಪತಿಗಳು ಸಂಘಟನಾ ಚತುರ ಕೆ.ವಿ.ರಾಯಚೂರ ಅವರ ನಿವಾಸಕ್ಕೆ ಭೇಟಿ



ದಿನಾಂಕ: 26.12.2023 ರಂದು ಸಂಘಟನಾ ಚತುರ ಕೆ.ವಿ.ರಾಯಚೂರ ಅವರ ಆರೋಗ್ಯ ಹಾಗೂ ಇನ್ನಿತರ ಕುಶಲೋಪಾದಿಗಳನ್ನು ವಿಚಾರಿಸಲು ರಾಯಚೂರ ಅವರ ನಿವಾಸಕ್ಕೆ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ತೆರಳಿ ನಾಲ್ಕು ದಶಕಗಳ ತಮ್ಮ ಒಡನಾಟ ಹೋರಾಟ ಭಿನ್ನಾಭಿಪ್ರಾಯಗಳು ವಿಭಿನ್ನ ಚಿಂತನೆಗಳು ಹೀಗೆ ಹಲವಾರು ಮಹತ್ವದ ಸಂಗತಿಗಳು ಕುರಿತು ತಾಸಿಗೂ ಹೆಚ್ಚು ಸಮಯ ಮಾತನಾಡಿದರು.

## 2. ದೆಹಲಿಯಲ್ಲಿ ಬೆಂಗಳೂರು ಕ್ಲಬ್‌ಗಳ ಅಧ್ಯಯನ

ರಾಜ್ಯದ ರಾಜಧಾನಿಯ ಕ್ಲಬ್‌ಗಳ ಕಾರ್ಯವೈಖರಿ ಪರಿಶೀಲಿಸಲು ರಚಿಸಲಾಗಿರುವ ವಿಧಾನಪರಿಷತ್ ವಿಶೇಷ ಸದನ ಸಮಿತಿ ದೆಹಲಿಗೆ ಅಧ್ಯಯನ ಪ್ರವಾಸ ಕೈಗೊಳ್ಳಲಿದೆ. ರಾಷ್ಟ್ರ ರಾಜಧಾನಿಯಲ್ಲಿರುವ ಸಾಂವಿಧಾನಿಕ ಕ್ಲಬ್ ಹಾಗೂ ಇಂಡಿಯಾ ಹ್ಯಾಬಿಟ್ಯಾಟ್ (ಅವಾಸಸ್ಥಾನ) ಸೆಂಟರ್‌ಗೆ ಭೇಟಿ ನೀಡಿ ವಸ್ತುಸ್ಥಿತಿ ಪರಾಮರ್ಶಿಸಲಿದೆ.

ಬೆಂಗಳೂರಿನ ಕ್ಲಬ್‌ಗಳಿಂದ ಕಾನೂನುಗಳು ಉಲ್ಲಂಘನೆ, ಅಕ್ರಮಗಳು ನಡೆದಿವೆ ಎಂಬ ದೂರುಗಳ ಬಗ್ಗೆ ವಿಧಾನ ಪರಿಷತ್ ಅಧಿವೇಶನದಲ್ಲಿ ಗಂಭೀರವಾಗಿ ಚರ್ಚೆಯಾಗಿತ್ತು. ಸದನದ ತೀರ್ಮಾನದಂತೆ ಎನ್.ರವಿಕುಮಾರ್ ಅಧ್ಯಕ್ಷತೆಯಲ್ಲಿ ವಿಶೇಷ ಸದನ ಸಮಿತಿ ಹಿಂದಿನ ಸರ್ಕಾರದ ಅವಧಿಯಲ್ಲಿ ರಚನೆಯಾಗಿದ್ದು, ಹೊಸ ಸರ್ಕಾರದ ಬಜೆಟ್ ಅಧಿವೇಶನದಲ್ಲಿ ಸಮಿತಿ ಅವಧಿಯನ್ನು ಮತ್ತೆ ವಿಸ್ತರಿಸಲಾಗಿದೆ. ಬೆಂಗಳೂರಿನ ವಿವಿಧ ಕ್ಲಬ್‌ಗಳು ಸಮಿತಿ ಭೇಟಿ ನೀಡಿ ಪರಿಶೀಲಿಸುವ ಜತೆಗೆ ಹಲವು ಸುತ್ತುಗಳ ಸಭೆ ನಡೆಸಿದ್ದು, ನಗರ ಮಧ್ಯ ಭಾಗದಲ್ಲಿರುವ ಬೆಂಗಳೂರು ಟರ್ಫ್ ಕ್ಲಬ್ ಬೇರೆಡೆ ಸ್ಥಳಾಂತರಿಸುವ ಬಗ್ಗೆ ಸಮಿತಿ ತಾತ್ಪೂರ್ತಿಕ ಒಪ್ಪಿಗೆ ನೀಡಿದೆ ಎಂದು ಹೇಳಲಾಗುತ್ತಿದೆ.

**ಆಧಾರ:** ವಿಜಯವಾಣಿ, ದಿನಾಂಕ: 25.10.2023

## 3. ಅಧಿವೇಶನದಲ್ಲಿ ಉಕ ಸಮಸ್ಯೆ ಚರ್ಚೆಗೆ ಆದ್ಯತೆ

ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ಚಳಿಗಾಲ ಅಧಿವೇಶನದಲ್ಲಿ ಬರ, ಉತ್ತರ ಕರ್ನಾಟಕ ಭಾಗದ ಸಮಸ್ಯೆ ಕುರಿತು ಚರ್ಚೆಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ವಿಧಾನ ಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ನಗರದ ಸುವರ್ಣ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಬಾರಿ ಅಧಿವೇಶನ ಮಾದರಿಯಾಗಬೇಕು ಎಂಬ ಆಶಯ ನಮ್ಮದಾಗಿದ್ದು, ವಿವಿಧ 10 ಸಮಿತಿಗಳ ರಚನೆ ಮಾಡುವಂತೆ ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಶಾಸಕರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ತಿಳಿಸಲಾಗಿದ್ದು, ಕಲಾಪ ವೀಕ್ಷಣೆಗೆ ಬರುವ ಜನಸಾಮಾನ್ಯರು ಹಾಗೂ ವಿದ್ಯಾರ್ಥಿಗಳಿಗೆ ಪ್ರವೇಶ ಪಾಸ್ ಸೇರಿ ಅಗತ್ಯ ವ್ಯವಸ್ಥೆ ಮಾಡಲಾಗುವುದು ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ ಮಾತನಾಡಿ, ಕೆಲ ಸಚಿವರಿಗೆ ಹಾಗೂ ಶಾಸಕರಿಗೆ ಬೆಳಗಾವಿಯಲ್ಲಿನ ಅಧಿವೇಶನ ಎಂದರೆ ಪ್ರತಿಭಟನೆ ಅಧಿವೇಶನ ಎಂಬ ಭಾವನೆ ಮೂಡಿದೆ. ಈ ಹಿನ್ನಲೆಯಲ್ಲಿ ರೈತರು, ನೌಕರರು ಸೇರಿ ಇನ್ನಿತರರ ಸಮಸ್ಯೆಗಳಿಗೆ ಅಧಿವೇಶನ ಮುಂಚಿತವಾಗಿ ಸಂಬಂಧಿಸಿದ ಅಧಿಕಾರಿಗಳು ಜೊತೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ಇದರಿಂದ ಪ್ರತಿಭಟನೆಗಳ ಸಂಖ್ಯೆ ಕಡಿಮೆಯಾಗಲಿದೆ ಎಂದು ತಿಳಿಸಿದರು.

ಅಧಿವೇಶನಕ್ಕೆ ಆಗಮಿಸುವ ಶಾಸಕರು, ಸಚಿವರ ವಸತಿಗಾಗಿ ಕೊಟ್ಯಂತರ ರೂ. ವೆಚ್ಚವಾಗುತ್ತಿದ್ದು, ಶಾಸಕ ಭವನ ನಿರ್ಮಾಣ ಮಾಡುವ ಕುರಿತು ಸರ್ಕಾರ ಶೀಘ್ರವೇ ಕ್ರಮ ಕೈಗೊಳ್ಳಲಿದೆ ಎಂಬ ನಂಬಿಕೆ ಇದೆ. ಸಕ್ಕರೆ ಆಯುಕ್ತಾಲಯ ಸೇರಿ ಹಲವು ಕಚೇರಿಗಳನ್ನು ಸುವರ್ಣ ವಿಧಾನಸೌಧದಲ್ಲಿ ಆರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

ಸುವರ್ಣಸೌಧದ ವಿಧಾನಸಭೆ ಸಭಾಂಗಣದಲ್ಲಿ ಹಲವು ಮಹನೀಯರ ಭಾವಚಿತ್ರಗಳ ಜೊತೆಗೆ ಸಾವರ್ಕರ್ ಭಾವಚಿತ್ರ ಕೂಡ ಅಳವಡಿಸಲಾಗಿದೆ. ಹಾಗಾಗಿ ಈ ಬಾರಿ ಚಳಿಗಾಲ ಅಧಿವೇಶನದಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ ಸಭಾಂಗಣದಲ್ಲಿ ಜವಾಹರಲಾಲ್ ನೆಹರು ಭಾವಚಿತ್ರ ಅಳವಡಿಸುವ ಕುರಿತು ಚರ್ಚಿಸಲಾಯಿತು.

**ಆಧಾರ:** ವಿಜಯವಾಣಿ, ದಿನಾಂಕ: 08.11.2023

## 4. ಶಾಸಕರಿಗೆ ಗಂಡ ಭೇರುಂಡ ಲಾಂಛನವುಳ್ಳ ಬ್ಯಾಡ್ಜ್ : ಖಾದರ್

ವಿಧಾನಸಭೆಯ ಅಧ್ಯಕ್ಷ ಯು.ಟಿ.ಖಾದರ್ ಈ ತೀರ್ಮಾನ ಕೈಗೊಂಡಿದ್ದಾರೆ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಪ್ರಮುಖರ ಜೊತೆ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗಿದೆ. ಒಬ್ಬ ಶಾಸಕರಿಗೆ ಒಂದು ಬ್ಯಾಡ್ಜ್ ವಿತರಿಸುವ ಪ್ರಸ್ತಾವ ಆರಂಭದಲ್ಲಿತ್ತು. ಈಗ ಶಾಸಕರ ಬೇಡಿಕೆಯಂತೆ ತಲಾ ಮೂರು ಬ್ಯಾಡ್ಜ್ ವಿತರಿಸಲು ತೀರ್ಮಾನಿಸಿರುತ್ತಾರೆ.

ಬಹುಮಾನವಾಗಿ ಕಪ್, ಸಾಸರ್ ಅಧಿವೇಶನದ ಅವಧಿಯಲ್ಲಿ ದಿನದಲ್ಲಿ ಮೊದಲಿಗರಾಗಿ ಸದನ ಪ್ರವೇಶಿಸುವ ಶಾಸಕರಿಗೆ ಬಹುಮಾನದ ರೂಪದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿಕೃತ ಲಾಂಛನಗಳನ್ನು ಅಚ್ಚು ಹಾಕಿಸಿದ ಕಪ್ ಮತ್ತು ಸಾಸರ್ ನೀಡಲು ವಿಧಾನಸಭೆಯ ಅಧ್ಯಕ್ಷ ಯು.ಟಿ.ಖಾದರ್ ನಿರ್ಧರಿಸಿದ್ದಾರೆ.

'ವಿಧಾನಸಭೆಯ ಕಳೆದ ಅಧಿವೇಶನದಲ್ಲಿ ಬಹುಮಾನದ ವಿಚಾರ ಪ್ರಕಟಿಸಿದ್ದೆ. ಕೆಲವು ಶಾಸಕರಿಗೆ 15, 12 ಹೀಗೆ ಹಲವು ಬಹುಮಾನ ವಿತರಿಸಬೇಕಿದೆ. ರಾಜಭವನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಲಾಂಛನವನ್ನು ಅಚ್ಚು ಹಾಕಿಸಿರುವ ವಿಶೇಷ ಕಪ್, ಸಾಸರ್‌ಗಳನ್ನು ನೋಡಿದ ಬಳಿಕ ಅದೇ ಮಾದರಿಯ ಬಹುಮಾನ ನೀಡಲು ನಿರ್ಧರಿಸಿದೆ' ಎಂದು ತಿಳಿಸಿರುತ್ತಾರೆ.

**ಆಧಾರ:** ಪ್ರಜಾವಾಣಿ, ದಿನಾಂಕ: 14.11.2023

## 5. ಶಿಕ್ಷಣ ನೀಡುವುದೇ ದೇಶ ಪ್ರೇಮ: ಸ್ಪೀಕರ್

ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಟ್ಟು ಅವರನ್ನು ದೇಶದ ಸಂಪತ್ತನ್ನಾಗಿ ರೂಪಿಸುವುದೇ ನಿಜವಾದ ದೇಶಪ್ರೇಮ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅಭಿಪ್ರಾಯಪಟ್ಟರು.

ಪಟೇಲ್ ಸಮೂಹ ಶಿಕ್ಷಣ ಸಂಸ್ಥೆ ಬೆಳ್ಳಂದೂರಿನ ಕರಿಯಮ್ಮನ ಅಗ್ರಹಾರದಲ್ಲಿರುವ ಪಟೇಲ್ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಥಮ ವರ್ಷದ ಕಾನೂನು ಕಾಲೇಜು ವಿದ್ಯಾರ್ಥಿಗಳ ಸ್ವಾಗತ ಸಮಾರಂಭ 'ಪ್ರಾರಂಭ' 2023–24' ಉದ್ಘಾಟಿಸಿ ಅವರು ಮಾತನಾಡಿದರು.

ಮೈಕ್ ಹಿಡಿದುಕೊಂಡು ಯಾರಿಗಾದರೂ ಬೈದ ಕೂಡಲೇ ದೇಶಪ್ರೇಮಿಯಾಗಲು ಸಾಧ್ಯವಿಲ್ಲ ಮಕ್ಕಳನ್ನು ಸಮಾನಾದ ಸಂಪತ್ತನ್ನಾಗಿ ರೂಪಿಸುವ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ವಿದ್ಯಾರ್ಥಿಗಳ ಭವಿಷ್ಯವನ್ನು ಹಸನ್ನು ಮಾಡಲು ಸಂಕಲ್ಪ ಮಾಡಿ ಯಶಸ್ಸು ಗಳಿಸುವುದೇ ನಿಜವಾದ ದೇಶಪ್ರೇಮ ಎಂದರು.

ವಿಶ್ವದಲ್ಲೇ ಭಾರತ ಆರ್ಥಿಕ, ಸಾಂಸ್ಕೃತಿಕವಾಗಿ ಮೊದಲ ಸ್ಥಾನಕ್ಕೆ ಬರಬೇಕೆಂಬುದು ಪ್ರತಿಯೊಬ್ಬ ಭಾರತೀಯನ ಕನಸು. ದೇಶ ಬಲಿಷ್ಠವಾಗಲು ತರಗತಿಯಲ್ಲಿ ಕುಳಿತ ಮತ್ತು ಆಟದ ಮೈದಾನದಲ್ಲಿ ಕ್ರೀಡಾ

ಚಟುವಟಿಕೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳು ಬಲಿಷ್ಠರಾಗಬೇಕು. ಅದಕ್ಕಾಗಿ ಶಿಕ್ಷಣ ಸಂಸ್ಥೆಗಳು ದೇಶದ ಭವಿಷ್ಯದ ರೂಪಿಸುವಂತ ಅತ್ಯುತ್ತಮ ವಿದ್ಯಾರ್ಥಿಗಳನ್ನು ಸದೃಢರನ್ನಾಗಿ ಮಾಡಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪಟೇಲ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಆರ್.ಸಂಪತ್ ಕುಮಾರ್, ಆಶಾ ಸಂಪತ್ ಕುಮಾರ್, ಲೇಖಕ ಜಿ.ಅನಂತ ಪ್ರಭು, ಪಿಜಿಐ ವ್ಯವಸ್ಥಾಪಕ ನಿರ್ದೇಶಕಿ ಡಾ। ಅರ್ಪಿತಾ ಆದಿತ್ಯ, ಪಿಜಿಐ ನಿರ್ದೇಶಕ (ಕಾರ್ಯಚರಣೆ) ಆದಿತ್ಯ ಶರ್ಮಾ, ಪಿಸಿಎ ಡೀನ್ ಕೆ. ಶರತ್ಚಂದ್ರ ಕುಮಾರ್, ಪಟೇಲ್ ಕಾನೂನು ಕಾಲೇಜು ಪ್ರಾಚಾರ್ಯ ಪ್ರೊ. ಕೆ. ಮೈಯಿಲ್ಸಾಮಿ, ನಾಸೀರ್ ಇನ್ನಿತರರು ಉಪಸ್ಥಿತರಿದ್ದರು.

**ಆಧಾರ:** ಕನ್ನಡಪ್ರಭ, ದಿನಾಂಕ: 16.11.2023

## 6. ಆರ್.ಅಶೋಕ್ ವಿಪಕ್ಷ ಸಾಮ್ರಾಟ್

ಆರು ತಿಂಗಳಿಂದ ಖಾಲಿ ಉಳಿದಿದ್ದ ವಿಧಾನಸಭೆ ಪ್ರತಿಪಕ್ಷ ನಾಯಕನ ಸ್ಥಾನವನ್ನು ಬಿಜೆಪಿ ಭರ್ತಿ ಮಾಡಿದ್ದು, ಅಳೆದು ತೂಗಿ ಕೈಗೊಂಡ ನಿರ್ಧಾರದಿಂದ ಮಾಜಿ ಡಿಸಿಎಂ ಆರ್.ಅಶೋಕಗೆ ವಿಧಾನಸಭೆಯ 'ಛಾಯ ಮುಖ್ಯಮಂತ್ರಿ' ಆಗುವ ಅವಕಾಶ ಒಲಿದು ಬಂದಿದೆ.

ಖಾಸಗಿ ಹೋಟೆಲ್‌ನಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಒಮ್ಮತದ ಅಭಿಪ್ರಾಯ ರೂಪದಲ್ಲಿ ಅರವತ್ತಾರರ ಹರೆಯದ ಅಶೋಕ್ ಹೆಸರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಅಂತಿಮಗೊಳಿಸಲಾಯಿತು. ಮಾಜಿ ಸಚಿವ ಸುನಿಲ್ ಕುಮಾರ್ ಹಾಗೂ ಡಾ.ಸಿ.ಎಸ್.ಅಶ್ವತ್‌ನಾರಾಯಣ ಅವರಿಬ್ಬರು ಆರ್.ಅಶೋಕ್ ಹೆಸರನ್ನು ಪ್ರಸ್ತಾಪಿಸಿದರೆ, ಸಭೆ ಅನುಮೋದಿಸಿತು. ಈ ಪ್ರಕ್ರಿಯೆಯ ವೀಕ್ಷಕರಾಗಿ ಆಗಮಿಸಿದ್ದ ಕೇಂದ್ರ ಸಚಿವ ನಿರ್ಮಲಾ ಸೀತಾರಾಮನ್, ದುಷ್ಯಂತ ಕುಮಾರ್ ಗೌತಮ್ ಸಭೆಯ ತೀರ್ಮಾನವನ್ನು ವರಿಷ್ಠರ ಅನುಮತಿಗೆ ಕಳುಹಿಸಿದರು. ಹಿರಿತನ, ಸತತ 7 ಬಾರಿ ಆಯ್ಕೆಯಾಗಿರುವುದು ಮತ್ತು ಶಾಸಕರ ಅಭಿಪ್ರಾಯ ಪರಿಗಣಿಸಿ ಅಶೋಕ್ ಅವರನ್ನು ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಪರಿಗಣಿಸಲಾಯಿತು ಎಂದು ಪಕ್ಷದ ನಾಯಕನ ಸ್ಥಾನಕ್ಕೆ ಪರಿಗಣಿಸಲಾಯಿತು ಎಂದು ಪಕ್ಷದ ಹಿರಿಯ ವಕ್ತಾರ ಎಮ್.ಜಿ.ಮಹೇಶ್ ಮಾಹಿತಿ ನೀಡಿದರು. ಬೆಂಗಳೂರಿನ ಪದ್ಮನಾಭನಗರ ಕ್ಷೇತ್ರವನ್ನು ಪ್ರತಿನಿಧಿಸುವ ಅಶೋಕ್ ಗೃಹ, ಕಂದಾಯ, ಸಾರಿಗೆ, ಆರೋಗ್ಯ ಇಲಾಖೆ ಜವಾಬ್ದಾರಿ ನಿರ್ಧರಿಸಿದ್ದಾರೆ. ಡಿಸಿಎಂ ಆಗಿಯೂ ಕಾರ್ಯನಿರ್ವಹಿಸಿದ್ದಾರೆ.

**ಆಧಾರ:** ವಿಜಯವಾಣಿ, ದಿನಾಂಕ: 18.11.2023

## 7. ಜತ್ತಿ ಕನಸು ಸಿಎಂಆರ್ ಸಂಸ್ಥೆ ಈಡೇರಿಸಿದೆ

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು 32ನೇ ಸಂಸ್ಥಾಪಕರ ದಿನಾಚರಣೆಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾರ್ಜನೆ ಮಾಡುವುದು ಬಹಳ ಶ್ರೇಷ್ಠವಾದ ಕೆಲಸ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಶಿಕ್ಷಣಾವಂತರಾಗಬೇಕೆಂಬ ಮಹದಾಶದೊಂದಿಗೆ ಪ್ರಾಥಮಿಕ

ಹಂತದಲ್ಲಿ ಆರಂಭವಾದ ಸಿಎಂಆರ್ ಶಿಕ್ಷಣ ಸಂಸ್ಥೆ ಇಂದು ವಿಶ್ವವಿದ್ಯಾಲಯ ಮಟ್ಟಕ್ಕೆ ಬೆಳೆದು ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡುತ್ತಿದೆ. ಸಮಾಜದ ಪ್ರತಿಯೊಬ್ಬರಿಗೂ ಶಿಕ್ಷಣ ದೊರಕಬೇಕೆಂಬುದು ಮಾಜಿ ಉಪರಾಷ್ಟ್ರಪತಿಗಳು ಹಾಗೂ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಬಿ.ಡಿ.ಜತ್ತಿ ಯವರ ಕನಸಾಗಿತ್ತು. ಅದರಂತೆ ಅವರು ಶಿಕ್ಷಣ ನೀಡಲು ಖಾಸಗಿ ಶಾಲೆಗಳಿಗೂ ಅವಕಾಶ ಮಾಡಿಕೊಟ್ಟರು ಎಂದು ಶ್ಲಾಘಿಸಿದರು. ಸಂಸ್ಥಾಪಕರ ದಿನದ ಸ್ಮರಣಾರ್ಥ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಒಟ್ಟು 7 ಕೋಟಿ ಹಣವನ್ನು ಪ್ರತಿಭಾ ಪುರಸ್ಕಾರ ಹಾಗೂ ಶಿಷ್ಯ ವೇತನ ನೀಡಲಾಯಿತು.

**ಆಧಾರ:** ವಿಶ್ವವಾಣಿ, ದಿನಾಂಕ: 20.11.2023

## 8. ವಿದ್ಯಾರ್ಜನೆ ಶ್ರೇಷ್ಠ ಕಾರ್ಯ

ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾರ್ಜನೆ ಮಾಡುವುದು ಶ್ರೇಷ್ಠ ಕೆಲಸ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಹೇಳಿದರು.

ಕಲ್ಯಾಣನಗರದ ಎಚ್‌ಆರ್‌ಬಿಆರ್ ಬಡಾವಣೆಯಲ್ಲಿರುವ ಸಿಎಂಆರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಸಭಾಂಗಣದಲ್ಲಿ ನಡೆದ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ 32ನೇ ಸ್ಥಾಪಕರ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಶಿಕ್ಷಣವಂತರಾಗಬೇಕೆಂಬ ಮಹದಾಶಯದೊಂದಿಗೆ ಪ್ರಾಥಮಿಕ ಹಂತದಲ್ಲಿ ಆರಂಭವಾದ ಸಿಎಂಆರ್ ಶಿಕ್ಷಣ ಸಂಸ್ಥೆ ಇಂದು ವಿಶ್ವವಿದ್ಯಾಲಯ ಮಟ್ಟಕ್ಕೆ ಬೆಳೆದ ಶಿಕ್ಷಣ ಕ್ಷೇತ್ರಕ್ಕೆ ಮಹತ್ವ ಕೊಡುಗೆ ನೀಡುತ್ತಿದೆ ಎಂದರು.

ಸಿಎಂಆರ್ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ.ಕೆ.ಸಿ.ರಾಮಮೂರ್ತಿ ಮಾತನಾಡಿ, ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡಬೇಕೆಂಬ ಉದ್ದೇಶದಿಂದ ಸ್ಥಾಪನೆಯಾದ ಸಿಎಂಆರ್ ಶಿಕ್ಷಣ ಸಂಸ್ಥೆಗಳು ಪ್ರತಿವರ್ಷ ಸ್ಥಾಪಕರ ದಿನದ ಸ್ಮರಣಾರ್ಥ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಹಾಗೂ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವ ಅರ್ಥಪೂರ್ಣ ಕಾರ್ಯಕ್ರಮವನ್ನು ಕಳೆದ 32 ವರ್ಷಗಳಿಂದ ಮುನ್ನೆಡಿಸಿಕೊಂಡು ಬರುತ್ತಿರುವುದು ಎಂದರು ಕುಲಾಧಿಪತಿ ಡಾ.ಸಬಿತಾ ರಾಮಮೂರ್ತಿ, ಟ್ರಸ್ಟಿ ಕೆ.ಸಿ.ರಾಜುರೆಡ್ಡಿ ಕಾರ್ಯದರ್ಶಿ ಕೆ.ಸಿ.ಜಗನ್ನಾಥ ರೆಡ್ಡಿ, ಜಯದೀಪ್, ಡಾ.ಎಚ್.ಬಿ.ರಾಘವೇಂದ್ರ ಮತ್ತಿತರರಿದ್ದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 21.11.2023

## 9. ಸದನದ ಹೊರಗಿನ ಪ್ರತಿಭಟನೆಗಳನ್ನು ತಗ್ಗಿಸಿ

ಅಧಿವೇಶನದಲ್ಲಿ ಜನ ಸಾಮಾನ್ಯರ ಹಾಗೂ ಜ್ವಲಂತ ಸಮಸ್ಯೆಗಳು ಚರ್ಚೆಯಾಗಿ ಪರಿಹಾರ ಆಗಬೇಕಿದ್ದರೆ, ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳು ಹೊರಗೆ ಪ್ರತಿಭಟಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಅಧಿವೇಶನದ ಅತ್ಯಮೂಲ್ಯ ಸಮಯವು ಕೇವಲ ಪ್ರತಿಭಟನೆ, ಸತ್ಯಾಗ್ರಹ, ಧರಣಿಗಳಿಗೆ ವ್ಯರ್ಥವಾಗುತ್ತಿದ್ದು ಈ ಹಿನ್ನೆಲೆಯಲ್ಲಿ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುವ ಅಧಿವೇಶನವು ವ್ಯವಸ್ಥಿತ ಹಾಗೂ ಅರ್ಥಪೂರ್ಣವಾಗಿ ನಡೆಸುವಂತೆ ಸರ್ಕಾರಕ್ಕೆ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಸಲಹೆ ನೀಡಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಸಚಿವರು ಅನೇಕರಿಗೆ ಪ್ರತ್ಯೇಕ ಪತ್ರ ಬರೆದಿರುವ ಅವರು, ಡಿಸೆಂಬರ್ 4 ರಿಂದ 15 ರವರೆಗೆ ಬೆಳಗಾವಿಯ ಸುವರ್ಣ ಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆಸಲು ನಿರ್ಧರಿಸಲಾಗಿದೆ. ಅಧಿವೇಶನದ ಸಂದರ್ಭದಲ್ಲಿ ಕೃಷಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಂದಾಯ ಸೇರಿ ವಿವಿಧ ಇಲಾಖೆ, ಕಂದಾಯ ಸೇರಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಹಲವಾರು ಸಂಘಟನೆಗಳು ಧರಣಿ, ಸತ್ಯಾಗ್ರಹ ನಡೆಸುವುದು ಸಾಮಾನ್ಯವಾಗಿದ್ದು ಅಧಿವೇಶನಕ್ಕೂ ಮುನ್ನ ಸಂಬಂಧಿಸಿದ ಸಚಿವರು ಸಂಬಂಧಪಟ್ಟ ಸಂಘಟನೆಗಳೊಂದಿಗೆ ಮಾತುಕತೆ ನಡೆಸಿ, ಅಧಿವೇಶನದ ವೇಳೆಗೆ ಪ್ರತಿಭಟನೆಗಳು ನಡೆಯದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಸಚಿವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಿಎಂಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಬೆಳಗಾವಿಯ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಸುವರ್ಣ ವಿಧಾನ ಸೌಧದ ಹೊರಗಡೆ ಪ್ರತಿಭಟನೆಗಳ ಸಂಖ್ಯೆ ಇಳಿಮುಖವಾದರೆ ಹಾಗೂ ಸದನದ ಒಳಗಡೆ ಜನಸಾಮಾನ್ಯರ ಹಾಗೂ ಜ್ವಲಂತ ಸಮಸ್ಯೆಗಳ ಕುರಿತು ಅರ್ಥಪೂರ್ಣ ಹಾಗೂ ಗಂಭೀರ ಚರ್ಚೆ ನಡೆದು ಪರಿಹಾರ ಕಂಡುಕೊಂಡರೆ ಉತ್ತರ ಕರ್ನಾಟಕ ಭಾಗದಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಸಿದ್ದು ಸಾರ್ಥಕವಾಗಿ ಸರ್ಕಾರಕ್ಕೆ ಗೌರವ ಹಾಗೂ ಒಳ್ಳೆಯ ಹೆಸರು ಬರುತ್ತದೆ ಎಂದು ಸಲಹೆ ನೀಡಿದ್ದಾರೆ.

ಸಿಎಂ ಸೇರಿದಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೂ ಪ್ರತ್ಯೇಕ ಪತ್ರಗಳನ್ನು ಬರೆದ್ದಿದ್ದಾರೆ.

**ಆಧಾರ:** ಉದಯವಾಣಿ, ದಿನಾಂಕ: 22.11.2023

## 10.ಮೇಘಾಲಯ ಗ್ರಂಥಾಲಯ ಸಮಿತಿ ನಿಯೋಗದೊಂದಿಗೆ ಸಭಾಪತಿ ಭೇಟಿ

ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಮೇಘಾಲಯ ರಾಜ್ಯದ ಗ್ರಂಥಾಲಯ ಸಮಿತಿ ನಿಯೋಗ ಭೇಟಿ ಮಾಡಿ ಸನ್ಮಾನಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಭಾಪತಿ ಬಸವರಾಜ ಹೊರಟ್ಟಿ ಅವರು, ಕರ್ನಾಟಕ ವಿಧಾನ ಪರಿಷತ್ತಿನ ಶತಮಾನದ ಇತಿಹಾಸ ನಡೆದು ಬಂದ ದಾರಿ ಕುರಿತು ಮಾಹಿತಿ ನೀಡಿದರು. ನಿಯೋಗಕ್ಕೆ ಅಧಿವೇಶನ ನಡೆಯುವ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ನಡೆಯುವ ಸಭಾಂಗಣದ ಕುರಿತು ಮಾಹಿತಿ ನೀಡಿ ಸಮಗ್ರವಾಗಿ ವಿವರಿಸಿದರು.

ತಮ್ಮ ಕೊಠಡಿಯಲ್ಲಿ ಹಾಕಿದ 12ನೇ ಶತಮಾನದ ಬಸವಣ್ಣನವರ ಅನುಭವ ಮಂಟಪದ ಚಿತ್ರವನ್ನು ತೋರಿಸಿ ಬಸವಣ್ಣನವರ ಸಂಸತ್ತಿನ ಪರಿಕಲ್ಪನೆ ಪ್ರಜಾಪ್ರಭುತ್ವದ ಮಹತ್ವ ಕುರಿತು ಮಾಹಿತಿ ನೀಡಿದರು.

ಇಂದು ಜಗತ್ತಿನಾದ್ಯಂತ ಪ್ರಜಾಪ್ರಭುತ್ವ, ಸಂಸತ್ತು, ಆಡಳಿತ ವ್ಯವಸ್ಥೆಯನ್ನು ನೋಡಿದಾಗ ಬಸವಣ್ಣನವರು 12ನೇ ಶತಮಾನದಲ್ಲಿಯೇ ಅನುಭವ ಮಂಟಪದ ಮೂಲಕ ಆಡಳಿತ ವ್ಯವಸ್ಥೆಯನ್ನು ಪ್ರಜೆಗಳಿಗಾಗಿಯೇ ಪ್ರಜಾಪ್ರಭುತ್ವ ಎನ್ನುವ ಮಹತ್ವದ ಕುರಿತು ಆಡಳಿತ ವ್ಯವಸ್ಥೆಯನ್ನು ತಂದಿದ್ದರು ಎಂದು ವಿವರಿಸಿದರು.

ಈ ಸಂಗತಿ ತಿಳಿದ ಬಳಿಕ ಮೇಘಾಲಯ ರಾಜ್ಯದ ಗ್ರಂಥಾಲಯ ಸಮಿತಿ ನಿಯೋಗ ಆಶ್ಚರ್ಯ ವ್ಯಕ್ತಪಡಿಸಿತು. ಈಗ ಪಾರ್ಲಿಮೆಂಟ್, ಮೇಲ್ಮನೆ, ಕೆಳಮನೆ ಎಂಬ ಕಾರ್ಯ ವಿಧಾನ ಕಾಣುತ್ತಿದ್ದೇವೆ. ಅಂದೇ ಬಸವಣ್ಣನವರು ಇದನ್ನು ರೂಪಿಸಿದ್ದರು ಎಂಬುದು ಗಮನಾರ್ಹವಾದುದು ಎಂದು ಹೇಳಿದರು. ಇದೇ

ಸಂಧರ್ಭದಲ್ಲಿ ಮೇಘಾಲಯದ ಗ್ರಂಥಾಲಯ ಸಮಿತಿ ನಿಯೋಗವನ್ನು ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಪರಿಷತ್ತಿನ ಪರವಾಗಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸಭಾಪತಿಗಳ ವಿಶೇಷ ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಇದ್ದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 24.11.2023

## 11. ಬಸವಕಲ್ಯಾಣ ಅಂತಾರಾಷ್ಟ್ರೀಯ ಸ್ಥಳವಾಗಲಿ

ಬಸವಕಲ್ಯಾಣ ಅಂತರರಾಷ್ಟ್ರೀಯ ಪ್ರೇಕ್ಷಣೀಯ ಸ್ಥಳವಾಗಬೇಕು. ಮಂತ್ರಿಗಳಾದ ಈಶ್ವರ ಖಂಡ್ರೆ, ರಹೀಂ ಖಾನ್ ಹಾಗೂ ಎಲ್ಲಾ ಶಾಸಕರು ಸಚಿವ ಸಂಪುಟದಲ್ಲಿ ಈ ವಿಷಯ ಕುರಿತು ಚರ್ಚಿಸಿ ಈ ಕಾರ್ಯ ಮಾಡಿದರೆ ನಾಡಿಗೆ ಒಂದು ದೊಡ್ಡ ಕೊಡುಗೆ ಕೊಟ್ಟಂತಾಗುತ್ತದೆ ಹಾಗೂ ಅವರ ಹೆಸರು ಶಾಶ್ವತವಾಗಿ ಉಳಿಯುತ್ತದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿಯ ಹೊರವಲಯದ ವಿಶ್ವ ಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಪರಿಸರದಲ್ಲಿ ಹಮ್ಮಿಕೊಳ್ಳಲಾದ 44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ನಿಮ್ಮೆಲ್ಲರ ಕೆಲಸಕ್ಕೆ ನನ್ನ ಸದಾ ಬೆಂಬಲ ಇರುತ್ತದೆ. ರಾಜ್ಯದಲ್ಲಿ ಎಲ್ಲಿಯಾದರೂ ಒಂದು ಕಡೆ ವಿಮಾನ ನಿಲ್ದಾಣಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವ ಠರಾವು ಕಾರ್ಯಕ್ರಮ ಮೂಲಕ ನಾವು ಮಾಡಬೇಕಾಗಿದೆ ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಬಸವಣ್ಣನವರ ಬಗ್ಗೆ ಪ್ರೀತಿ, ವಿಶ್ವಾಸ ಹೊಂದಿದ್ದಾರೆ. ಅದಕ್ಕಾಗಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಹಾಕುವಂತ ಕಾರ್ಯ ಅವರು ಮಾಡಿದ್ದಾರೆ. ನಾವೆಲ್ಲರೂ ರಾಜಕಾರಣ ದೂರವಿಟ್ಟು ಈ ಅನುಭವ ಮಂಟಪದ ಮತ್ತು ಈ ನಾಡಿನ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದರೆ ದೇಶ ವಿದೇಶಗಳಲ್ಲಿ ಬಸವಕಲ್ಯಾಣದ ಕೀರ್ತಿ ಬೆಳೆಯಲು ಸಾಧ್ಯವಾಗುತ್ತದೆ ಎಂದರು. ಸುತ್ತೂರಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಡಾ.ಬಸವಲಿಂಗ ಪಟ್ಟದೇವರು, ಶ್ರೀ ಡಾ.ಚೆನ್ನವೀರ ಶಿವಾಚಾರ್ಯರು, ಶ್ರೀ ಡಾ.ಶಿವಾನಂದ ಮಹಾಸ್ವಾಮಿಗಳು, ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ಪಾಟೀಲ್, ಮಂತ್ರಿಗಳಾದ ಈಶ್ವರ ಖಂಡ್ರೆ, ರಹೀಂ ಖಾನ್, ಶಾಸಕ ಶರಣು ಸಲಗರ್, ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಸವರಾಜ ಪಾಟೀಲ್ ಸೇಡಂ ಮತ್ತಿತರಿದ್ದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 26.11.2023.

## 12.ಗುಣಾತ್ಮಕ ಚರ್ಚೆಗೆ 60 ದಿನ ಕಲಾಪ ಅಗತ್ಯ

ಸದನದಲ್ಲಿ ಗುಣಮಟ್ಟದ ಚರ್ಚೆಯಾಗಬೇಕಾದರೆ ಸಾಕಷ್ಟು ಸಮಯಾವಕಾಶವೂ ಬೇಕಾಗುತ್ತದೆ. ಸೀಮಿತ ಅವಧಿಯ ಕಲಾಪದಲ್ಲಿ ಉತ್ಕೃಷ್ಟ ಸಂಸದೀಯ ಫಲ ಸಿಗುವುದಿಲ್ಲ. ಈ ಹಿನ್ನಲೆಯಲ್ಲಿ ವಾರ್ಷಿಕ 60 ದಿನ ಕಡ್ಡಾಯವಾಗಿ ಅಧಿವೇಶನ ನಡೆಸುವ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಬೇಕು ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದ್ದಾರೆ.

ಬೆಂಗಳೂರು 'ಉದಯವಾಣಿ' ಕಛೇರಿಯಲ್ಲಿ ನಡೆದ 'ಸಂವಾದ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಧಿವೇಶನದಲ್ಲಿ ಜನರ ಎಲ್ಲ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವುದಕ್ಕೆ ಅವಕಾಶವಿದೆ. ಹೀಗಾಗಿ ಸರ್ಕಾರ ವರ್ಷದಲ್ಲಿ 60 ದಿನ ಅಧಿವೇಶನ ನಡೆಸುವುದಕ್ಕೆ ಅವಕಾಶ ಕಲ್ಪಿಸಿದರೆ ಉತ್ತಮ, ನಾವಂತೂ ಕಲಾಪ ನಡೆಸುವುದಕ್ಕೆ ಸಿದ್ದರಿದ್ದೇವೆ. ಸ್ಪೀಕರ್ ಆದವನು ಸದಾ 'ಪ್ರತಿಪಕ್ಷದ ಮಿತ್ರ'. ನಾನು ಕೂಡಾ ಅದೇ ರೀತಿ ನಡೆದುಕೊಳ್ಳುತ್ತೇನೆ. ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಆ ಭಾಗದ ಚರ್ಚೆಗೆ ಹೆಚ್ಚು ಆದ್ಯತೆ ಸಿಗಬೇಕು ಎಂದು ಅಭಿಪ್ರಾಯಪಟ್ಟರು.

[ ಕರ್ನಾಟಕ ಸುವರ್ಣ ಸಂಭ್ರಮ ಸಂದರ್ಭದಲ್ಲಿ ಬೆಳಗಾವಿ ಅಧಿವೇಶನ ನಡೆಯುತ್ತಿದೆ. ಹೀಗಾಗಿ ಉತ್ತರ ಕರ್ನಾಟಕ ಭಾಗದ ರೈತರು, ಕಾರ್ಮಿಕರು ಹಾಗೂ ಸಮಸ್ಯೆ ಬಗ್ಗೆ ಹೆಚ್ಚು ಚರ್ಚೆಯಾಗಬೇಕು. ನಮ್ಮೆಲ್ಲ ಶಾಸಕರಿಗೂ ಜವಾಬ್ದಾರಿ ಇದೆ. ಚುನಾವಣೆ ಸಂದರ್ಭದಲ್ಲಿ ಮಾತ್ರ ರಾಜಕಾರಣ ಮಾಡೋಣ ಎಂದರು.

ಉಳಿದ ಸಂದರ್ಭದಲ್ಲಿ ಅಭಿವೃದ್ಧಿಯೇ ಆದ್ಯತೆಯಾಗಲಿ ಕಲಾಪದಲ್ಲಿ ಶಾಸಕರು ಬೇರೆಯವರನ್ನು ರೊಚ್ಚಿಗೆಬ್ಬಿಸುವುದು ಉತ್ತಮ ಸಂಸದೀಯ ನಡವಳಿ ಎಂದು ಭಾವಿಸಿ ಕೊಳ್ಳಬಾರದು. ಕಲಾಪದಲ್ಲಿ ನೀವು ನಡೆದುಕೊಳ್ಳುವ ರೀತಿ, ನಡವಳಿಗಳು ನಿಮ್ಮ ರಾಜಕೀಯ ಭವಿಷ್ಯವನ್ನು ರೂಪಿಸುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳಿ ಎಂದು ಸಲಹೆ ನೀಡಿದರು.

ಮೊದಲ ಅಧಿವೇಶನದಲ್ಲಿ ನನಗೆ ಸಿಹಿ ಘಟನೆಯೇ ಎದುರಾಗಿದೆ. ಕಹಿ ಘಟನೆಗಳನ್ನು ನಾನು ಅನುಭವ ಎಂದು ಪರಿಗಣಿಸಿದ್ದೇನೆ. ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಾಗ, ಸಂವಿಧಾನ ಪ್ರಕಾರವೇ ಕ್ರಮವಾಗುತ್ತದೆ. ನಾನಂತೂ ವಿಪಕ್ಷದ ಸದಸ್ಯರಿಗೆ ಆತ್ಮವಿಶ್ವಾಸ ತುಂಬಿ ಅವರಿಗೆ ಹೆಚ್ಚು ಆತ್ಮೀಯನಾಗಿರುತ್ತೇನೆ. ಸ್ಪೀಕರ್ ಸ್ಥಾನ ಅತ್ಯಂತ ಗೌರವದ ಹುದ್ದೆ ನಾನು ವಿದ್ಯಾರ್ಥಿ ದೆಶೆಯಿಂದಲೂ ಚುನಾವಣಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗಿಯಾಗುತ್ತಿದ್ದೆ. ಹೀಗಾಗಿ ಪಕ್ಷ ಮತ್ತು ಚುನಾವಣಾ ಚಟುವಟಿಕೆಯಿಂದ ದೂರವಿದ್ದೇನೆ ಎಂಬುದನ್ನು ಇಟ್ಟರೆ ನನಗೆ ಯಾವುದೇ ರೀತಿಯಿಂದಲೂ ಬೇಸರವಿಲ್ಲ ಎಂದು ಅಭಿಪ್ರಾಯಪಟ್ಟರು.

ವಿಧಾನಮಂಡಲದ ಕಲಾಪಗಳನ್ನು ಸಂಪೂರ್ಣವಾಗಿ ಕಾಗದರಹಿತವಾಗಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇ–ವಿಧಾನ್ ವ್ಯವಸ್ಥೆ ಜಾರಿಗೆ ತರುತ್ತೇವೆ. ಇದಕ್ಕಾಗಿ ಏಕೀಕೃತ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಬೇಕು. ಒಂದೇ ಸಮನೆ ಇ–ವ್ಯವಸ್ಥೆಗೆ ಹೊಂದಿಕೊಳ್ಳಲು ಶಾಸಕರಿಗೆ ತೊಂದರೆಯಾಗಬಹುದು. ಹೀಗಾಗಿ ಲ್ಯಾಪ್‌ಟಾಪ್‌ನಂಥ ಗ್ಯಾಜೆಟ್‌ಗಳನ್ನು ಸದನದೊಳಗೆ ತರುವುದಕ್ಕೆ ಅವಕಾಶ ಕಲ್ಪಿಸಲು ನಿರ್ಧರಿಸಿದ್ದೇನೆ ಎಂದು ವಿವರಿಸಿದರು.

**ಆಧಾರ:** ಉದಯವಾಣಿ, ದಿನಾಂಕ: 26.11.2023

# ಭಾಗ–2

# ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

## 1. ವಿಧಾನ ಪರಿಷತ್ತಿನ 151ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಾನ್ಯ ಸಭಾಪತಿಯವರು:**

ವಿಧಾನ ಪರಿಷತ್ತಿನ 151ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ ಪ್ರಸ್ತುತ ಅಧಿವೇಶನವು ದಿನಾಂಕ:04.12.2023 ರಿಂದ 15.12.2023ರವರೆಗೆ ಒಟ್ಟು 10 ದಿನಗಳು ಅಂದರೆ, 57+29 ಗಂಟೆಗಳು ನಡೆಸಲಾಗಿರುತ್ತದೆ.

ಆ ಪೈಕಿ ಗದ್ದಲ ಹಾಗೂ ಧರಣಿಗಾಗಿ ಒಟ್ಟು 4 ಗಂಟೆ 30 ನಿಮಿಷಗಳನ್ನು ವ್ಯಯಿಸಲಾಗಿದೆ.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 11 ಗಣ್ಯರುಗಳಿಗೆ ಸೇನಾ ಕ್ಯಾಪ್ಟನ್ ಪ್ರಾಂಜಲ್ ಸೇರಿದಂತೆ ಕ್ಯಾಪ್ಟನ್ ಶುಭಂ ಗುಪ್ತ, ಹವಲ್ದಾರ ಅಬ್ದುಲ ಮಜಿಕ್, ಲಾನ್ಸ್ ನಾಯ್ಕ್ ಸಂಜಯ್ ಬಿಸ್ಟ್ ಮತ್ತು ಸಚಿನ್ ಲಾರ್ ಹಾಗೂ ಇತರೆ ವೀರ ಯೋಧರುಗಳಿಗೆ ಮತ್ತು ಐತಿಹಾಸಿಕ ಮೈಸೂರು ದಸರಾ ಹಬ್ಬದ ಕೇಂದ್ರ ಬಿಂದುವಾಗಿದ್ದ ಗಜರಾಜ ವೀರ ಅರ್ಜುನನಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01 ಮತ್ತು 02 ಪಟ್ಟಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2023–24ನೇ ಸಾಲಿನ ಮೊದಲನೇ ಹಾಗೂ ಮಧ್ಯಂತರ ವರದಿ ಹಾಗೂ ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 2023–24ನೇ ಸಾಲಿನ 136ನೇ ವರದಿಗಳನ್ನು ಒಪ್ಪಿಸಲಾಗಯಿತು.

2023–24ನೇ ಸಾಲಿನ ಆಯವ್ಯಯ ಅಂದಾಜುಗಳ ಮೊದಲನೆ ಕಂತು ಹಾಗೂ 2023–24ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಮಂಡಿಸಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಧಿಯನ್ನು ದಿನಾಂ:22.10.2023 ರಿಂದ 06 ತಿಂಗಳವರೆಗೆ, ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸದನ ಸಮಿತಿ ಕಾಲಾವಧಿಯನ್ನು ದಿನಾಂ:22.09.2023 ರಿಂದ 06 ತಿಂಗಳವರೆಗೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ,2023ನ್ನು ಪರಿಶೀಲಿಸಲು ರಚಿಸಲಾಗಿರುವ ಪರಿಶೀಲನಾ ಸಮಿತಿಯು ತನ್ನ

ವರದಿಯನ್ನು ಸಲ್ಲಿಸಲು ದಿನಾಂಕ:09.12.2023 ರಿಂದ 03 ತಿಂಗಳವರೆಗೆ ವಿಸ್ತರಿಸುವ ಪ್ರಸ್ತಾವಗಳನ್ನು ಮಂಡಿಸಿ, ಸದನದ ಸಹಮತಿಯನ್ನು ಪಡೆಯಲಾಯಿತು.

ನಿಯಮ 659 ರಡಿಯಲ್ಲಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 01 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಲಾಗಿದ್ದು, 01 ಸೂಚನೆಯನ್ನು ಚರ್ಚಿಸಿ ಉತ್ತರಿಸಲಾಗಿರುತ್ತದೆ ಹಾಗೂ 01 ಸೂಚನೆಯನ್ನು ತಿರಸ್ಕರಿಸಲಾಗಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1219 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 103 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 41 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1057 ಪ್ರಶ್ನೆಗಳ ಪೈಕಿ 970 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 04 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ. ಯಾವುದೇ ಸೂಚನೆಗಳನ್ನು ಚರ್ಚಿಸಿರುವುದಿಲ್ಲ.

ನಿಯಮ 72ರಡಿಯಲ್ಲಿ 164 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 09 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 69 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 93 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 06 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 35 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಎರಡು ಅರ್ಜಿಗಳು ಹಾಗೂ ಒಂದು ಹಕ್ಕುಚ್ಯುತಿ ಸೂಚನೆಯನ್ನು ಸದನದಲ್ಲಿ ಮಂಡಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 90 +ಸೂಚನೆಗಳ ಪೈಕಿ 52 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಒಟ್ಟು 17 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ. ಒಂದು ಅಧಿಕೃತ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಗಿರುತ್ತದೆ.

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಕುರಿತು ಚರ್ಚಿಸಿ ಉತ್ತರಿಸಲಾಯಿತು.

## 2. 16ನೇ ವಿಧಾನಸಭೆ 2ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

16ನೇ ವಿಧಾನ ಸಭೆಯ 2ನೇ ಅಧಿವೇಶನವು ದಿನಾಂಕ 04ನೇ ಡಿಸೆಂಬರ್, 2023ರಂದು ಬೆಳಗಾವಿ ಸುವರ್ಣ ವಿಧಾನಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಪ್ರಾರಂಭವಾಗಿ 15ನೇ ಡಿಸೆಂಬರ್, 2023 ರವರೆಗೆ 10 ದಿನಗಳ ಕಾಲ ಸುಮಾರು 66 ಗಂಟೆ 10 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.
- ರಾಷ್ಟ್ರಪತಿಗಳು/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.
- 2023–24ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ದಿನಾಂಕ: 11.12.2023 ರಂದು ಮಂಡಿಸಿದ್ದು, ದಿನಾಂಕ:13.12.2023 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ.
- 2023–24ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ದಿನಾಂಕ:14.12.2023 ರಂದು ಮಂಡಿಸಲಾಗಿದೆ.
- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 17 ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.
- ರಾಜ್ಯದ 04 ವಿಮಾನ ನಿಲ್ದಾಣಗಳಿಗೆ ಐತಿಹಾಸಿಕ ವ್ಯಕ್ತಿಗಳ ನಾಮಕರಣ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಅಧಿಕೃತ ನಿರ್ಣಯವನ್ನು ಹಾಗೂ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಬೆಳಗಾವಿಗೆ ಆಗಮಿಸಿದ ಶತಮಾನೋತ್ಸವದ ಸಂಭ್ರಮದಲ್ಲಿ ಸ್ಮಾರಕ ನಿರ್ಮಾಣ ಮಾಡುವ ಕುರಿತು ಖಾಸಗಿ ಸದಸ್ಯರ ನಿರ್ಣಯವನ್ನು ದಿನಾಂಕ:14.12.2023 ರಂದು ಸದನವು ಸರ್ವಾನುಮತದಿಂದ ಅಂಗೀಕರಿಸಿದೆ.
- ನಿಯಮ 60 ರಡಿಯಲ್ಲಿ ನೀಡಿದ್ದ 04 ಸೂಚನೆಗಳ ಪೈಕಿ 03 ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಲಾಗಿದ್ದು, ಒಟ್ಟು 05 ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿದೆ.
- ಕನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2023–24ನೇ ಸಾಲಿನ ಮೊದಲನೇ ಹಾಗೂ ಮಧ್ಯಂತರ ವರದಿ ಮತ್ತು ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರಾ ಮೂವತ್ತಾರನೇ ವರದಿ, ಕರ್ನಾಟಕ ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2023–24ನೇ ಸಾಲಿನ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸಲಾಗಿದ್ದು ಒಟ್ಟು 09 ಅಧಿಸೂಚನೆಗಳು, 03 ಅಧ್ಯಾದೇಶಗಳು ಮತ್ತು 61 ವಾರ್ಷಿಕ ವರದಿಗಳು, 105 ಲೆಕ್ಕ ಪರಿಶೋಧನಾ ವರದಿಗಳು ಹಾಗೂ 01 ಲೆಕ್ಕ ತಪಾಸಣಾ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.
- ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಲ್ಕು ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ದಿನಾಂಕ:15.12.2023 ರಂದು ಮಾನ್ಯ ಸಭಾಧ್ಯಕ್ಷರಿಗೆ ಸದನವು ಅಧಿಕಾರ ನೀಡಲಾಗಿದೆ.

- ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತು ಸದನದಲ್ಲಿ ವಿಶೇಷ ಚರ್ಚೆ ನಡೆಸಲಾಗಿದ್ದು, ಒಟ್ಟು 42 ಮಾನ್ಯ ಸದಸ್ಯರುಗಳು 11 ಗಂಟೆ 04 ನಿಮಿಷಗಳ ಕಾಲ ಚರ್ಚೆ ನಡೆಸಲಾಗಿದೆ.
- 18 ಅರ್ಜಿಗಳನ್ನು ಒಪ್ಪಿಸಲಾಗಿದೆ.
- ಒಟ್ಟು 3038 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 150 ಪ್ರಶ್ನೆಗಳ ಪೈಕಿ 148 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ 2206 ಪ್ರಶ್ನೆಗಳ ಪೈಕಿ 2010 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ನಿಯಮ 351 ರಡಿಯಲ್ಲಿ 200 ಸೂಚನೆಗಳನ್ನು ಅಂಗೀಕರಿಸಿದ್ದು, 110 ಸೂಚನೆಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ಗಮನ ಸೆಳೆಯುವ 174 ಸೂಚನೆಗಳ ಪೈಕಿ 140 ಸೂಚನೆಗಳನ್ನು ಚರ್ಚಿಸಲಾಗಿದೆ/ ಮಂಡಿಸಲಾಗಿದೆ. ಒಟ್ಟಾರೆಯಾಗಿ 197 ಸೂಚನೆಗಳಿಗೆ ಉತ್ತರವನ್ನು ಸ್ವೀಕರಿಸಲಾಗಿದೆ.
- ಶೂನ್ಯ ವೇಳೆಯಲ್ಲಿ ಒಟ್ಟು 31 ಸೂಚನೆಗಳನ್ನು ಚರ್ಚಿಸಲಾಗಿದೆ.

ಸದನ ನಡೆಸಲು ಸಹಕರಿಸದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ಎಲ್ಲಾ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ಬೆಳಗಾವಿಯಲ್ಲಿ ವಸತಿ ಮತ್ತು ಸಾರಿಗೆ ವ್ಯವಸ್ಥೆ ಮಾಡಿಕೊಟ್ಟು ಶಾಸಕರ ಸೌಕರ್ಯಕ್ಕೆ ನಿರಂತರವಾಗಿ ಪ್ರಯತ್ನಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಎಲ್ಲರಿಗೂ ಹಾಗೂ ವಿಶೇಷವಾಗಿ ಬೆಳಗಾವಿ ಜಿಲ್ಲಾಡಳಿತದವರಿಗೆ ಹಾಗೂ ಕಾನೂನು ಸುವ್ಯವಸ್ಥೆಯ ಜವಾಬ್ದಾರಿಗಳನ್ನು ಸೂಕ್ತವಾಗಿ ನಿರ್ವಹಿಸಿದ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಾಗೂ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ನಾಡಿನ ಜನತೆಗೆ ಮುಂಬರುವ 2024 ಹೊಸ ವರ್ಷದ ಶುಭಾಶಯಗಳನ್ನು ತಿಳಿಸುತ್ತೇನೆ ಎಂದು ಮಾನ್ಯ ಸಭಾಧ್ಯಕ್ಷರು ತಿಳಿಸಿದರು.

# ೩. ಕರ್ನಾಟಕ ವಿಧಾನ ಮಂಡಲದ/ವಿಧಾನ ಸಭೆಯ ವಿವಿಧ ಸ್ಥಾಯಿ ಸಮಿತಿಗಳನ್ನು ನಿಯಮಿತವಾಗಿ ನಡೆಸುವ ಸಂಬಂಧ ಹೊರಡಿಸಲಾದ ಲಘು ಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ ೦5ನೇ ಅಕ್ಟೋಬರ್, 2023**

**ಸಂಖ್ಯೆ: 40**

ಪರಿಷ್ಕೃತ

ಕರ್ನಾಟಕ ವಿಧಾನ ಮಂಡಲದ/ವಿಧಾನ ಸಭೆಯ ವಿವಿಧ ಸ್ಥಾಯಿ ಸಮಿತಿಗಳು ನಿಯಮಿತವಾಗಿ ಮತ್ತು ಸುಸೂತ್ರವಾಗಿ ಸಭೆಗಳನ್ನು ನಡೆಸಲು ಹಾಗೂ ಸಮಿತಿ ಸಭೆಗಳಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಸಂದರ್ಭಾನುಸಾರವಾಗಿ ಹಾಜರಾಗಲು ಮತ್ತು ವಿಧಾನಸಭೆಯ ಸಚಿವಾಲಯದ ವರದಿಗಾರರು ಸರದಿಯಂತೆ ಎಲ್ಲಾ ಸಮಿತಿ ಸಭೆಗಳ ನಡವಳಿಗಳನ್ನು ದಾಖಲಿಸಿಕೊಳ್ಳಲು ಅನುಕೂಲವಾಗುವಂತೆ ಈ ಕೆಳಕಾಣಿಸಿದ ರೀತ್ಯಾ ಸಮಿತಿ ಸಭೆಗಳನ್ನು ನಡೆಸಲು ಮಾನ್ಯ ಸಭಾಧ್ಯಕ್ಷರು ಆದೇಶಿಸಿರುತ್ತಾರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಸಮಿತಿ ಸಭೆಯು ನಡೆಯುವ ದಿನದಂದು ಸಾರ್ವತ್ರಿಕ ರಜಾ ದಿನಗಳು ಬಂದಲ್ಲಿ, ಮುಂದಿನ ನಿಗದಿಗೊಳಿಸಿದ ದಿನದಂದೇ ಸಭೆಯನ್ನು ನಡೆಸಬೇಕೆಂದು ಮಾನ್ಯ ಸಭಾಧ್ಯಕ್ಷರು ಸೂಚಿಸಿರುತ್ತಾರೆ.

| ಕ್ರ. ಸಂ. | ವಾರ | ಸಮಿತಿಗಳ ಹೆಸರು | ಸಭೆಯ ಸ್ಥಳ/ಕೊಠಡಿ |
|---|---|---|---|
| 1. | ಮಂಗಳವಾರ | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ 106 |
| | | ಅಧೀನ ಶಾಸನ ರಚನಾ ಸಮಿತಿ | ವಿಧಾನಸಭೆಯ ಪೂರ್ವ ಮೊಗಸಾಲೆ |
| 2. | ಬುಧವಾರ | ಸಾರ್ವಜನಿಕ ಉದ್ದಿಮೆಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ 106 |
| | | ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | ಶಾಸಕರ ಭವನ–5ರ ಎರಡನೇ ಮಹಡಿಯ ಸಮ್ಮೇಳನ ಸಭಾಂಗಣ |
| | | ಸರ್ಕಾರಿ ಭರವಸೆಗಳ ಸಮಿತಿ | ಶಾ.ಭ–5ರ ಮೊದಲನೇ ಮಹಡಿಯ ಸಮ್ಮೇಳನ ಸಭಾಂಗಣ |

| | | | |
|---|---|---|---|
| 3. | ಗುರುವಾರ | ಹಕ್ಕುಬಾಧ್ಯತೆಗಳ ಸಮಿತಿ | ಮಾನ್ಯ ಸಭಾಧ್ಯಕ್ಷರ ಚಹಾ ಕೊಠಡಿ |
| | | ಅರ್ಜಿಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ 106 |
| | | ವಸತಿ ಸೌಕರ್ಯಗಳ ಸಮಿತಿ | ಶಾಸಕರ ಭವನ-4ರ ಸಮಿತಿ ಸಭಾಂಗಣ |
| | | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | ವಿಕಾಸಸೌಧದಲ್ಲಿನ ಕೊಠಡಿ ಸಂಖ್ಯೆ 318 |
| 4. | ಶುಕ್ರವಾರ | ಅಂದಾಜುಗಳ ಸಮಿತಿ | ವಿಧಾನಸೌಧದ ಕೊಠಡಿ ಸಂಖ್ಯೆ 106 |
| | | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ | ಶಾಸಕರ ಭವನ-5ರ ಎರಡನೇ ಮಹಡಿಯ ಸಮ್ಮೇಳನ ಸಭಾಂಗಣ |
| | | ಸಭೆಯ ಮುಂದಿಡಲಾದ ವಿಧಾನ ಸಭೆಯ ಪೂರ್ವ ಮೊಗಸಾಲೆ ಕಾಗದ ಪತ್ರಗಳ ಸಮಿತಿ | ವಿಧಾನಸಭೆಯ ಪೂರ್ವ ಮೊಗಸಾಲ |

ಸಮಿತಿ ಸಭೆಗಳನ್ನು ನಿಗದಿಪಡಿಸಿದ ದಿನದಂದೇ ನಡೆಸಲು ಸಮಿತಿಗಳ ಮಾನ್ಯ ಅಧ್ಯಕ್ಷರು ಸಹಕರಿಸಬೇಕೆಂದು ಈ ಮೂಲಕ ಕೋರಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# 4. ನಿಯಮಾವಳಿ ಸಮಿತಿ ರಚನೆಗೆ ಸಂಬಂಧಿಸಿದ ಲಘು ಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ 05ನೇ ಅಕ್ಟೋಬರ್, 2023**

**ಸಂಖ್ಯೆ: 43**

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 368ರ ಮೇರೆಗೆ, ವಿಧಾನಸಭೆಯ ನಿಯಮಗಳನ್ನು ಪರಿಶೀಲಿಸಿ, ಅಗತ್ಯ ತಿದ್ದುಪಡಿ ಮಾಡುವ ದಿಸೆಯಲ್ಲಿ ವರದಿಯನ್ನು ಸಲ್ಲಿಸಲು, ಈ ಕೆಳಕಾಣಿಸಿದ ಮಾನ್ಯ ಸದಸ್ಯರನ್ನೊಳಗೊಂಡ ವಿಧಾನಸಭೆಯ **'ನಿಯಮಾವಳಿ ಸಮಿತಿ'**ಯನ್ನು ಸನ್ಮಾನ್ಯ ಸಭಾಧ್ಯಕ್ಷರು ರಚಿಸಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರಿಗೆ ತಿಳಿಯಪಡಿಸಲಾಗಿದೆ.

**ಶ್ರೀಯುತರುಗಳಾದ:**

| | | |
|---|---|---|
| 1. | ಯು.ಟಿ.ಖಾದರ್ ಫರೀದ್, ಮಾನ್ಯ ಸಭಾಧ್ಯಕ್ಷರು | ಅಧ್ಯಕ್ಷರು |
| 2. | ರುದ್ರಪ್ಪ ಮಾನಪ್ಪ ಲಮಾಣಿ, ಮಾನ್ಯ ಉಪ ಸಭಾಧ್ಯಕ್ಷರು | ಸದಸ್ಯರು |
| 3. | ಹೆಚ್.ಕೆ.ಪಾಟೀಲ್, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು | ಸದಸ್ಯರು |
| 4. | ಡಾ|| ಜಿ.ಪರಮೇಶ್ವರ್, ಮಾನ್ಯ ಗೃಹ ಸಚಿವರು | ಸದಸ್ಯರು |
| 5. | ಕೃಷ್ಣಬೈರೇಗೌಡ, ಮಾನ್ಯ ಕಂದಾಯ ಸಚಿವರು | ಸದಸ್ಯರು |
| 6. | ಟಿ.ಬಿ.ಜಯಚಂದ್ರ, ವಿಧಾನ ಸಭಾ ಸದಸ್ಯರು | ಸದಸ್ಯರು |
| 7. | ಎಸ್.ಸುರೇಶ್ ಕುಮಾರ್, ವಿಧಾನ ಸಭಾ ಸದಸ್ಯರು | ಸದಸ್ಯರು |
| 8. | ಆರಗ ಜ್ಞಾನೇಂದ್ರ, ವಿಧಾನ ಸಭಾ ಸದಸ್ಯರು | ಸದಸ್ಯರು |
| 9. | ಹೆಚ್.ಡಿ.ರೇವಣ್ಣ, ವಿಧಾನ ಸಭಾ ಸದಸ್ಯರು | ಸದಸ್ಯರು |

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

## 5. ಸರ್ಕಾರಿ ಭರವಸೆಗಳ ಸಮಿತಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಿರುವ ಲಘು ಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ-2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ 10ನೇ ನವೆಂಬರ್, 2023**

---

**ಸಂಖ್ಯೆ: 46**

2023-24ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಮಾನ್ಯ ಸದಸ್ಯರಾಗಿದ್ದ ಶ್ರೀ ಗೋಪಾಲಕೃಷ್ಣ ಬೇಳೂರು ಅವರು ಭರವಸೆಗಳ ಸಮಿತಿಯ ಅಧ್ಯಕ್ಷ ಹಾಗೂ ಸದಸ್ಯತ್ವ ಸ್ಥಾನಕ್ಕೆ ನೀಡಿರುವ ರಾಜೀನಾಮೆಯಿಂದ ತೆರವಾದ ಸರ್ಕಾರಿ ಭರವಸೆಗಳ ಸಮಿತಿಯ ಸದಸ್ಯತ್ವ ಸ್ಥಾನಕ್ಕೆ ಅವರ ಬದಲಿಗೆ ಮಾನ್ಯ ಸದಸ್ಯರಾದ ಶ್ರೀ ಸತೀಶ್ ಕೃಷ್ಣ ಸೈಲ್ ಅವರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 209 ರ ಮೇರೆಗೆ ಸಮಿತಿಯ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# 6. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಅಧ್ಯಕ್ಷರನ್ನು ನಾಮ ನಿರ್ದೇಶನ ಮಾಡಿರುವ ಲಘು ಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಸೋಮವಾರ, ದಿನಾಂಕ 11ನೇ ಡಿಸೆಂಬರ್, 2023**

---

**ಸಂಖ್ಯೆ: 53**

2023–24ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಆರ್. ಅಶೋಕ ಅವರು ವಿರೋಧ ಪಕ್ಷದ ನಾಯಕರಾಗಿ ಆಯ್ಕೆಗೊಂಡಿದ್ದರಿಂದ ಅವರ ಬದಲಿಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯರಾದ ಶ್ರೀ ಸಿ.ಸಿ. ಪಾಟೀಲ್ ಅವರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 211 (2) ರ ಮೇರೆಗೆ ಸದರಿ ಸಮಿತಿಯ ಅಧ್ಯಕ್ಷರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**

ಕಾರ್ಯದರ್ಶಿ,

ಕರ್ನಾಟಕ ವಿಧಾನಸಭೆ.

**ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ,**

## 7. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಸದಸ್ಯರ ನಾಮ ನಿರ್ದೇಶನದ ಲಘು ಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ 19ನೇ ಡಿಸೆಂಬರ್, 2023**

---

**ಸಂಖ್ಯೆ: 54**

2023–24ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಆರ್. ಅಶೋಕ ಅವರು ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರಾಗಿರುವುದರಿಂದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಖಾಲಿಯಾಗಿರುವ ಸದಸ್ಯತ್ವ ಸ್ಥಾನಕ್ಕೆ ಅವರ ಬದಲಿಗೆ ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಬಿ. ಸುರೇಶಗೌಡ ಅವರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 209 ರ ಮೇರೆಗೆ ಸದರಿ ಸಮಿತಿಯ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

## ೮. ಅರ್ಜಿಗಳ ಸಮಿತಿಯ ಉಪಸಮಿತಿ ರಚನೆಗೆ ಸಂಬಂಧಿಸಿದ ಲಘು ಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ 21ನೇ ಡಿಸೆಂಬರ್, 2023**

**ಸಂಖ್ಯೆ: 55**

ತಂಬಾಕು ಸೇವನೆಯಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟುವ ಸಂಬಂಧ ತಂಬಾಕು ಮತ್ತು ಅದರ ಉತ್ಪನ್ನಗಳ ಮೇಲೆ ನಿಬಂಧನೆ, ನಿರ್ಬಂಧ ಮತ್ತು ನಿಷೇಧ ವಿಧಿಸುವ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಸಂಬಂಧ ಕರ್ನಾಟಕ ವಿಧಾನಸಭೆಯ 2023–24ನೇ ಸಾಲಿನ ಅರ್ಜಿಗಳ ಸಮಿತಿ ಸಭೆ ದಿನಾಂಕ:19.10.2023 ರಂದು ಚರ್ಚೆಯಾಗಿದ್ದು, ಈ ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ವರದಿಯನ್ನು ನೀಡಲು ಉಪ ಸಮಿತಿ ರಚಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಮೇಲಿನ ವಿಷಯದ ಬಗ್ಗೆ ಸಮಗ್ರ ಚರ್ಚೆ ನಡೆಸಿ ವರದಿಯನ್ನು ಸಲ್ಲಿಸಲು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳ ನಿಯಮ 216ರ ಮೇರೆಗೆ, ಸನ್ಮಾನ್ಯ ಸಭಾಧ್ಯಕ್ಷರು, ವಿಧಾನ ಸಭಾ ಸದಸ್ಯರಾದ ಶ್ರೀ ಎಸ್.ಸುರೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಅರ್ಜಿಗಳ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಉಪ ಸಮಿತಿಯನ್ನು ರಚಿಸಿರುತ್ತಾರೆ. ಈ ಸಮಿತಿಯು ಮೂರು ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಶ್ರೀಯುತರುಗಳಾದ:**

1. ಸುರೇಶ್ ಬಾಬು ಸಿ.ಬಿ., ವಿಧಾನ ಸಭಾ ಸದಸ್ಯರು – ಸದಸ್ಯರು
2. ಡಾ॥ ರಂಗನಾಥ ಹೆಚ್.ಡಿ., ವಿಧಾನ ಸಭಾ ಸದಸ್ಯರು – ಸದಸ್ಯರು
3. ಉಮಾನಾಥ್ ಕೋಟ್ಯಾನ್, ವಿಧಾನ ಸಭಾ ಸದಸ್ಯರು – ಸದಸ್ಯರು
4. ಡಾ॥ ಮಂತರ್ ಗೌಡ, ವಿದಾನ ಸಭಾ ಸದಸ್ಯರು – ಸದಸ್ಯರು

**<u>ಸಮಿತಿಯ ಪರಿಶೀಲನಾಂಶಗಳು</u>:**

1. ಕರ್ನಾಟಕ ರಾಜ್ಯದಲ್ಲಿ ನಶೆ ಪದಾರ್ಥಗಳು ಹಾಗೂ ತಂಬಾಕು/ತಂಬಾಕಿನ ಪದಾರ್ಥಗಳ ಬಳಕೆಯನ್ನು ಸಂಪೂರ್ಣವಾಗಿ ನಿಯಂತ್ರಿಸಿ **"ನಶೆ–ಮುಕ್ತ"** ಪರಿಕಲ್ಪನೆಯನ್ನು ಸಾಕಾರಗೊಳಿಸಲು ಶಿಫಾರಸ್ಸುಗಳನ್ನು ಹಾಗೂ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು;
2. ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು ಹಾಗು ನಿಯೋಗಿಗಳು ಸಮಾಜದಲ್ಲಿರುವ ಕ್ರಿಯಾಶೀಲ ಸಂಘಟನೆಗಳ ಸಹಕಾರದೊಂದಿಗೆ ಕರ್ತವ್ಯ ನಿರ್ವಹಿಸಲು ಅನುವಾಗುವಂತೆ " Standard Operating Procedure(SOP) ಸಿದ್ಧಪಡಿಸುವ್ಯದು;
3. ಭಾರತ ಸರ್ಕಾರದ **'ನಶೆ ಮುಕ್ತ ಭಾರತ"** ಪರಿಕಲ್ಪನೆಯ ಸಂಪನ್ಮೂಲಗಳನ್ನು ಬಳಸಿಕೊಂಡು, ನಶೆ–ಪದಾರ್ಥಗಳ ಮಾಫಿಯನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ವಿವರಗಳನ್ನು ಸಿದ್ಧಪಡಿಸುವುದು;
4. ಭಾರತದ ಸರ್ವೋಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ನಶೆ–ಪದಾರ್ಥಗಳ ಹಗೂ ತಮಬಕು ಪದಾರ್ಥಗಳ ನಿಯಂತ್ರಣಕ್ಕಾಗಿ ನೀಡಿರುವ ತೀರ್ಪುಗಳ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಪಟ್ಟಿಯನ್ನು ಸಿದ್ಧಪಡಿಸುವುದು;
5. ಉಪ ಸಮಿತಿಯು ತನ್ನ ವಿವೇಚನಾಧಿಕಾರದನ್ವಯ ವಿಷಯಕ್ಕೆ ಸಂಬಂಧಿಸಿದಂತೆ ನೀಡುವ ಇತರೆ ಯಾವುದೇ ಶಿಫಾರಸ್ಸುಗಳ ವಿವರಗಳು;

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

# ಭಾಗ–3

## ಸಂಸತ್ ಸುದ್ದಿಗಳು

# ಸಂಸತ್ ಸುದ್ದಿಗಳು

## 1. Om Birla slams EU Parliament for raising India’s internal issues

Lok Sabha Speaker Om Birla, in a bilateral meeting with the Vice-President of the European Parliament, Nicola Beer, registered his protest against the raising of India’s internal issues in the EU Parliament.

“He insisted that every nation and parliament is sovereign and their internal issues should not be discussed by others,’ a statement from the Lok Sabha Secretariat said.

Though the statement did not make any reference to any particular internal issue, sources told The Hindu that Mr.Birla’s reference was to the July resolution of the EU Parliament that discussed the violence between Meitis and Kukis in Manipur.

The, India had said that the move by the EU Parliament reflected a “ colonial mindset”.

During his valedictory address in the Parliamentary Speakers Summit (P-20) countries, Mr.Birla had said that no issue can be seen in isolation in an interconnected world as several leaders talked about the West Asia, conflict and other geopolitical issue.

“Many members mentioned the situation is West Asia, while some others talked about strengthening multilateralism, the need to encourage international trade and the, need for resilient supply chains. I have noted these references carefully. In to day’s Inter-connected world we cannot look at any issue in isolation, “ Mr Birla said in is closing statement.

The Speaker pointed out that paragraph 27 of the joint Statement talked about pursuing parliamentary diplomacy for international peace.

“We will continue to engage in parliamentary diplomacy and dialogue in relevant for as a catalyst for promoting international peace, prosperity and harmony, including supporting the peaceful resolution of conflicts and disputes,” read the Joint Statement adopted on 13.10.2023.

New Presidency: Stating that the adoption of the Joint Statement has strengthened the P-20 presidency to the president of Brazil’s chamber of Deputies, Arthur Cesar Pereira de Istra, as Brazil will hold the G-20 presidency next year.

Apart from the EU, Mr. Birla also held bilateral meetings with the president of the Inter parliamentary Union as well as the presiding officers of Russia, Singapore, Turkey the Netherlands, South Africa and Mexico.

Vice-president Jagdeep Dhankhar hosted the delegates of the p-20 Summit that successfully concluded here on Saturday. The two-day p-20 Summit was inaugurated on Friday by PM Narendra Modi, who mentioned the world grappling with conflict and stressed the need to move through peace.

**Courtesty**: The Hindu, Dated:15.10.2023

## 2. House panels don’t have criminal jurisdiction: MP

A day before Trinamool Congress member Mahua Moitra appears before the Ethics Committee of the Lok Sabha in an alleged cash-for-query case, she has written to the panel that such committees do not have criminal jurisdiction.

Arguing that the nation’s founders did not empower the parliamentary committees to decide alleged criminality since they can be misused by governments enjoying a brute majority in Parliament, Ms. Moitra said, I wish to respectfully remind you that parliamentary committees do not have criminal jurisdiction and have no mandate to investigate alleged criminality. This can only be done by law enforcement agencies.

She reiterated her demand to cross-examine businessman Darshan Hiranandani on the allegation made by BJP MP Nishikant Dubey that she received gifts and bribes from him for asking questions.

In light of the seriousness of the allegations, it is imperative that the alleged bribe-giver’ Darshan Hiranandani, who has given a suo motu affidavit to the committee with scant details and no documentary evidence whatsoever, be called to depose before the committee and provide the said evidence in the form of a documented itemised inventory with amounts, date etc, she said.

The Trinamool member also wished to cross examine the other complinant, Jai Anant Dehadrai, who had accused her of taking bribes. Since the Ethics Committee deemed it fit to release my summons to the media, I think it is important I too release my letter to the committee before my hearing tomorrow, Mr.Moitra said in a post on X.

Ms.Moitra alleged double standards as BJP MP Ramesh Bidhuri, summoned in connection with a hate speech, was allowed an extension while the panel did not agree to her request for a meeting after Novermber 5.

**Courtesty:** The Hindu, Dated: 02.11.2023

## 3. ಮೂರು ಕ್ರಿಮಿನಲ್ ಕಾಯ್ದೆ ಬದಲಿಸುವ ವರದಿಗೆ ಸಂಸತ್ ಸಮಿತಿ ಒಪ್ಪಿಗೆ

ದೇಶದ ಹಾಲಿ ಮೂರು ಪ್ರಮುಖ ಕ್ರಿಮಿನಲ್ ಕಾಯ್ದೆಗಳನ್ನು ಬದಲಿಸುವ ಮೂರು ವರದಿಗಳಿಗೆ ಗೃಹ ಇಲಾಖೆಯ ವ್ಯವಹಾರಗಳಿಗೆ ಸಂಬಂಧಿಸಿದ ಸಂಸದೀಯ ಸಮಿತಿ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ. ಕೆಲ ವಿರೋಧ ಪಕ್ಷಗಳ ಸದಸ್ಯರ ವಿರೋಧದ ನಡುವೆಯೇ ವರದಿಗಳನ್ನು ಅಂಗೀಕರಿಸಿ ಸರ್ಕಾರಕ್ಕೆ ಹಲವು ಶಿಫಾರಸು ಮಾಡಲಾಗಿದೆ ಎಂದು ತಿಳಿದುಬಂದಿದೆ.

ಬಿಜೆಪಿ ಸಂಸದ ಬ್ರಿಜ್ ಲಾಲ್ ಅಧ್ಯಕ್ಷತೆಯ 30 ಸದಸ್ಯರ ಸಂಸದೀಯ ಸಮಿತಿ ಸಭೆ ನಡೆಸಿ, ಬ್ರಿಟಿಷ್, ಕಾಲದ ಭಾರತೀಯ ದಂಡ ಸಂಹಿತೆ(ಐಪಿಸಿ), ಅಪರಾಧ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆಗಳನ್ನು ಕ್ರಮವಾಗಿ ಭಾರತೀಯ ಸಾಕ್ಷ್ಯ ಅಧಿನಿಯಮಗಳ ಮೂಲಕ ಬದಲಿಸಲು ಒಪ್ಪಿಗೆ ನೀಡಿತು ಎಂದು ಮೂಲಗಳು ಹೇಳಿವೆ.

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಡಿಸಿದ್ದ ಈ ಕುರಿತ ಮೂರು ಮಸೂದೆಗಳನ್ನು ಸಂಸದೀಯ ಸಮಿತಿಯ ಪರಾಮರ್ಶೆಗೆ ನೀಡಲಾಗಿತ್ತು. 10 ದಿನಗಳ ಹಿಂದೆ ಕಡೆಯ ಬಾರಿ ಸಮಿತಿ ಸಭೆ ನಡೆಸಿದಾಗ ಮಸೂದೆಗಳನ್ನು ಪರಿಶೀಲಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕೆಂದು ವಿಪಕ್ಷಗಳ ಕೆಲ ಸದಸ್ಯರು ಕೋರಿದ್ದರು. ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಸೇರಿ ಕೆಲ ಸದಸ್ಯರು ಕಾಯ್ದೆ ಬದಲಾವಣೆಗೆ ವಿರೋಧ ವ್ಯಕ್ತಪಡಿಸಿ ಈಗ ತಮ್ಮ ಆಕ್ಷೇಪ ವರದಿ ನೀಡಿದ್ದಾರೆ ಎನ್ನಲಾಗಿದ್ದು, ಇನ್ನು ಕೆಲವರು ಆಕ್ಷೇಪಣೆ ಸಲ್ಲಿಸಿಲ್ಲ. ಅವರಿಗೆ ಆಕ್ಷೇಪಣೆ ಸಲ್ಲಿಸಲು 2 ದಿನಗಳ ಕಾಲಾವಕಾಶ ನೀಡಲಾಗಿದೆ.

ಅದರ ನಡುವೆಯೇ, ಸಂಸದೀಯ ಸಮಿತಿಯಲ್ಲಿ ಬಿಜೆಪಿಗೆ ಬಹುಮತ ಇರುವುದರಿಂದ ಕಾಯ್ದೆಗಳ ಬದಲಾವಣೆ ಕುರಿತಾದ ವರದಿಗೆ ಒಪ್ಪಿಗೆ ನೀಡಲಾಗಿದೆ ಎಂದು ತಿಳಿದುಬಂದಿದೆ.

3 ಕ್ರಿಮಿನಲ್ ಕಾಯ್ದೆಗಳಿಗೆ ಹಿಂದಿ ಹೆಸರನ್ನು ನಾಮಕರಣ ಮಾಡಲಾಗಿದ್ದು, ಅದಕ್ಕೆ ಡಿಎಂಕೆ ಸಂಸದ ದಯಾನಿಧಿ ಮಾರನ್ ಸೇರಿ ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಆದರೆ ಸಮಿತಿಯು ಅದಕ್ಕೆ ಮನ್ನಣೆ ನೀಡದೆ ಹಿಂದಿ ಹೆಸರುಗಳಿಗೆ ಒಪ್ಪಿಗೆ ನೀಡಿದೆ.

**ಸಂಸದೀಯ ಸಮಿತಿ ಶಿಫಾರಸುಗಳೇನು?**

ನಿರ್ಲಕ್ಷ್ಯದಿಂದ ಸಂಭವಿಸುವ ಸಾವಿನ ಪ್ರಕರಣಗಳಲ್ಲಿ ದೋಷಿಗಳಿಗೆ ಹಾಲಿ ವಿಧಿಸುವ ಶಿಕ್ಷೆ ಪ್ರಮಾಣ ಕಡಿಮೆ ಇದೆ. ಇದನ್ನು ಇನ್ನಷ್ಟು ಕಠಿಣಗೊಳಿಸಬೇಕು.

ಸಾರ್ವಜನಿಕ ಸೇವೆಯಲ್ಲಿ ಇರುವವರ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ವಿಧಿಸುವ ಶಿಕ್ಷೆಯ ಪ್ರಮಾಣವನ್ನು ಹಾಲಿ ಇರುವ 2 ವರ್ಷಗಳಿಂದ 1 ವರ್ಷಕ್ಕೆ ಇಳಿಸಬೇಕು.

ವ್ಯಭಿಚಾರ ಕಾಯ್ದೆಯನ್ನು ಲಿಂಗ ತಾಟಸ್ಥ ಮಾಡಬೇಕು. ಹಾಲಿ ಇರುವ ಕಾಯ್ದೆಯಡಿ ವಿವಾಹಿತ ಮಹಿಳೆಯೊಬ್ಬಳು ತನ್ನ ಪತಿಯ ಅನುಮತಿ ಇಲ್ಲದೇ ಪರಪುರುಷನ ಸಂಗ ಮಾಡಿದರೆ, ಅಂಥ ಪ್ರಕರಣದಲ್ಲಿ ಪುರುಷನಿಗೆ ಮಾತ್ರ ಶಿಕ್ಷೆ ವಿಧಿಸಲಾಗುತ್ತದೆ.

ಮಹಿಳೆಯರು ಯಾವುದೇ ಶಿಕ್ಷೆ ಗುರಿಯಾಗುವುದಿಲ್ಲ. ಹೀಗಾಗಿ ಅವರನ್ನು ಪ್ರಕರಣದಲ್ಲಿ ದೋಷಿ ಎಂದು ಪರಿಗಣಿಸಿ ಶಿಕ್ಷೆಗೆ ಗುರಿಪಡಿಸಬೇಕು.

ಇಬ್ಬರು ಪುರುಷರು, ಇಬ್ಬರು ಮಹಿಳೆಯರು ಮತ್ತು ಸಲಿಂಗಿಗಳ ನಡುವೆ ನಡೆಯುವ ಸಮ್ಮತಿ ಇಲ್ಲದೆ ಲೈಂಗಿಕ ಚಟುವಟಿಕೆಯನ್ನು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸಬೇಕು ಎಂದು ಈ ಹಿಂದಿನ ಸಭೆಯಲ್ಲಿ ಶಿಫಾರಸಿಗೆ ನಿರ್ಧರಿಸಲಾಗಿತ್ತು.

**ಆಧಾರ:**ಪ್ರಜಾವಾಣಿ, ದಿನಾಂಕ: 07.11.2023

## 4. ಮಹುವಾ ಉಚ್ಚಾಟನೆಗೆ ಶಿಫಾರಸ್ಸು

ಪ್ರಶ್ನೆ ಕೇಳಲು ಹಣ ಪಡೆದ ಆರೋಪದ ಅಡಿಯಲ್ಲಿ ಟಿಎಂಸಿ ಸಂಸದೆ ಮಹುವಾ ಮೊಯಿಶ್ರಾ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಬೇಕು ಎಂದು ಲೋಕಸಭೆಯ ನೀತಿ ಸಮಿತಿಯು ಶಿಫಾರಸ್ಸು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭೆಯ ನೀತಿ ಸಮಿತಿಯು ಸಂಸದರೊಬ್ಬರನ್ನು ಸದನದಿಂದ ಹೊರಹಾಕುವಂತೆ ಶಿಫಾರಸು ಮಾಡಿರುವುದು ಇದೆ ಮೊದಲಿರಬೇಕು ಎಂದು ಲೋಕಸಭಾ ಸಚಿವಾಲಯದ ನಿವೃತ್ತ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ ಆಚಾರಿ ಹೇಳಿದ್ದಾರೆ.

ಬಿಜೆಪಿಯಿಂದ ಸಂಸದ ವಿನೋದ್‌ಕುಮಾರ್ ಸೋನಕರ್ ನೇತೃತ್ವದ ನೀತಿ ಸಮಿತಿಯು ಇಲ್ಲಿ ಸಭೆ ಸೇರಿ, ಮಹುವಾ ಅವರನ್ನು ಹೊರಹಾಕುವಂತೆ ಶಿಫಾರಸು ಮಾಡಿರುವ ವರದಿಯನ್ನು ಅಂಗೀಕರಿಸಿತು. ವರದಿಯ ಅಂಗೀಕಾರಕ್ಕೆ ನೀತಿ ಸಮತಿಯ ಆರು ಜನ ಸದಸ್ಯರು ಬೆಂಬಲ ಸೂಚಿಸಿದರು. ನಾಲ್ಕು ಮಂದಿ ವಿರೋಧಿಸಿದರು ಎಂದು ಸೋನಕರ್ ಅವರು ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ಸಮಿತಿಯ ಶಿಫಾರಸು **'ಪೂರ್ವಗ್ರಹ ಪೀಡಿತವಾಗಿದೆ'** ಮತ್ತು ತಪ್ಪಾಗಿದೆ ಎಂದು ವಿರೋಧ ಪಕ್ಷಗಳ ಸದಸ್ಯರು ಆರೋಪಿಸಿದ್ದಾರೆ. ಕಾಂಗ್ರೆಸ್ ಸದಸ್ಯೆ ಪ್ರಣೀತ್ ಕೌರ್ ಅವರು ವರದಿಯ ಪರವಾಗಿ ಮತ ಚಲಾಯಿಸಿದರು ಎಂದು ಮೂಲಗಳು ಹೇಳಿವೆ.

ನೀತಿ ಸಮಿತಿಯು ಈ ಮೊದಲು ಮಹುವಾ ಅವರಿಂದ ಪ್ರತಿಕ್ರಿಯೆ ಪಡೆದಿತ್ತು. ಮಹುವಾ ಅವರ ವಿರುದ್ಧ ದೂರು ಸಲ್ಲಿಸಿದ್ದ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಮತ್ತು ವಕೀಲ ಅನಂತ್ ದೇಹದ್ರಾಯ್ ಅವರೂ ಸಮಿತಿಯ ಮುಂದೆ ಹಾಜರಾಗಿದ್ದರು. ದೇಹದ್ರಾಯ್ ಅವರು ನೀಡಿದ ಮಾಹಿತಿ ಆಧರಿಸಿ, ನಿಶಿಕಾಂತ್ ದುಬೆ ಅವರು ಮಹುವಾ ವಿರುದ್ಧ ಆರೋಪ ಹೊರಿಸಿದ್ದರು. ಮಹುವಾ ಅವರು ದರ್ಶನ್ ಹೀರಾನಂದಾನಿ ಎಂಬ ವಾಣಿಜ್ಯೋದ್ಯಮಿಯ ನಿರ್ದೇಶನಕ್ಕೆ ಅನುಸಾರವಾಗಿ, ಅವರಿಂದ ಉಡುಗೊರೆಗಳನ್ನು ಪಡೆದು ಅದಾನಿ ಸಮೂಹ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ದುಬೆ ಆರೋಪಿಸಿದ್ದರು. ಹಣ ಪಡೆದ ಆರೋಪಗಳನ್ನು ಮಹುವಾ ಅವರು ಅಲ್ಲಗಳೆದಿದ್ದಾರೆ.

**ವರದಿಯಲ್ಲಿ ಏನಿದೆ:** ಮಹುವಾ ಅವರು ತಮ್ಮ ಲೋಕಸಭಾ ಪೋರ್ಟಲ್‌ನ ಲಾಗಿನ್ ವಿವರಗಳನ್ನು ಹೀರಾನಂದಾನಿ ಜೊತೆ ಹಂಚಿಕೊಂಡಿದ್ದರು. ಹೀರಾನಂದಾನಿ ಅವರು ಯುಎಇಯಲ್ಲಿ ಇರುತ್ತಾರೆ. ಮಹುವಾ ಅವರ ಪೋರ್ಟಲ್ ಅನ್ನು 2019 ರಿಂದ 2023ರ ನಡುವಿನ ಅವಧಿಯಲ್ಲಿ ಯುಎಇಯಲ್ಲಿ 47 ಬಾರಿ ಬಳಕೆ ಮಾಡಲಾಗಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಗೊತ್ತಾಗಿದೆ.

ಲಾಗಿನ್ ವಿವರಗಳನ್ನು ಬೇರೆಯವರಿಗೆ ಕೊಡುವುದು ವ್ಯವಸ್ಥೆಯು ಗಂಭೀರವಾದ ಸೈಬರ್ ದಾಳಿಗೆ ತುತ್ತಾಗುವ ಸಾಧ್ಯತೆಯನ್ನು ಸೃಷ್ಟಿಸುತ್ತದೆ. ಇದು ಇಡೀ ಪೋರ್ಟಲ್ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಿ, ದೇಶದ ಸಂಸತ್ತಿನ ಚಟುವಟಿಕೆಗಳಿಗೆ ಗಂಭೀರ ಸ್ವರೂಪದ ಅಡ್ಡಿ ಉಂಟುಮಾಡಬಹುದು ಎಂದು ನೀತಿ ಸಮಿತಿಯ ವರದಿಯಲ್ಲಿ ಹೇಳಲಾಗಿದೆ ಎಂದು ತಿಳಿದುಬಂದಿದೆ.

ಸೈಬರ್ ದಾಳಿಯನ್ನು ನಡೆಸುವವರು, ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸುಳ್ಳಿನ ಸಂಕಲನಗಳನ್ನು ಸೃಷ್ಟಿಸಿ ಸಂಸತ್ತಿನ ಪೋರ್ಟಲ್‌ನಲ್ಲಿ ಅವುಗಳನ್ನು ತೂರಿಸಿ, ದೇಶದ ಭದ್ರತೆಯ ಮೇಲೆ ಕೆಟ್ಟ ಪರಿಣಾಮ ಬೀರಬಲ್ಲರು ಎಂದು ಹೇಳಲಾಗಿದೆ.

ಜಮ್ಮು ಮತ್ತು ಕಾಶ್ಮೀರ ಮರುವಿಂಗಡಣೆ ಮಸೂದೆ 2019 ಅನ್ನು ಪೋರ್ಟಲ್‌ನಲ್ಲಿ ಲಭ್ಯವಾಗಿತ್ತು. ಆದರೆ ಇದು ಸಾರ್ವಜನಿಕರಿಗೆ ಲಭ್ಯವಿರಲಿಲ್ಲ. ಇಂತಹ ಸೂಕ್ಷ್ಮ ಮಸೂದೆಗಳ ವಿವರಗಳು ಸೋರಿಕೆಯಾದಲ್ಲಿ ದೇಶದ ಭದ್ರತಗೆ ಅಪಾಯ ಒಡ್ಡಬಲ್ಲ ಶಕ್ತಿಗಳು ಅದನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ಮೂಲಗಳು ವಿವರಿಸಿವೆ.

**ಆಧಾರ:** ವಿಜಯವಾಣಿ, ದಿನಾಂಕ: 10.11.2023

## 5. Over 700 bills by private members pending in LS

MORE than 700 private member bills are pending in the Loksabha to date. Many of these bills weere introduced in June 2019 soon after the present Loksabha was formed. The bills were tabled as recently as August this year during the monsoon session of parliament.

The winter session of parliament is all set to start on December 4 and will continue till December 22 with a strong possibility of both Houses witnessing uproar over the controversy over cash-for query involving TMC leader Madua Moitra and other issues.

Private member bills are the measures introduced by MPs in their personal capacity. The aim of bringing a private bill is to highlight new laws that an MP thinks should be introduced or changes they believe are necessary in the existing statutes.

According to a Lok Sabha bulletin issued on Friday, as many as 713 such bills are pending in the Lok Sabha.

To introduce a,private members bills during a session, a private member may provide a maximum of three notices Such a bill is intended to alert the government to problems with the current legal system that certain MPs believe call for legislative action.

These bills generally deal with issues like briging a Uniform Civil Code, gender equality, climate change, agriculture, amendment to the existing criminal and electoral laws and amending constitutional provisions and others.

As per parliamentary rules, the second half of every Friday during the session is reserved for the members to introduce or discuss private member bills or resolutions in both Houses.

Accoring to the rules, soon after a debate on a private member bill is over, the minister concerded has to respond or request the member to withdraw it.

Of the 300 or so private members' bills introduced in the 14th Lok Sabha, barely 4% were discussed; 96% lapsed without even a single debate in the House. To date Parliament has passed a total of 14 private members bills.

**Courtesty:** Indian Express, Dated: 20.11.2023.

# ಭಾಗ–4

# ಕೇಂದ್ರ ಸರ್ಕಾರದ ಸುದ್ದಿಗಳು

## 1. Terrorism, for any reason, is against humanity:Modi

Amid the ongoing war between Israel and the Palestinian militant group, Prime Minister Narendra Modi on Friday asserted that terrorism anywhere in the world, for any reason, is against humanity.

Addressing the inaugural session of the Ninth G-20 Parliamentary Speakers' Summit (P-20), Mr.Modi pointed out that there is no consensus on the definition of terrorism even in the United Nations(UN) and "enemies of humanity take advantage of this".,

Time for Peace: Nothing that a divided world cannot provide solutions to global challenges, the Prime Minister said "this is time for peace and brotherhood' and called for an end to the 'crisis in global trust and move forward with a human centric approach'. Everyone is aware of what is happening in various parts of the world. The world is grappling with conflicts and confrontations, such a world full of conflicts and confrontation is not in anyone's interest, "Mr Modi said.

The even, held at the Yashobhoomi convention centre in New Delhi's Dwarka area, is being attended by Speakers of Parliaments of G-20 members and invitee countries. However, amide the diplomatic freeze between India and Canada, Speaker of the Canadian Senate, Raymonde Gagne, dropped out last minute. While Canada had accused Indian agents of killing one of their citizens, Khalistani separatist leader Hardeep Singh Nijjar, India has been vocal about Canada being a "safe haven for terrorists.

Calling for a "tough approach' against terrorism, Mr.Modi pointed out how India has been a victim of cross-border terrorism for decades. He recalled how terrorists had targeted the old Parliament building when it was in session. " Terrorists wanted to take hostage, kill MPs. India has dealt with numerous such terror incidents. Now the world is also realising how big a challenge terrorism is for the world. Terrorism, wherever it may be, for whatever reason, in whatever form, is against humanity, "he said.

Mr. Modi lamented that even now there is no consensus on the definition of terrorism. "Even today, the International Convention on Combating Terrorism is waiting for consensus in the UN. The enemies of humanity are taking advantage of this attitude of the world," he said.

Referring to the democracy in India, Mr. Modi obseved that the general elections in the country are considered the biggest festival and next year, 100 crore voters will be eligible to exercise their mandate. He said the use of electronic voting machines had increased transparency as well as efficiency while conducting elections. ' I extend an advance invitation to all the delegates of the p-20 Summit to come and watch the elections to be held next year. 'he said.

**Courtesy:** The Hindu, Dated: 14.10.2023

## 2. ಇಸ್ರೋಗೆ 2 ಟಾರ್ಗೆಟ್

ಚಂದ್ರಯಾನ–3 ಯೋಜನೆಯ ಯಶಸ್ವಿನಿಂದ ಪ್ರೇರಣೆಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಇನ್ನೆರಡು ಮಹತ್ವಾಕಾಂಕ್ಷೆಯ ಗುರಿಗಳನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮುಂದಿಟ್ಟಿದ್ದಾರೆ. 2035ರ ವೇಳೆಗೆ ಭಾರತೀಯ ಆಂತರಿಕ್ಷ ನಿಲ್ದಾಣದ ಸ್ಥಾಪನೆ ಹಾಗೂ ಭಾರತದಿಂದ ಪ್ರಥಮ ವ್ಯಕ್ತಿಯನ್ನು 2040ರ ಹೊತ್ತಿಗೆ ಚಂದ್ರನಲ್ಲಿಗೆ ಕಳುಹಿಸುವುದು.

ಇಸ್ರೋ ಅಧ್ಯಕ್ಷ ಎನ್. ಸೋಮನಾಥ್ ಗಗನಯಾನ ಮಿಷನ್ ಪ್ರಗತಿ ಬಗ್ಗೆ ಪ್ರಧಾನಿಗೆ ವಿವರಿಸುವ ಸಂದರ್ಭದಲ್ಲಿ ದೇಶದ ಬಾಹ್ಯಾಕಾಶ ಕ್ಷೇತ್ರದ ಮುಂದಿನ ಸಾಹಸಗಳ ಪಟ್ಟಿಯನ್ನು ಮೋದಿ ಪ್ರಸ್ತುತಪಡಿಸಿದರು. ಭಾರತದ ಪ್ರಪ್ರಥಮ ಮಾನವಸಹಿತ ಬಾಹ್ಯಾಕಾಶ ನೌಕೆ 2025ರಲ್ಲಿ ಉಡಾವಣೆಗೊಳ್ಳಲಿದೆ ಎಂದು ಸಭೆಯ ನಂತರ ಪ್ರಧಾನಮಂತ್ರಿ ಕಛೇರಿ ತಿಳಿಸಿದೆ.

ಬಾಹ್ಯಾಕಾಶ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಗಗನಯಾನ ಮಿಷನ್‌ನ ಸಮಗ್ರ ಸ್ಥೂಲ ನಕ್ಷೆಯನ್ನು ಪ್ರಸ್ತುತಪಡಿಸಿದರು. ಮಾನವಸಹಿತ ನೌಕೆಗಳನ್ನು (ಹ್ಯೂಮನ್–ರೇಟೆಡ್ ಲಾಂಚ ವೆಹಿಕಲ್–ಎಚ್‌ಎಲ್‌ವಿಎಂ) ಕಳುಹಿಸುವ ಸಾಮರ್ಥ್ಯದ ರಾಕೆಟ್‌ಗಳು ಮತ್ತು ಸಿಸ್ಟಂ ಕ್ವಾಲಿಫಿಕೇಶನ್ ಸಹಿತ ವಿವಿಧ ತಂತ್ರಜ್ಞಾನಗಳ ಅಭಿವೃದ್ಧಿ ಅದರಲ್ಲಿ ಸೇರಿವೆ.

ಶುಕ್ರಗ್ರಹದ ಆರ್ಬಿಟರ್ ಮತ್ತು ಮಂಗಳ ಲ್ಯಾಂಡರ್ ಸಹಿತ ಅಂತರಗ್ರಹ ಯೋಜನೆಗಳತ್ತ ಹೆಚ್ಚಿನ ಕೆಲಸ ಮಾಡುವಂತೆ ಸಭೆಯಲ್ಲಿ ಪ್ರಧಾನಿ ಮೋದಿ ವಿಜ್ಞಾನಿಗಳನ್ನು ಹುರಿದುಂಬಿಸಿದರು. ಚಂದ್ರನ ವಿಸ್ತೃತ ಅನ್ವೇಷಣೆ ನಡೆಸುವಂತೆಯೂ ಅವರು ಸಲಹೆ ಮಾಡಿದರು. ಚಂದ್ರಯಾನ–3 ಮತ್ತು ಆದಿತ್ಯ–ಎಲ್1 ಮಿಷನ್‌ನಂಥ ಇತ್ತೀಚಿನ ಭಾರತೀಯ ಬಾಹ್ಯಾಕಾಶ ಉಪಕ್ರಮಗಳ ಯಶಸ್ವಿನ ಬೆನ್ನೇರಿ ಇನ್ನಷ್ಟು ಮಹತ್ಕಾರ್ಯಗಳನ್ನು ಸಾಧಿಸಬೇಕಿದೆ. 2035ರೊಳಗೆ ಭಾರತೀಯ ಅಂತರಿಕ್ಷ ನಿಲ್ದಾಣ ಸ್ಥಾಪನೆ ಮತ್ತು 2040ರೊಳಗೆ ಭಾರತದಿಂದ ಮೊದಲ ವ್ಯಕ್ತಿಯನ್ನು ಚಂದ್ರನ ಮೇಲೆ ಕಳುಹಿಸುವುದು ಅವುಗಳಲ್ಲಿ ಸೇರಿವೆ ಎಂದು ಪ್ರಧಾನಿ ಕಛೇರಿಯಿಂದ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ವಿವರಿಸಲಾಗಿದೆ. ಈ ದೂರದೃಷ್ಟಿ ಯೋಜನೆಗಳನ್ನು ಸಾಕಾರಗೊಳಿಸಲು ಬಾಹ್ಯಾಕಾಶ ಇಲಾಖೆಯು ಚಂದ್ರನ ಅನ್ವೇಷಣೆಯ ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸಲಿದೆ. ಸರಣಿ ಚಂದ್ರಯಾನ ಮಿಷನ್‌ಗಳು, ಹೊಸ ರಾಕೆಟ್ (ನ್ಯೂ ಜನರೇಶನ್ ಲಾಂಚ್ ವೆಹಿಕಲ್–ಎನ್‌ಜಿಎಲ್‌ವಿ) ಅಭಿವೃದ್ಧಿಡಿಸುವುದು ಹೊಸ ಲಾಂಚ್ ಪ್ಯಾಡ್ ಕಟ್ಟುವುದು ಮತ್ತು ಮಾನವ ಕೇಂದ್ರಿತ ಪ್ರಯೋಗಾಲಯಗಳು ಹಾಗೂ ತತ್ಸಂಬಂಧಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು ಇಸ್ರೋದ ಚಂದ್ರ ಅನ್ವೇಷಣೆ ಯೋಜನೆಗಳಲ್ಲಿ ಸೇರಿವೆ.

ಇಬ್ಬರು ಗಗನಯಾನಿಗಳನ್ನು ಭೂಮಿಯ ಕೆಳಕಕ್ಷೆಗೆ ಕಳುಹಿಸುವ ಗಗನಯಾನ ಮಿಷನ್ ಅನ್ನು 2022ರಲ್ಲಿ ನಡೆಸಲು ಯೋಜಿಸಲಾಗಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕತೆ ಮತ್ತು ಯೋಜನೆಯ ಕೆಲವು ಸಂಕೀರ್ಣತೆಗಳಿಂದಾಗಿ ವಿಳಂಬವಾಗಿತ್ತು. 2024ರ ಉತ್ತರಾರ್ಧದಲ್ಲಿ ಭಾರತದ ಮೊದಲ ಮಾನವಸಹಿತ ಬಾಹ್ಯಾಕಾಶ ಯಾನ ನಡೆಯುವ ನಿರೀಕ್ಷೆಯಿದೆ. ಈ ನಿಟ್ಟಿನಲ್ಲಿ 21ರಂದು ನಡೆಯಲಿರುವ ಮಾಡ್ಯೂಲ್ ಪರೀಕ್ಷೆಗೆ ಇಸ್ರೋ ಸಜ್ಜಾಗಿದೆ. ಶ್ರೀಹರಿಕೋಟಾದ ಎರಡನೇ ಲಾಂಚ್ ಪ್ಯಾಡ್‌ನ ರಾಕೆಟ್ ಮೂಲಕ ಈ ಮಾಡ್ಯೂಲ್ ಉಡ್ಡಯನ ಮಾಡಲಾಗುತ್ತದೆ ಎಂದು ಇಸ್ರೋ ಹೇಳಿದೆ. ಪರೀಕ್ಷಾ ವಾಹನವು ಸಿಬ್ಬಂದಿ ಮಾಡ್ಯೂಲ್ ಹೊತ್ತೊಯ್ಯಲಿದ್ದು ಅಂದಾಜು 17 ಕಿಮೀ ಎತ್ತರದಲ್ಲಿ ಪ್ರತ್ಯೇಕಗೊಳ್ಳಲಿದೆ. ನಂತರ ಶ್ರೀಹರಿಕೋಟಾದಿಂದ ಸುಮಾರು 10ಕಿ.ಮೀ ದೂರದ ಸಮುದ್ರದಲ್ಲಿ ಇಳಿಯಲಿದೆ. ಗಗನಯಾನಕ್ಕಾಗಿ ಈ ಹಿಂದೆ ನಡೆದ ಹಲವು ಪ್ರಾಯೋಗಿಕ ಪರೀಕ್ಷೆಗಳು ಯಶಸ್ಸು ಸಾಧಿಸಿರುವುದು ಇಸ್ರೋ ವಿಜ್ಞಾನಿಗಳ ವಿಶ್ವಾಸ ಹೆಚ್ಚಿಸಿವೆ.

ಎಚ್‌ಎಲ್‌ವಿಎಂ3ರ ಮಾನವ ರಹಿತ ಮೂರು ಮಿಷನ್‌ಗಳ ಸಹಿತ ಅಂದಾಜು 20 ಪ್ರಮುಖ ಪರೀಕ್ಷೆಗಳನ್ನು ನಡೆಸಲು ಯೋಜನೆ ರೂಪಿಸಿರುವುದನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

**ಆಧಾರ:** ವಿಜಯವಾಣಿ, ದಿನಾಂಕ: 18.10.2023

## 3. ಒಂದು ರಾಷ್ಟ್ರ, ಒಂದು ಚುನಾವಣೆ ದೇಶಹಿತಕ್ಕೆ ಪೂರಕ ಎಂದ ಕೋವಿಂದ್

ಒಂದು ರಾಷ್ಟ್ರ ಒಂದು ಚುನಾವಣೆಯ ವಿಷಯವನ್ನು ಪಕ್ಷಾತೀತವಾಗಿ ನೋಡಬೇಕು. ಏಕೆಂದರೆ, ಇದು ದೇಶದ ಹಿತಕ್ಕೆ ಸಂಬಂಧಿಸಿದ್ದಾಗಿದೆ ಎಂದು ಒಂದು ರಾಷ್ಟ್ರ, ಒಂದು ಚುನಾವಣೆ ಕುರಿತು ರಚಿಸಲಾದ ಸಮಿತಿಯ ಅಧ್ಯಕ್ಷ ರಾಮನಾಥ ಕೋವಿಂದ್ ಹೇಳಿದ್ದಾರೆ. ಅವರು ಮಾಧ್ಯಮಗಳೊಂದಿಗೆ ಮಾತನಾಡುತ್ತ ಈ ಅಭಿಪ್ರಾಯ ವ್ಯಕ್ತಪಡಿಸಿದರು. ಕೇಂದ್ರದಲ್ಲಿ ಬಿಜೆಪಿ ಅಥವಾ ಕಾಂಗ್ರೆಸ್ ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ, ಇದರಿಂದ ಅನುಕೂಲವಾಗಲಿದೆ. ಜನರ ದುಡ್ಡು ಪ್ರತ್ಯೇಕ ಚುನಾವಣೆಗಳಿಗಾಗಿ ವೆಚ್ಚವಾಗುವ ಬದಲು, ಇದೇ ಹಣ ಜನಹಿತದ ಕಾರ್ಯಗಳಿಗೆ, ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬಹುದು. ಸ್ವತಂತ್ರ್ಯ ಭಾರತದಲ್ಲಿ 1952 ರಿಂದ 1967 ರವರೆಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಒಟ್ಟಿಗೇ ಚುನಾವಣೆ ನಡೆದಿದೆ. ಹೀಗಿರುವಾಗ, ಈ ನೀತಿಯನ್ನು ಮತ್ತೆ ಅಳವಡಿಸಿಕೊಳ್ಳಲು ಇದು ಸಕಾಲ ಎಂದರು.

**ಆಧಾರ:** ವಿಜಯವಾಣಿ, ದಿನಾಂಕ: 22.11.2023

# ಭಾಗ–5

# ರಾಜ್ಯ ಸರ್ಕಾರದ ಸುದ್ದಿಗಳು

# ರಾಜ್ಯ ಸರ್ಕಾರದ ಸುದ್ದಿಗಳು

## 1. ಮೇಕೆದಾಟು ಉತ್ಸಾಹಕ್ಕೆ ಹೊಗೇನಕಲ್ ತಣ್ಣೀರು

ಮೇಕೆದಾಟು ಯೋಜನೆ ಜಾರಿಗೆ ಕರ್ನಾಟಕ ಹೆಚ್ಚೆಚ್ಚು ಆಸಕ್ತಿ ವ್ಯಕ್ತಪಡಿಸುತ್ತಿದ್ದಂತೆ ನೆರೆಯ ತಮಿಳುನಾಡು ಹೊಗೇನಕಲ್ ಜಲವಿದ್ಯುತ್ ಯೋಜನೆ ಅನುಷ್ಠಾನದ ವಿಚಾರ ಮುಂದೆ ತರಲು ತೆರೆಮೆರೆಯ ಸಿದ್ಧತೆ ನಡೆಸಿದೆ.

ಕೆಲವು ವರ್ಷಗಳ ಹಿಂದೆ ಹೊಗೇನಕಲ್‌ನಿಂದ ಕಿಲೋಮೀಟರ್ ಹಿಂದೆ ಗುಡ್ಡಗಳಲ್ಲಿ ಸೀಮೆಸುಣ್ಣದಲ್ಲಿ ಮಾರ್ಕಿಂಗ್ ಮಾಡಿದ್ದು, ಕರ್ನಾಟಕದ ಬೆಟ್ಟದಿಂದ ಆರಂಭವಾದ ಮಾರ್ಕಿಂಗ್ ನದಿದಾಟಿ ತಮಿಳುನಾಡಿನ ಗುಡ್ಡದಲ್ಲಿ ಈಗಲೂ ಅಲ್ಲಲ್ಲಿ ಕಂಡುಬರುತ್ತದೆ. ಜಲ ವಿದ್ಯುತ್ ಯೋಜನೆಗಾಗಿ ಅಧಿಕಾರಿಗಳು ಸಮೀಕ್ಷೆ ನಡೆಸಿ ಮಾಡಿದ ಮಾರ್ಕಿಂಗ್ ಅದಾಗಿತ್ತು. ವಿವಾದ ಜೋರಾಗುತ್ತಿದ್ದಂತೆ ತಮಿಳುನಾಡು ಸುಮ್ಮನಾಗಿತ್ತು.

ಈ ಜಲವಿದ್ಯುತ್ ಉತ್ಪಾದನೆ ಯೋಜನೆ ಅನುಷ್ಠಾನವಾದರೆ ಅಣೆಕಟ್ಟಿನ ಹಿನ್ನೀರಿನಿಂದ ಕರ್ನಾಟಕ ಮತ್ತು ತಮಿಳುನಾಡಿನ ಅರಣ್ಯಪ್ರದೇಶ, ಆ ಭಾಗದ ಹಳ್ಳಿಗಳು ಮುಳುಗಡೆಯಾಗುತ್ತವೆ. ಒಂದಷ್ಟು ಜನ ನಿರಾಶ್ರಿತರಾಗಬೇಕಾಗುತ್ತದೆ. ಜೊತೆಗೆ ನೀರು ಹರಿಯುವುದು ಕಡಿಮೆಯಾಗಿ ಹೊಗೇನಕಲ್‌ನ ಜಲಪಾತದ ಮಹತ್ವ ಕಡಿಮೆಯಾಗುವ ಸಾಧ್ಯತೆ ಇದೆ. ಇನ್ನು ಕುಡಿಯುವ ನೀರಿನ ಯೋಜನೆ ವಿಚಾರಕ್ಕೆ ಬಂದರೆ. ಹೊಗೇನಕಲ್ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತವನ್ನು ಜಾರಿಗೊಳಿಸಲು ತಮಿಳುನಾಡಿಗೆ ಕಾನೂನು ಮತ್ತು ಮಾನವೀಯ ಆಧಾರದ ಮೇಲೆ ಹಕ್ಕುಗಳಿವೆ ಎಂದು ಅಲ್ಲಿನ ಜಲಸಂಪನ್ಮೂಲ ಸಚಿವ ದುರೈಮುರುಗನ್ ಕಳೆದ ವರ್ಷ ಬಹಿರಂಗವಾಗಿಯೇ ಪ್ರತಿಪಾದಿಸಿದ್ದರು.

ಕಾವೇರಿ ಜಲ ವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪು ಷರತ್ತು–18 ಮತ್ತು ಫೆಬ್ರವರಿ 16, 2018ರ ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ, ಈ ಯೋಜನೆಯನ್ನು ಕಾರ್ಯಗತಗೊಳಿಸುವ ಹಕ್ಕು ಇದೆ. ಕುಡಿಯುವ ನೀರಿನ ಅಗತ್ಯಗಳಿಗೆ ಇದು ಅತ್ಯಗತ್ಯ ಎಂಬ ವಾದವನ್ನು ತಮಿಳುನಾಡು ಮುಂದಿಡುತ್ತಿದೆ. ಧರ್ಮಪುರಿ ಮತ್ತು ಕೃಷ್ಣಗಿರಿ ಜಲ್ಲೆಗಳಿಗೆ ಹೊಗೇನಕಲ್ ಕುಡಿಯುವ ನೀರಿನ ಎರಡನೇ ಹಂತದ ಯೋಜನೆಯನ್ನು ರೂ.4,600 ಕೋಟಿ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ತಮಿಳುನಾಡು ಸರ್ಕಾರವು ಸಮಗ್ರ ಯೋಜನಾ ವರದಿ ಸಿದ್ಧಪಡಿಸಿಕೊಂಡಿದೆ.

ಆದರೆ, ಕರ್ನಾಟಕ ಮುಂಚಿನಿಂದಲೂ ಈ ಪ್ರಸ್ತಾಪಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಲೇ ಬಂದಿದೆ. ಈ ಯೋಜನೆಯಿಂದ ಕಾವೇರಿ ನೀರು ಹಂಚಿಕೆಯ ತನ್ನ ಪಾಲಿನ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಒಂದು ವಾದವಾದರೆ, ಕರ್ನಾಟಕದ ಗಡಿ ವಿಚಾರದಲ್ಲಿ ಇನ್ನು ಸ್ಪಷ್ಟತೆ ಇಲ್ಲ. ಹೊಗೇನಕಲ್ ಭೌಗೋಳಿಕವಾಗಿ ಎರಡೂ ರಾಜ್ಯಗಳ ವ್ಯಾಪ್ತಿಯಲ್ಲಿ ಬರುವುದರಿಂದ ಒಪ್ಪಲು ಸಾಧ್ಯವೇ ಇಲ್ಲ ಎಂಬುದು ಎರಡನೇ ವಾದ. ಈ ಸಂಬಂಧ 2008ರಲ್ಲಿ ಹೋರಾಟವೂ ನಡೆದಿತ್ತು.

ಇನ್ನು ಕುಡಿಯುವ ನೀರಿನ ಯೋಜನೆಗೆ ತಾಂತ್ರಿಕವಾಗಿ ತಮಿಳುನಾಡಿಗೆ ಅಡ್ಡಿಯೊಡ್ಡುವ ಅವಕಾಶಕ್ಕೆ ಕಡಿಮೆ ಇದೆ. 30 ಲಕ್ಷ ಜನರಿಗೆ ಕುಡಿಯುವ ನೀರು ದೊರಕಿಸುವ ಯೋಜನೆ ಇದಾಗಿದೆ ಎಂದು ಜಲಸಂಪನ್ಮೂಲ ಇಲಾಖೆ ನಿವೃತ್ತ ಅಧಿಕಾರಿಗಳು ವಿವರಿಸುತ್ತಾರೆ. ಕರ್ನಾಟಕದಿಂದ ತಮಿಳುನಾಡಿಗೆ

ನಿಲುಗಡೆಯಾಗುವ ನೀರು ಬಿಳಿಗುಂಡ್ಲುವಿನಲ್ಲಿ ಅಳೆಯಲಾಗುತ್ತದೆ. ಬಿಳಿಗುಂಡ್ಲುವಿನಿಂದ ಹೊಗೆನಕಲ್ ಮೂಲಕ ಧುಮುಕಿದರೆ ಸೇರುವುದು ನೇರವಾಗಿ ಮೆಟ್ಟೂರು ಅಣೆಕಟ್ಟಿನ ಹಿನ್ನೀರಿಗೆ. ಹೀಗಾಗಿ ಆ ನೀರು ತಮಿಳುನಾಡಿನ ಪಾಲಿನದೆ ಆಗಿರುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ.

**ಮೇಕೆದಾಟು ಪ್ರಯೋಜನ:**

- ಸಂಕಷ್ಟದ ಸಮಯಲ್ಲಿ ಎರಡೂ ರಾಜ್ಯಗಳಿಗೆ ನೀರಿನ ಬಳಕೆಗೆ ಪರಿಹಾರವಾಗಲಿದೆ.
- ಈ ಯೋಜನೆಯಿಂದ 66 ಟಿಎಂಸಿ ನೀರು ತಮಿಳುನಾಡಿಗೆ ಸೇರುತ್ತದೆ.
- ಕೆಆರ್‌ಎಸ್, ಕಬಿನಿ, ಹೇಮಾವತಿ ಅಣೆಕಟ್ಟೆಗಳ ಮೇಲಿನ ಒತ್ತಡ ತಗ್ಗುತ್ತದೆ.
- ಬೆಳೆಯುತ್ತಿರುವ ಬೆಂಗಳೂರಿನ ಕುಡಿಯುವ ನೀರಿಗೂ ಸಾಕಷ್ಟು ಅನುಕೂಲ ಆಗಲಿದೆ.

**ಆಧಾರ:** ವಿಜಯವಾಣಿ, ದಿನಾಂಕ: 01.10.2023

## 2. State notifies 5.7k acres as forest in just 120 days

In stark contrast to the growing nationwide trend of diverting forest use, Karnataka, over the past few months, has been adding to its existing forest area.

The department has notified a staggering 5,729 acres as a reserve forestin a span of about 120days–a record of sorts. Several senior forest officials revealed that this is the first time in recent years that such a feat has been accomplished and attributed it to the new administrative setup at the secretariat level.

Documents from the forest, environment and ecology secretariat revealed the department approved 29 proposals between June and September, clawing back about 40% of the 5,000 hectares of forests that were diverted for non-forests that were diverted for non-forest purposes from 2008-2023.

Senior officials said any land parcel can be notified as a reserve forest under section 4 of the Karnataka forest Act 1963, but the process of notificiation must go through several hoops as mandated under the Act.

“For example, a forest settlement officer must investigate if any person has any right over the land or its produce and must determine the existence, nature, and extent of these rights. Subsequently, a proposal must be forwarded to the state government for official notification,” and offfical said.

Asked if all the 29 proposals were fresh ones, the official said,” It is a continuous process. But all these years it would have been either stuck with the settlement officer or would have been held up at the secretariat. This is the first time that all proposals that were sent–at various times-to the secretariat have been approved and cleared by the forest minister on a fast-track basis. This has motivated us to work at the same speed.’’

Forest Minister Eshwar B Khandre said the aim is to protect the state’s existing 22% of forest cover and to increase it to more than 30%.

“we have seen the vagaries of claimate change and increasing incidents of human-animal conflicts,’’ khandre said. ‘All of us have the resonsiblity of addressing these issues by expanding our forest cover to 33%. Ever since I took over the reins, we have collectively ensured eviction of encroachment on more than 2,000 acress of forest land. Similarly, thanks to the efforts of our officials , we have been able to notify more than 5,700 acres of reserve forest.”

Demonstrating that charity must begin at home , Khandre has kickstarted the process by notifying 261 acres of land as reserve forest in his home district of Bidar.

**Courtesy:** Times of India, Dated: 04.10.2023

## 3. ವರ್ಷವಿಡೀ ಸುವರ್ಣ ಕರ್ನಾಟಕ ಸಂಭ್ರಮ

ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಗೊಂಡು ಐವತ್ತು ವರ್ಷವಾಗುತ್ತಿರುವ ಹಿನ್ನೆಲೆಯಲ್ಲಿ **‘**ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ**’** ಎಂಬ ಹೆಸರಿನಲ್ಲಿ ನವೆಂಬರ್ 1 ರಿಂದ 2024ರ ನವೆಂಬರ್‌ವರೆಗೆ ಕರ್ನಾಟಕ ಸಂಭ್ರಮ ಆಚರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸುವ ಕುರಿತು ಗೃಹ ಕಚೇರಿ ಕೃಷ್ಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮವನ್ನು ವರ್ಷಪೂರ್ತಿ ನಡೆಸುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ದೇಶಿ ಕ್ರೀಡೆಗಳನ್ನು ಹಮ್ಮಿಕೊಳ್ಳಬೇಕು. ಕರ್ನಾಟಕ ದೇಶಿ ಸಂಸ್ಕೃತಿ ಹೆಚ್ಚು ಬಿಂಬಿತವಾಗಬೇಕು. ಕನ್ನಡ ನಾಡು ಸಂಸ್ಕೃತಿ ಮತ್ತು ಪ್ರಾದೇಶಿಕ ಭವ್ಯತೆಯನ್ನು ಈ ಸಂದರ್ಭದಲ್ಲಿ ಯುವ ಪೀಳಿಗೆಗೆ ದಾಟಿಸುವ ರೀತಿ ಅರ್ಥಪೂರ್ಣ ಮತ್ತು ಸಂಭ್ರಮದ ಕಾರ್ಯಕ್ರಮಗಳನ್ನು ಆಯೋಜಿಸಿ ಎಂದು ಸೂಚನೆ ನೀಡಿದ್ದಾರೆ.

ವಿಧಾನಸೌಧ ಹಾಗೂ ಶಾಸಕರ ಭವನದ ಮಧ್ಯೆ ನಾಡದೇವಿ ಭುವನೇಶ್ವರಿ ಪ್ರತಿಮೆ ಸ್ಥಾಪಿಸಲು ಇದೀಗ ನಿರ್ಧರಿಸಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಕಲಾಗ್ರಾಮದಲ್ಲಿ ನಾಡದೇವಿಯ ಪ್ರತಿಮೆ ಸ್ಥಾಪಿಸುವ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ಆದರೆ ಅನುಷ್ಠಾನ ಸಾಧ್ಯವಾಗಿರಲಿಲ್ಲ. ಆದರೆ ಈ ಬಗ್ಗೆ ಅಳೆದು–ತೂಗಿ ತೀರ್ಮಾನ ತೆಗೆದುಕೊಂಡಿರುವ ಸರ್ಕಾರ ವಿಧಾನಸೌಧ ಹಾಗೂ ಶಾಸಕರ ಭವನದ ಮಧ್ಯೆ ಪ್ರತಿಮೆ ಸ್ಥಾಪಿಸಲು ಮುಂದಾಗಿದೆ.

ಮೈಸೂರಿನಲ್ಲಿ ದೇವರಾಜ ಅರಸರ ಪ್ರತಿಮೆ ಸ್ಥಾಪನೆ, ಧಾರವಾಡದಲ್ಲಿ ದಿ.ಅದರಗುಂಚಿ ಶಂಕರಗೌಡ, ಬಳ್ಳಾರಿಯ ಹುತಾತ್ಮ ರಂಜಾನ್ ಸಾಬ್ ಹಾಗೂ ಗದಗ ಜಿಲ್ಲೆಯ ದಿ.ಅಂದಾನಪ್ಪ ದೊಡ್ಡಮೇಟಿ ಅವರ

ಸ್ಮಾರಕ ಅಭಿವೃದ್ಧಿ ಜೀರ್ಣೋದ್ಧಾರ ಕಾರ್ಯ ಹಮ್ಮಿಕೊಳ್ಳುವುದು ಸೇರಿದಂತೆ ಹಲವು ರೀತಿಯ ಕಾರ್ಯಕ್ರಮಗಳನ್ನು ರೂಪಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಹಲ್ಮಿಡಿ ಶಾಸನದ ಪ್ರತಿಕೃತಿಗಳ ಸ್ಥಾಪನೆ, ಲೇಸರ್ ಶೋ, ಧ್ವನಿ, ಬೆಳಕು ಕಾರ್ಯಕ್ರಮ, ಕರ್ನಾಟಕಕ್ಕೆ ಕೊಡುಗೆ ನೀಡಿದ 50 ಮಹಿಳೆಯರಿಗೆ ಪ್ರಶಸ್ತಿ ನೀಡುವುದು ಹಾಗೂ ನವೆಂಬರ್ 2024 ಕ್ಕೆ ಸಮಾರೋಪ ಸಮಾರಂಭ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಸಭೆ ತೀರ್ಮಾನಿಸಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಲಂಬಾಣಿ ಸಮುದಾಯದ ಭೂಮಿ, ತಾಂಡದ ಸಮಸ್ಯೆಯನ್ನು ಶೀಘ್ರದಲ್ಲಿ ಪರಿಹರಿಸಲಾಗುವುದು. ಕೆಲವೊಬ್ಬರು ಸಚಿವ ಸ್ಥಾನ ಸಿಗಲಿಲ್ಲ ಎಂದು ಹೇಳುತ್ತಿದ್ದರು. ಒಂದಲ್ಲ ಒಂದು ದಿನ ಅವಕಾಶ ಮನೆ ಬಾಗಿಲಿಗೆ ಬರುತ್ತದೆ. ಭೀಮಾ ನಾಯ್ಕ ಅವರು ಸೋತರೂ ಸಚಿವ ಸ್ಥಾನಕ್ಕಿಂತ ದೊಡ್ಡ ಹುದ್ದೆ ಕೊಟ್ಟಿದ್ದೇವೆ. ಸಮುದಾಯದ ಅಭಿವೃದ್ಧಿಗೆ ನಾವು ಜೊತೆಗಿರುತ್ತೇವೆ. ಡಾ.ಉಮೇಶ್ ಜಾದವ್ ಅವರು ಸ್ವಲ್ಪ ಯಾಮಾರಿದರು, ಇಲ್ಲದಿದ್ದರೆ ಒಳ್ಳೆ ಸ್ಥಾನದಲ್ಲಿ ಇರಬಹುದಿತ್ತು ಎಂದು ತಿಳಿಸಿದರು.

ಮುಖ್ಯಮಂತ್ರಿಗಳು ಲಂಬಾಣಿ ಸಮುದಾಯಕ್ಕೆ ಪಿಎಸ್‌ಇ ಸದಸ್ಯ ಸ್ಥಾನ ನೀಡಬೇಕೆಂದು ತೀರ್ಮಾನ ಮಾಡಿದ್ದಾರೆ. ಹೆಚ್ಚಿನ ಜನರು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಕೆಲವರಿಗೆ ಮಾತ್ರ ಕೆಲಸ ಮಾಡುವ ಅವಕಾಶ ದೊರೆಯುತ್ತದೆ. ಯಾರಿಗೆ ದೊರೆಯುತ್ತದೆ ನೋಡೋಣ, ರಾಜಕಾರಣ ಮಾಡುವವರು ಮಾಡುತ್ತಿರುತ್ತಾರೆ. ಆದರೆ ನಾವು ನೀವು ಒಟ್ಟಿಗೆ ಕೆಲಸ ಮಾಡಿದರೆ ಕರ್ನಾಟಕವನ್ನು ಅಭಿವೃದ್ಧಿ ಪಥದ ಕಡೆಗೆ ತೆಗೆದುಕೊಂಡು ಹೋಗಬಹುದು ಎಂದರು. ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಶಾಸಕರಾದ ನೇಮಿರಾಜ ನಾಯ್ಕ್, ಅವಿನಾಶ್ ಜಾದವ್, ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಬಿ.ಸಿದ್ದನಾಯ್ಕ್, ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿಧಾನಸಭೆ, ಉಪ ಸಭಾಪತಿ ರುದ್ರಪ್ಪ ಮಾನಪ್ಪ ಲಮಾಣಿ ಅವರು ಸೇವಾಲಾಲ್ ಪ್ರತಿಮೆ ಅನಾವರಣಗೊಳಿಸಿದರು. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಬಂಜಾರ ಕರಕುಶಲ ವಸ್ತು ಪ್ರದರ್ಶನ ಉದ್ಘಾಟಿಸಿದರು.

**ಆಧಾರ:** ಉದಯವಾಣಿ, ದಿನಾಂಕ: 05.10.2023

## 4. ಒಬಿಸಿಗೆ ಮೀಸಲು ಬಲ

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ 'ಅಧಿಕೃತವಾಗಿ' ರಾಜಕೀಯ ಪ್ರಾತಿನಿಧ್ಯ ಕಲ್ಪಿಸಲು ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ರಚಿಸಿದ್ದ ನ್ಯಾ. ಭಕ್ತವತ್ಸಲ ಆಯೋಗವು ಸಲ್ಲಿಸಿದ ದ್ವಿತೀಯ ಹಾಗೂ ಪೂರಕ ವರದಿಯನ್ನು ನಡೆದ ಸಂಪುಟ ಸಭೆಯಲ್ಲಿ ಅಂಗೀಕರಿಸಲಾಗಿದೆ. ಈ ಹಿಂದಿನ ಎರಡು ಸಭೆಯಲ್ಲಿಯೂ ವರದಿ ಬಗ್ಗೆ ಚರ್ಚೆ ನಡೆದಿದ್ದರೂ ಅಂಗೀಕರಿಸಿರಲಿಲ್ಲ ಇದೀಗ ತೀರ್ಮಾನ ಕೈಗೊಂಡಿದ್ದು, ನಗರ ಸ್ಥಳೀಯ ಸಂಸ್ಥೆ, ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮೀಸಲು ನೀಡಲು ಅವಕಾಶ ಸಿಗಲಿದೆ. ಮಹಾರಾಷ್ಟ್ರ ಪ್ರಕರಣದಲ್ಲಿ ಯಾವ ಆಧಾರ, ಮಾನದಂಡದಲ್ಲಿ ರಾಜಕೀಯ ಮೀಸಲು ನೀಡಲಾಗುತ್ತಿದೆ ಎಂದು ಸರ್ವೋಚ್ಚ ನ್ಯಾಯಾಲಯ ತಿಳಿಯಬಯಸಿತ್ತು. ಹೀಗಾಗಿ ಸರ್ಕಾರ ಹಿಂದುಳಿದ ವರ್ಗಗಳ ಹಿಂದುಳಿದಿರುವಿಕೆಯನ್ನು ಅರಿಯಲು ಆಯೋಗ ರಚಿಸಿತ್ತು. ಇದೀಗ ವರದಿ ಪಡೆದುಕೊಂಡು ತಾನು ಯಾವ ಆಧಾರದಲ್ಲಿ ಮೀಸಲು

ಕೊಡುತ್ತಿದ್ದೇವೆ ಎಂದು ಅಧಿಕೃತ ಮುದ್ರೆಯೊತ್ತಿದೆ. ಇದರಿಂದ ವಿವಿಧ ಹಂತದ ಸ್ಥಳೀಯ ಸಂಸ್ಥೆ ಚುನಾವಣೆಗೆ ಉಂಟಾಗಿದ್ದ ದೊಡ್ಡ ಅಡೆತಡೆ ನಿವಾರಣೆಯಾಗಿದೆ. ಸಮಿತಿಯು ಐದು ಶಿಫಾರಸು ಮಾಡಿದ್ದು, ಅದರಲ್ಲಿ ಮೂರನ್ನು ಮಾತ್ರ ಅಂಗೀಕರಿಸಲಾಗಿದೆ ಎಂದು ಸಭೆಯ ನಂತರ ಕಾನೂನು ಸಚಿವ ಎಚ್.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಮುಂಬರುವ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಶೇ.33ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿರಿಸಲು ಭಕ್ತವತ್ಸಲ ಸಮಿತಿ ಶಿಫಾರಸು ಮಾಡಿದೆ. ಹಾಗೆಯೇ, ಒಟ್ಟಾರೆ, ಮೀಸಲಾತಿಯು ಶೇ.50 ಅನ್ನು ಮೀರದಂತೆ ಮುಂದುವರಿಸಿಕೊಂಡು ಹೋಗುವಂತೆಯೂ ಸ್ಪಷ್ಟವಾಗಿ ವರದಿಯಲ್ಲಿ ತಿಳಿಸಲಾಗಿದೆ. ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣಾ ಶಾಖೆಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹತೋಟಿಗೆ ನೀಡಲು ಮಾಡಿದ ಶಿಫಾರಸ್ಸನ್ನು ಸಹ ಸಚಿವ ಸಂಪುಟ ಸಭೆ ಒಪ್ಪಿದೆ. ಮೂರನೆಯದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಯರ್ ಮತ್ತು ಉಪಮೇಯರ್ ಸ್ಥಾನಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲು ಕಲ್ಪಿಸಬೇಕೆಂಬ ಆಯೋಗದ ಪ್ರಸ್ತಾಪವನ್ನೂ ಒಪ್ಪಲಾಗಿದೆ. ಅಂದಹಾಗೆ, ಅಂಗೀಕರಿಸದಿರುವ ಎರಡು ಪ್ರಮುಖ ಶಿಫಾರಸನ್ನು ಮರು ಪರಿಶೀಲನೆಗೊಳಿಸುವ ಬಗ್ಗೆ ಯಾವುದೇ ಪ್ರಸ್ತಾಪ ಸಹ ಇಲ್ಲ.

**ಆಧಾರ:** ವಿಜಯವಾಣಿ, ದಿನಾಂಕ: 06.10.2023

## 5. ಪಲ್ಲಕ್ಕಿ ಬಸ್ ಸೇವೆಗೆ ಹಸಿರು ನಿಶಾನೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 100 ನೂತನ ಕರ್ನಾಟಕ ಸಾರಿಗೆ, 40 ಹವಾ ನಿಯಂತ್ರಣ ರಹಿತ ಹಾಗೂ 4 ಎಸಿ ಅತ್ಯಾಧುನಿಕ ಸ್ಲೀಪರ್ ಬಸ್(ಪಲ್ಲಕ್ಕಿ)ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮುಂಭಾಗ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನೂತನ ಬಸ್‌ಗಳಿಗೆ ಹಸಿರು ನಿಶಾನೆ ತೋರಿದರು. ಇದೇ ವೇಳೆ ಪಲ್ಲಕ್ಕಿ ಬಸ್ ಏರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೊಸ ಬಸ್‌ನ ಆಸನಗಳ ಪರಿಶೀಲನೆ ನಡೆಸಿ, ಬಸ್‌ಗಳ ಕಾರ್ಯವೈಖರಿ ಬಗ್ಗೆ ಮಾಹಿತಿ ಪಡೆದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಸಾರಿಗೆ ಇಲಾಖೆ ಅಧಿಕಾರಿಗಳು ನೂತನ ಬಸ್‌ಗಳ ಬಗ್ಗೆ ಮಾಹಿತಿ ನೀಡಿದರು. 'ಸಂತೋಷ ಪ್ರಯಾಣಿಸುತ್ತಿದೆ' ಎಂಬ ಟ್ಯಾಗ್‌ಲೈನ್‌ನಡಿ ಪಲ್ಲಕ್ಕಿ ಬಸ್‌ಗಳು ರಾಜ್ಯವ್ಯಾಪಿ ಮತ್ತು ಹೊರ ರಾಜ್ಯಗಳಲ್ಲಿ ಸಂಚರಿಸಲಿವೆ.

ಈ ಸಂದರ್ಭದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಾವೀಗ ಹೊಸ ಅಧ್ಯಾಯಕ್ಕೆ ಕಾಲಿಟಿದ್ದೇವೆ. ನಮ್ಮ ಪ್ರಣಾಳಿಕೆಯಲ್ಲಿ ನಾವು ಗ್ಯಾರಂಟಿ ಯೋಜನೆ ಘೋಷಿಸಿದಾಗ ಅನೇಕರು ನಮ್ಮನ್ನು ಟೀಕಿಸಿದ್ದರು. ಹೆಣ್ಣು ಕುಟುಂಬದ ಕಣ್ಣು, ಬೆಲೆ ಏರಿಕೆ ಸಮಸ್ಯೆಗೆ ಪರಿಹಾರ ನೀಡಿ ಮಹಿಳೆಯರಿಗೆ ಆರ್ಥಿಕವಾಗಿ ಶಕ್ತಿ ತುಂಬಿವ ಪ್ರಯತ್ನ ಸರ್ಕಾರ ಮಾಡುತ್ತಿದೆ ಎಂದರು.

ನಮ್ಮ ಗ್ಯಾರಂಟಿ ಯೋಜನೆಗಳ ಪೈಕಿ ಮೊದಲು ಜಾರಿಗೆ ಬಂದಿದ್ದು ಶಕ್ತಿ ಯೋಜನೆ, ಈ ಯೋಜನೆಯಲ್ಲಿ ಈವರೆಗೂ ಸುಮಾರು 70.73 ಕೋಟಿ ಮಹಿಳೆಯರು ಉಚಿತವಾಗಿ ಬಸ್ ಪ್ರಮಾಣ

ಮಾಡಿದ್ದಾರೆ. ಸಾರಿಗೆ ಸಂಸ್ಥೆಗಳಿಗೆ ಸರ್ಕಾರ ಈ ಮೊತ್ತ ನೀಡಬೇಕಾಗಿದ್ದು ಸರ್ಕಾರದ ಮೇಲೆ ಬಹಳಷ್ಟು ಹೊರೆ ಇದೆ ಎಂದು ಹೇಳಿದರು.

ಕಳೆದ ಏಳೆಂಟು ವರ್ಷಗಳಿಂದ ರಾಜ್ಯದ ಬಸ್ ದರದಲ್ಲಿ ಏರಿಕೆ ಮಾಡಿಲ್ಲ. ಸಾರಿಗೆ ಸಂಸ್ಥೆಗಳನ್ನು ವೃತ್ತಿಪರತೆಯಲ್ಲಿ ಮುನ್ನಡೆಸಲು ಬದ್ಧತೆ ಇಲ್ಲದ ಕಾರಣ ಸಂಸ್ಥೆ ಸೊರಗುವಂತಾಗಿದೆ. ಸರ್ಕಾರಿ ಸಂಸ್ಥೆಯಾಗಿ ಲಾಭ ಮಾಡುವುದರ ಜತೆಗೆ ಜನರಿಗೂ ಅನುಕೂಲ ಮಾಡಿಕೊಡಬೇಕು. ಈ ಸಂಸ್ಥೆಯ ಕಾರ್ಮಿಕರ ಹಿತವನ್ನು ಕಾಯಬೇಕು. ಹೀಗಾಗಿ ಸಂಸ್ಥೆ ಲಾಭ ಕಾಣುವುದು ಮುಖ್ಯ ಎಂದು ತಿಳಿಸಿದರು.

ಕಾರ್ಮಿಕರ ಹಿತ ಕಾಯಲು ಅಪಘಾತದಲ್ಲಿ ಮೃತಪಟ್ಟ ಸಾರಿಗೆ ಸಿಬ್ಬಂದಿ ಕುಟುಂಬಕ್ಕೆ 1 ಕೋಟಿ ರೂ.ವರೆಗೂ ವಿಮಾ ಪರಿಹಾರ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ರಾಜ್ಯದ ಇತರೆ ಸಾರಿಗೆ ಸಂಸ್ಥೆಗಳಿಗೂ ಇದನ್ನು ವಿಸ್ತರಿಸಿ, ಎಲ್ಲ ಸಂಸ್ಥೆಗಳನ್ನೂ ಸಮಾನವಾಗಿ ನೋಡುವ ಕೆಲಸ ಮಾಡಲಾಗುತ್ತದೆ ಎಂದರು.

ಸಾರಿಗೆ ಇಲಾಖೆಯಲ್ಲಿ ಶೀಘ್ರವೇ 13 ಸಾವಿರ ನೌಕರರ ನೇಮಕ ಪ್ರಕ್ರಿಯೆ ನಡೆಯಲಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಿಧಾನಸೌಧದ ಮುಂದೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳಲ್ಲಿ 24 ಸಾವಿರ ಬಸ್‌ಗಳಿವೆ. ಪ್ರತಿ ವರ್ಷ ಶೇ.10ರಷ್ಟು ಬಸ್‌ಗಳು ಗುಜರಿ ಸೇರಲಿವೆ. ಕಳೆದ ನಾಲ್ಕು ವರ್ಷಗಳಿಂದ ಸಾರಿಗೆ ಸಂಸ್ಥೆ ಯಾವುದೇ ನೇಮಕಾತಿಯಾಗಿಲ್ಲ. ಆರು ವರ್ಷಗಳಿಂದ ಹೊಸ ಬಸ್ ಖರೀದಿಸಿಲ್ಲ. ಈಗ 40 ಹೊಸ ಐಷಾರಾಮಿ ಬಸ್‌ಗಳನ್ನು ಖರೀದಿ ಮಾಡಲಾಗಿದೆ. 500 ಕೋಟಿ ಬಜೆಟ್‌ನಲ್ಲಿ ಬಸ್‌ಗಳ ಖರೀದಿ ಮಾಡಲಾಗುತ್ತಿದೆ. ಇನ್ನೂ 100 ನಾನ್ ಎಸಿ ಬಸ್‌ಗಳು ಕೆಎಸ್‌ಆರ್‌ಟಿಸಿಗೆ ಸೇರ್ಪಡೆಯಾಗಲಿದೆ ಎಂದರು.

ಬೆಳಗಾವಿ ವಯಾ ಹುಬ್ಬಳ್ಳಿ–ಧಾರವಾಡ, ಹೊರನಾಡು ವಯಾ ಚಿಕ್ಕಮಗಳೂರು, ಗಂಗಾವತಿ ವಯಾ ಹೊಸಪೇಟೆ, ಸಾಗರ ವಯಾ ಶಿವಮೊಗ್ಗ ಸೊರಬ, ಪುತ್ತೂರು ವಯಾ ಕುಕ್ಕೆಸುಬ್ರಹ್ಮಣ್ಯ, ಬೆಳ್ತಂಗಡಿ ವಯಾ ಧರ್ಮಸ್ಥಳ, ಕುಂದಾಪುರ ವಯಾ ಮಂಗಳೂರು–ಉಡುಪಿ ಮಂಗಳೂರು.

**ಆಧಾರ:** ಉದಯವಾಣಿ, ದಿನಾಂಕ: 08.10.2023

## 6. ಬರ ಪರಿಸ್ಥಿತಿ ಮನವರಿಕೆ

ರಾಜ್ಯದಲ್ಲಿ ಮಳೆ ಅಭಾವ ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಹಿಂಗಾರು ಬೆಳೆ ಹಾಗೂ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಬಹುದೆಂಬ ಆತಂಕವನ್ನು ಕೇಂದ್ರ ತಂಡ ವ್ಯಕ್ತಪಡಿಸಿದೆ. ಕೇಂದ್ರ ಬರ ಅಧ್ಯಯನ ತಂಡ ರಾಜ್ಯದ ಹಲವು ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಸೋಮವಾರ ರಾಜ್ಯ ಸರ್ಕಾರದೊಂದಿಗೆ ನಡೆಸಿದ ಸಭೆಯಲ್ಲಿ ಈ ದಿಗಿಲು ವ್ಯಕ್ತಪಡಿಸಿದೆ.

ರಾಜ್ಯದ ವಸ್ತು ಸ್ಥಿತಿಯನ್ನು ತಾವು ಮನಗಂಡಿದ್ದು ಕೇಂದ್ರ ಸರ್ಕಾರಕ್ಕೆ ನೈಜ ಸ್ಥಿತಿಗತಿಯನ್ನು ಒಳಗೊಂಡ ವರದಿ ಸಲ್ಲಿಸುವುದಾಗಿ ತಂಡ ಹೇಳಿದೆ. ರೈತರಿಗೆ ಸಾಕಷ್ಟು ಬೆಳೆ ಹಾನಿ ಆಗಿರುವ ಕುರಿತು ಕೇಂದ್ರ ಅಧ್ಯಯನ ತಂಡಕ್ಕೆ ಸರ್ಕಾರ ಸಂಪೂರ್ಣ ಮಾಹಿತಿ ಒದಗಿಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ 4800 ಕೋಟಿ ರೂ ನೀಡುವಂತೆ ರಾಜ್ಯ ಸರ್ಕಾರ ಮನವಿ ಮಾಡಿದೆ. ಬರ ಪರಿಶೀಲನೆ ನಡೆಸಿದ ನಂತರ ಕೇಂದ್ರ ತಂಡದ ಅಧಿಕಾರಿಗಳು, ರಾಜ್ಯ ಸರ್ಕಾರದ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದಾರೆ.

ಬರ ಅಧ್ಯಯನ ತಂಡಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ನಾವು ಕೊಟ್ಟ ಮಾಹಿತಿ ವಸ್ತು ಸ್ಥಿತಿಯಿಂದ ಕೂಡಿದೆ. ಅಧ್ಯಯನ ತಂಡ ರಾಜ್ಯ ಪ್ರವಾಸ ಮಾಡಿ ಹಾನಿಯನ್ನು ಅಂದಾಜಿಸಿದೆ. ದೆಹಲಿಗೆ ತೆರಳಿ ಇನ್ನೊಂದು ವಾರದಲ್ಲಿ ವರದಿ ಸಲ್ಲಿಸಲಿದೆ. ಕೇಂದ್ರದ ಬರ ಸಮೀಕ್ಷಾ ತಂಡ ನರೇಗಾ, ಪಶು ಆಹಾರ ಮೇವಿನ ಪೂರೈಕೆ, ಬರದ ಸ್ಥಿತಿಗತಿ ಹಾಗೂ ವಸ್ತುಸ್ಥಿತಿಯ ಪರಿಶೀಲನೆ ನಡೆಸಿದೆ. ರಾಜ್ಯದ ವರದಿ, ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ಸೂಚಿಸಿದೆ. ಅಧ್ಯಯನ ತಂಡ ಕೇಂದ್ರಕ್ಕೆ ವರದಿ ಸಲ್ಲಿಸಿದ ಮೇಲೆ ಎಷ್ಟು ಪರಿಹಾರ ಸಿಗಲಿದೆ ಎಂಬುದನ್ನು ನೋಡಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

**ನರೇಗಾಕ್ಕೆ 475 ಕೋಟಿ ರೂಪಾಯಿ ಬೇಡಿಕೆ:** ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿ ಪಾವತಿ ಆಗಿಲ್ಲ. 475 ಕೋಟಿ ಪಾವತಿ ಬಾಕಿ ಇದ್ದು, ತಕ್ಷಣ ಬಾಕಿ ಹಣ ಬಿಡುಗಡೆ ಮಾಡಬೇಕು ಎಂದು ಕೇಂದ್ರದ ಅಧಿಕಾರಿಗಳ ಬಳಿ ಮಾತನಾಡುವಂತೆ ಮನವಿ ಮಾಡಿದ್ದೇವೆ ಫಸಲು ವಿಮಾ ಯೋಜನೆ ರೈತರಿಗೆ ಅನುಕೂಲ ಆಗದಿರುವುದನ್ನು ಕೇಂದ್ರ ಅಧಿಕಾರಿಗಳ ಗಮನಕ್ಕೆ ತರುವಂತೆ ತಿಳಿಸಿದ್ದೇವೆ. ಬರ ಪರಿಹಾರ ಎಷ್ಟು ಕೊಡುತ್ತಾರೆ ಎಂಬುದು ಅವರ ತೀರ್ಮಾನ. ನಾವು ಒತ್ತಡ ಹಾಕಬಹುದು. ಆದರೆ ಅಂತಿಮ ನಿರ್ಧಾರ ಕೇಂದ್ರ ಸರ್ಕಾರದ್ದು. ಕೇಂದ್ರ ತಂಡ ಒಂದು ವಾರದ ಒಳಗೆ ಕೇಂದ್ರಕ್ಕೆ ವರದಿ ಸಲ್ಲಿಕೆ ಮಾಡುವುದಾಗಿ ತಿಳಿಸಿದೆ. ಅದಕ್ಕೆ ಪೂರಕವಾಗಿ ಸಣ್ಣ, ಅತಿ ಸಣ್ಣ ರೈತರ ಮಾಹಿತಿಯ ಅಂಕಿ-ಅಂಶ ನೀಡುತ್ತೇವೆ ಎಂದು ಕೃಷ್ಣ ಭೈರೇಗೌಡ ಹೇಳಿದರು.

ಕೇಂದ್ರ ತಂಡದ ವರದಿ ಸಲ್ಲಿಕೆ ನಂತರ ಪರಿಹಾರ ಬಿಡುಗಡೆಗೆ ಕೆಲವು ದಿನ ಬೇಕಾಗಬಹುದು. ಪರಿಹಾರ ನೀಡುವುದು ವಿಳಂಬ ಆದಲ್ಲಿ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ. ರೈತರಿಗೆ ಅನ್ಯಾಯ ಅಗಲು ಬಿಡಲ್ಲ.- ಚಲುವರಾಯಸ್ವಾಮಿ ಕೃಷಿ ಸಚಿವರು.

**ಆಧಾರ:** ಉದಯವಾಣಿ, ದಿನಾಂಕ: 10.10.2023.

## 7. ನವೆಂಬರ್ 14 ರಿಂದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ

ಬರುವ ನವೆಂಬರ್ 14 ರಿಂದ 20ರವರೆಗೆ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ನಡೆಯಲಿದ್ದು, 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು ಎಂಬ ಘೋಷವಾಕ್ಯದೊಂದಿಗೆ ಈ ಸಪ್ತಾಹ ನಡೆಯಲಿದೆ.

ಸಹಕಾರ ಸಪ್ತಾಹದ ಕುರಿತು ವಿಕಾಸಸೌಧದಲ್ಲಿ ನಡೆದ ಪೂರ್ವಭಾವಿ ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿ ನಡೆಸಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಹಾಗೂ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡ ಈ ವಿಷಯ ತಿಳಿಸಿದರು.

ರಾಷ್ಟ್ರೀಯ ಸಹಕಾರಿ ಒಕ್ಕೂಟದ ಮಾರ್ಗದರ್ಶನದಂತೆ ಮಾಜಿ ಪ್ರಧಾನಿ ದಿವಂಗತ ಪಂ.ಜವಾಹರ್‌ಲಾಲ್ ನೆಹರು ಅವರ ಹುಟ್ಟುಹಬ್ಬದ ದಿನವಾದ ನವೆಂಬರ್ 14 ರಿಂದ 20ರವರೆಗೆ ರಾಷ್ಟ್ರಾದ್ಯಂತ ಸಹಕಾರ ಸಪ್ತಾಹ ಆಚರಿಸಲಾಗುತ್ತದೆ. ಸಪ್ತಾಹದ ಅಂಗವಾಗಿ 7 ದಿನಗಳೂ ರಾಜ್ಯದ ವಿವಿಧೆಡೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸಹಕಾರ ಸಂಘ-ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು ಎಂಬ ಶೀರ್ಷಿಕೆಯಡಿ ಮೊದಲ ದಿನದ ಕಾರ್ಯಕ್ರಮ ನಡೆಯಲಿದ್ದು, ನಂತರ ಕ್ರಮವಾಗಿ ಸಾಲೇತರ ಸಹಕಾರ ಸಂಘಗಳ ಪುನಶ್ಚೇತನ ಹಾಗೂ ಆರ್ಥಿಕ ಸೇರ್ಪಡೆ, ಸಹಕಾರ ಸಂಸ್ಥೆಗಳನ್ನು ಡಿಜಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು

ಉನ್ನತೀಕರಣ. ಸಹಕಾರ ಸಂಸ್ಥೆಗಳಲ್ಲಿನ ಸರಳ ವ್ಯಾಪಾರ ಪ್ರಕ್ರಿಯೆ ಮತ್ತು ಉದ್ಯೋನ್ಮುಖ ವಲಯಗಳು. ಸಾರ್ವಜನಿಕ–ಖಾಸಗಿ–ಸಹಕಾರಿ ಸಹಭಾಗಿತ್ವವನ್ನು ಬಲಪಡಿಸುವುದು. ಮಹಿಳೆಯರು, ಯುವಜನರು ಮತ್ತು ಅಬಲ ವರ್ಗಕ್ಕೆ ಸಹಕಾರ ಸಂಸ್ಥೆಗಳು, ಸಹಕಾರ ಶಿಕ್ಷಣ, ತರಬೇತಿಯ ಪರಿಷ್ಕರಣೆ ಕುರಿತು 7 ದಿನಗಳ ಕಾಲ ಗೋಷ್ಠಿಗಳು ನಡೆಯಲಿವೆ.

ಹಿಂದಿನಂತೆ ಈ ಬಾರಿ ಹತ್ತಾರು ಜನರಿಗೆ ಸಹಕಾರ ರತ್ನ ಪ್ರಶಸ್ತಿಗಳನ್ನು ಕೊಡುವುದಿಲ್ಲ. ಬದಲಿಗೆ ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ಕಂದಾಯ ವಿಭಾಗಗಳಿಂದ ತಲಾ ಒಬ್ಬರು ಸಹಕಾರಿ ಗಣ್ಯರು, ಬೆಂಗಳೂರು ನಗರದಿಂದ ಇಬ್ಬರು ಸಹಕಾರಿ ಗಣ್ಯರು, ಇಲಾಖೆಯಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ ಓರ್ವ ನಿವೃತ್ತ ಅಧಿಕಾರಿ ಸೇರಿ ಒಟ್ಟು 6 ಜನರಿಗೆ ಮಾತ್ರ ಸಹಕಾರ ರತ್ನ ಪ್ರಶಸ್ತಿ ಕೊಡಲು ನಿರ್ಧರಿಸಲಾಗಿದೆ. ಈ ಪ್ರಶಸ್ತಿಯು ಚಿನ್ನದ ಪದಕ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ ಎಂದು ವಿವರಿಸಿದರು.

ನ.14ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಪ್ತಾಹಕ್ಕೆ ಚಾಲನೆ ನೀಡಲಿದ್ದು ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ನಾಡಿನ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಕಳೆದ ಬಾರಿ ಕಲಬುರಗಿ ಜಿಲ್ಲೆಯಲ್ಲಿ ಸಪ್ತಾಹಕ್ಕೆ ಚಾಲನೆ ನೀಡಲಾಗಿತ್ತು. ಈ ಬಾರಿ ಉದ್ಘಾಟನೆ ಎಲ್ಲಿ ಮಾಡಬೇಕು? ಸಮಾರೋಪ ಎಲ್ಲಿ ಮಾಡಬೇಕು ಎಂಬುದಿನ್ನೂ ಅಂತಿಮಗೊಂಡಿಲ್ಲ, ಜವಳಿ ಹಾಗೂ ಎಪಿಎಂಸಿ ಸಚಿವರಾದ ಶಿವಾನಂದ ಪಾಟೀಲ್ ಅವರ ಕ್ಷೇತ್ರವಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ, ಸಚಿವರಾದ ಕೆ.ಎನ್. ರಾಜಣ್ಣ, ಡಾ.ಜಿ.ಪರಮೇಶ್ವರ್ ಅವರು ಪ್ರತಿನಿಧಿಸುವ ತುಮಕೂರು ಜಿಲ್ಲೆ ಅಥವಾ ಮಂಗಳೂರಿನ ಹೆಸರು ಕೇಳಿ ಬಂದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಸ್ಥಳ ನಿಗದಿಪಡಿಸಲು ಸಭೆಯಲ್ಲಿ ನಿರ್ಣಯಿಸಲಾಗಿದೆ. ಈ ಮೂರರಲ್ಲಿ ಒಂದೆಡೆ ಉದ್ಘಾಟನೆ ಮತ್ತೊಂದೆಡೆ ಸಮಾರೋಪ ನಡೆಸುವ ಚರ್ಚೆಗಳು ನಡೆದಿವೆ.

**ಆಧಾರ:** ಉದಯವಾಣಿ, ದಿನಾಂಕ: 10.10.2023

## 8. ಸುವರ್ಣ ಸಂಭ್ರಮದಲ್ಲಿ ದೇವರಾಜ ಅರಸು ವೈಭವ

ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಪರಿಕಲ್ಪನೆಯಲ್ಲಿ ಮೂಡಿ ಬಂದ ಸಾಂಸ್ಕೃತಿಕ ವೈಭವದ ಮಾದರಿಯಲ್ಲೇ ವರ್ಷಪೂರ್ತಿ ನಡೆಯುವ 'ಸುವರ್ಣ ಸಂಭ್ರಮ' ಕಾರ್ಯಕ್ರಮವನ್ನು ರೂಪಿಸುವುದಕ್ಕೆ ರಾಜ್ಯ ಸರ್ಕಾರ ಭರದ ಸಿದ್ಧತೆ ನಡೆಸಿದೆ.

ಬೆಂಗಳೂರು 'ಉದಯವಾಣಿ' ಕಚೇರಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಈ ವಿಷಯ ತಿಳಿಸಿದ್ದಾರೆ. ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷ ತುಂಬುತ್ತಿರುವ ಸಂಭ್ರಮ ಆಚರಣೆಗಾಗಿ ಸರ್ಕಾರ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ನವೆಂಬರ್ 1 ರಂದು ಹಂಪಿಯಿಂದ ಜ್ಯೋತಿ ಹೊರಡಲಿದೆ. ಭಿನ್ನಕಲ್ಪನೆಗಳಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕಲೆ–ಸಂಸ್ಕೃತಿಯ ಮೇಳೈಕೆಯೊಂದಿಗೆ ದಿ.ದೇವರಾಜ ಅರಸು ಕಾಲದಲ್ಲಿ ನಡೆದಿದ್ದ ಸಾಂಸ್ಕೃತಿಕ ಸೊಬಗು ಮರುಸೃಷ್ಟಿಯಾಗಲಿದೆ ಎಂದರು.

'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂಬ ಘೋಷವಾಕ್ಯ ಮೂಲಕ ವರ್ಷವಿಡೀ ಕಾರ್ಯಕ್ರಮ ನಡೆಯಲಿವೆ. ಗ್ರಾ.ಪಂ.ಮಟ್ಟದಿಂದ ರಾಜ್ಯ ಮಟ್ಟದವರೆಗೂ ಕನ್ನಡ ಹಬ್ಬದ ಸಂಭ್ರಮವಿರಲಿದೆ.

ನವೆಂಬರ್ 1 ರಂದು ನಾಡಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 68 ಮಂದಿಯ ಜತೆಗೆ ಸುವರ್ಣ ಸಂಭ್ರಮದ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಹತ್ತು ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದ ರೂಪುರೇಷೆ ಸಂಬಂಧ 15 ರಂದು ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಜತೆಗೆ ಸಮಾಲೋಚಿಸಲಾಗುವುದು. ಜತೆಗೆ ಮೈಸೂರಿನಲ್ಲಿ ಕರ್ನಾಟಕ ಸುವರ್ಣ ಸಂಭ್ರಮದ ವಿಶೇಷ ಕಾರ್ಯಕ್ರಮಗಳು ಜರುಗಲಿವೆ. 17 ರಂದು 'ಕರ್ನಾಟಕ ಸುವರ್ಣ ಸಂಭ್ರಮ–50ರ ಲೋಗೋ ಬಿಡುಗಡೆ ಮಾಡಲಾಗುವುದು ಎಂದರು. ಸುವರ್ಣ ಸಂಭ್ರಮ ಅಧಿಕಾರಿಗಳ ಸಮಾರಂಭವಾಗಿರಬಾರದು. ಜನರ ಕಾರ್ಯಕ್ರಮ ಆಗಿರಬೇಕು ಎಂಬ ನಿಟ್ಟಿನಲ್ಲಿ ಹೆಜ್ಜೆ ಇರಿಸಲಾಗಿದೆ. ಮೈಸೂರು, ಬೆಳಗಾವಿ, ಬೆಂಗಳೂರು ಕಲಬುರ್ಗಿ ಸೇರಿದಂತೆ 4 ಭಾಗಗಳಲ್ಲಿ 300 ಸಾಹಿತಿಗಳ, ಕಲಾವಿದರ ಜತೆಗೆ ಸಭೆ ನಡೆಸಲಾಗಿದೆ. ಸಿಎಂ ಕಾರ್ಯಕ್ರಮದ ರೂಪುರೇಷೆಗಳನ್ನು ಘೋಷಣೆ ಮಾಡಲಿದ್ದಾರೆ ಎಂದ ಸಚಿವ ತಂಗಡಗಿ ಸಂವಾದದಲ್ಲಿ ವಿವರಿಸಿದರು.

ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಕನ್ನಡ ಭಾಷೆಯಲ್ಲಿ ಹಲ್ಮಿಡಿ ಶಾಸನ ಪ್ರದರ್ಶನ ನಡೆಯಲಿದೆ. ಜಾತ್ರೆ ಮಾಡಿದರಷ್ಟೇ ಸಾಲದು ಅದು ನೆನಪಿನಲ್ಲಿರಬೇಕು. ಈ ಹಿನ್ನೆಲೆಯಲ್ಲಿ ಕನ್ನಡದ ಹಬ್ಬ ಜನರ ನೆನಪಿನಲ್ಲಿಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ. ಕನ್ನಡಿಗರ ಹಬ್ಬದ ರೀತಿಯಲ್ಲಿ ಕಾರ್ಯಕ್ರಮ ಆಚರಣೆಗೆ ಎಲ್ಲ ರೀತಿಯಲ್ಲಿ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ ಎಂದು ಹೇಳಿದರು.

ಬಿಜೆಪಿ ಆಡಳಿತ ಅವಧಿಯ 20 ತಿಂಗಳಿಂದ ಈವರೆಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯ ಅಕಾಡೆಮಿ, ಪ್ರಾಧಿಕಾರದ ಅಧ್ಯಕ್ಷರ ಆಯ್ಕೆ ಆಗಿಲ್ಲ ರಾಜ್ಯೋತ್ಸವ ನಂತರ ವಿವಿಧ ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರನ್ನು ನೇಮಿಸಲಾಗುವುದು ಎಂದು ತಂಗಡಗಿ ತಿಳಿಸಿದರು.

ಬಿಜೆಪಿ ಆಡಳಿತ ಅವಧಿಯಲ್ಲಿ ನಡೆದ 'ಬೆಂಗಳೂರು ಹಬ್ಬ'ದಲ್ಲಿ ಅವ್ಯವಹಾರ ನಡೆದಿದೆ ಎಂಬ ಮಾತುಗಳಿವೆ. ಈ ಹಿನ್ನೆಲೆಯಲ್ಲಿ ಸತ್ಯಾಸತ್ಯತೆ ತಿಳಿಯಲು ಅಧಿಕಾರಿಗಳನ್ನು ನೇಮಿಸಲಾಗಿದೆ. ಆದರೆ ಕಲಾವಿದರಿಗೆ ಹಣ ಕೊಡುವ ವಿಚಾರದಲ್ಲಿ ಅನ್ಯಾಯ ಮಾಡುವುದಿಲ್ಲ. ನಕಲಿ ಕಲಾವಿದರ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಿದೆ. ಕೆಲವು ಸಂಘ–ಸಂಸ್ಥೆಗಳು ಕಾರ್ಯಕ್ರಮ ಮಾಡದೆ ಅನುದಾನ ಪಡೆಯುತ್ತಿವೆ. ಅವುಗಳ ಬಗ್ಗೆ ಕೂಡ ಸರ್ಕಾರ ಕಣ್ಣಿಟ್ಟಿದೆ ಎಂದು ಹೇಳಿದರು.

ನಾಡದೇವಿ ಭುವನೇಶ್ವರಿ ಪ್ರತಿಮೆ ಸ್ಥಾಪನೆ ಬಗ್ಗೆ ಚರ್ಚೆ ಆಗಿದೆ. ಮುಖ್ಯಮಂತ್ರಿಗಳು ಎಲ್ಲಿ ಹೇಳುತ್ತಾರೋ ಅಲ್ಲಿ ಪ್ರತಿಮೆ ನಿರ್ಮಾಣ ಕಾರ್ಯ ನಡೆಯಲಿದೆ. ವಿಧಾನ ಸೌಧದಲ್ಲಿ ಕನ್ನಡ ತಾಯಿ ಭುವನೇಶ್ವರಿ ಪ್ರತಿಮೆ ಇರಿಸುವ ಆಸೆಯಿದೆ. ಜಾಗ ಕೂಡ ಗುರುತು ಮಾಡಿದ್ದೇನೆ. ಪ್ರತಿಮೆಯ ಎತ್ತರವನ್ನು ಸರ್ಕಾರವೇ ನಿರ್ಧರಿಸಲಿದೆ ಎಂದರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಾಗಿ ಈಗಾಗಲೇ ಸುಮಾರು 10 ಸಾವಿರ ಅರ್ಜಿಗಳು ಬಂದಿವೆ. ಈ ಸಂಖ್ಯೆಯಲ್ಲಿ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಆದರೆ ಕೇವಲ 68 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ಅರ್ಜಿಗಳಿಗೆ ಜರಡಿ ಹಿಡಿಯುವ ಕೆಲಸ ನಡೆಯಲಿದೆ. ಪ್ರಶಸ್ತಿಯ ವಿಚಾರದಲ್ಲಿ ಪ್ರಾದೇಶಿಕತೆ ಜತೆಗೆ ಸಾಮಾಜಿಕ ನ್ಯಾಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು. ಸಣ್ಣ ಸಣ್ಣ ಸಮುದಾಯದ ಸಾಧಕರನ್ನು ಹುಡುಕಿ ರಾಜ್ಯೋತ್ಸವ ಪ್ರಶಸ್ತಿ ನೀಡುವ ಕೆಲಸ ನಡೆಯಲಿದೆ. ಮುಖ್ಯಮಂತ್ರಿಗಳ ಸಲಹೆಯಂತೆ ಅರ್ಹರನ್ನು ಗುರುತಿಸಿ ಪ್ರಶಸ್ತಿಯ ಘನತೆಯನ್ನು ಹೆಚ್ಚಿಸುವ ಕಾರ್ಯ ನಡೆಯಲಿದೆ. ಪ್ರಶಸ್ತಿಗೆ ಅರ್ಹರಿದ್ದೂ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ

ಹಾಕದೇ ಇರುವ ಸಾಧಕರನ್ನು ಆಯ್ಕೆ ಮಾಡುವ ಕೆಲಸ ನಡೆಯಲಿದೆ ಎಂದರು. ಇಲಾಖೆ ಕಾರ್ಯಕ್ರಮಗಳು ಕೇವಲ ಬೆಂಗಳೂರಿಗೆ ಕಲಾವಿದರಿಗೆ ಸೀಮಿತವಾಗಿತ್ತು. ಈಗ ಎಲ್ಲ ಕರ್ನಾಟಕದ ಪಾಲು ಮಾಡಿದ್ದೇನೆ. ಕರಾವಳಿ ಕರ್ನಾಟಕ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಭಾಗಕ್ಕೆ ಹೆಚ್ಚಿನ ಪಾಲು ನೀಡಿದ್ದೇನೆ ಎಂದು ಹೇಳಿದರು.

**ಆಧಾರ:** ಉದಯವಾಣಿ, ದಿನಾಂಕ: 13.10.2023

## 9. 9ನೇ ಬಾರಿಗೆ ಖಾಸಗಿ ದರ್ಬಾರ್ ನಡೆಸಿದ ಯದುವೀರ್ ಒಡೆಯರ್

ನಾಡಹಬ್ಬ ದಸರಾ ಮಹೋತ್ಸವ ಒಂದೆಡೆಯಾದರೆ ಅರಮನೆಯಲ್ಲಿ ರಾಜವಂಶಸ್ಥರಿಂದ ನವರಾತ್ರಿ ಆಚರಣೆ ಆರಂಭವಾಗಿದ್ದು, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರತ್ನ ಖಚಿತ ಸಿಂಹಾಸನವೇರಿ 9ನೇ ಬಾರಿಗೆ ಖಾಸಗಿ ದರ್ಬಾರ್ ನಡೆಸಿದರು, ಚಾಮುಂಡಿಬೆಟ್ಟದಲ್ಲಿ ಶಕ್ತಿದೇವತೆ ಚಾಮುಂಡೇಶ್ವರಿಯ ಅಗ್ರ ಪೂಜೆಯೊಡನೆ ದಸರಾ ಹಬ್ಬಕ್ಕೆ ಚಾಲನೆ ದೊರೆತರೆ, ಇತ್ತ ಅರಮನೆಯಲ್ಲಿ ನವರಾತ್ರಿ ಆಚರಣೆ ಚಾಲನೆ ಪಡೆದುಕೊಂಡಿತ್ತು. ರಾಜವಂಶಸ್ಥ ಯದವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದರ್ಬಾರ್ ಹಾಲ್‌ನಲ್ಲಿ ರತ್ನ ಖಚಿತ ಸಿಂಹಾಸನವನ್ನೇರಿ ದರ್ಬಾರ್ ನಡೆಸಿದರು. ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜಮನೆತನದ ಪಟ್ಟದ ಕತ್ತಿಯೊಂದಿಗೆ ಸಾಂಪ್ರದಾಯಿಕ ರಾಜ ಪೋಷಾಕಿನಲ್ಲಿ ನವರಾತ್ರಿ ದರ್ಬಾರ್ ನಡೆಸಿದರು. ಬೆಳಗ್ಗೆ 11.30 ರಿಂದ 11.50ರಲ್ಲಿ ಸಿಂಹಾಸನದಲ್ಲಿ ಆಸೀನರಾದ ಯದುವೀರ್ ದರ್ಬಾರ್ ನಡೆಸಿದರು. ಖಾಸಗಿ ದರ್ಬಾರ್ ಬಳಿಕ ಚಾಮುಂಡೇಶ್ವರಿ ದೇವಿಯ ವಿಗ್ರಹದೊಂದಿಗೆ ಚಾಮುಂಡಿ ತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ಉತ್ಸವ ಹಿಂದಿರುಗಿತು. ಖಾಸಗಿ ದರ್ಬಾರ್ ಮುಗಿಸಿ ಅರಮನೆಗೆ ಹಿಂದಿರುಗಿದ ಯದುವೀರ್ ಅವರನ್ನು ಬೆಳ್ಳಿಯ ಆಸನದ ಮೇಲೆ ಕೂರಿಸಿ ಪಾದಪೂಜೆ ನೆರವೇರಿಸಲಾಯಿತು. ಮತ್ತೆ ಸಂಜೆಯೂ ಖಾಸಗಿ ದರ್ಬಾರ್ ನಡೆಯಿತು. ಇಂದಿನಿಂದ ಅ.23 ರವರೆಗೆ ಪ್ರತಿದಿನ ಖಾಸಗಿ ದರ್ಬಾರ್ ನಡೆಯಲಿದೆ. 24ರಂದು ವಿಜಯ ಯಾತ್ರೆಯನ್ನು ಯದುವೀರ್ ನಡೆಸಲಿದ್ದಾರೆ.

ಕನ್ನಡದ ಭಾಷೆಗೆ ಮಿತಿಯಿದೆ. ಆದರೆ, ಇದರ ಭಾವಕ್ಕೆ ಮಿತಿಯಿಲ್ಲ. ದೆಹಲಿಗೆ ಏಕೋ ಕನ್ನಡ ಬೇಕಿಲ್ಲ ಅಂತ ಅನಿಸುತ್ತಿದೆ. ನಮ್ಮ ಕನ್ನಡವನ್ನು ಪ್ರಪಂಚದ ವೇದಿಕೆಯಲ್ಲಿ ಪ್ರತಿಷ್ಠಾಪಿಸಬೇಕು. ಕನ್ನಡದ ಶಾಂತಿ ಸಮೃದ್ಧಿಯನ್ನು ಹೆಚ್ಚಿಸಬೇಕು. ವಿಶ್ವದ ಜೊತೆ ಕನ್ನಡವನ್ನು ಸಮೀಕರಿಸಬೇಕು. ಕರ್ನಾಟಕದಲ್ಲಿ ನೆಲೆಸಿರುವವರೆಲ್ಲರೂ ಕನ್ನಡಿಗರೇ. ಇವರಲ್ಲಿ ಯಾರಿಗೆ ಕನ್ನಡ ಗೊತ್ತಿಲ್ಲ ಎಂಬ ಸಮೀಕ್ಷೆ ನಡೆಸಬೇಕು. ಅಂಥವರಿಗೆ 30 ದಿನಗಳಲ್ಲಿ ಕನ್ನಡ ಕಲಿಸಬೆಕು ಎಂದು ಚಲನಚಿತ್ರ ಸಾಹಿತಿ, ಸಂಗೀತ ನಿರ್ದೇಶಕ ನಾದಬ್ರಹ್ಮ ಡಾ.ಹಂಸಲೇಖ ಹೇಳಿದರು. ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಬೆಳ್ಳಿಯ ರಥದಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಜ್ಯೋತಿ ಬೆಳಗಿಸಿ, ಪುಷ್ಪಾರ್ಚನೆ ಸಲ್ಲಿಸಿ ದಸರಾ ಉತ್ಸವ ಉದ್ಘಾಟಿಸಿದ ಅವರು, 30 ದಿನಗಳಲ್ಲಿ ಕನ್ನಡ ಕಲಿತವರಿಗೆ ಕನ್ನಡ ಪಟ್ಟ ಎಂಬ ಕಾರ್ಡ್ ನೀಡಬೇಕು. ಈ ಕಾರ್ಡ್ ಆಸ್ಪತ್ರೆಗಳಲ್ಲಿ ಬಿಪಿಎಲ್ ಕಾರ್ಡ್‌ಗೆ ಸಿಗುವ ಸೌಲಭ್ಯಗಳು ಸಿಗಬೇಕು ಎಂದು ಕಾರ್ಪೋರೇಟ್ ಕಂಪನಿಗಳ 300 ಮಂದಿ ಕನ್ನಡಿಗರ ಒಂದು ತಂಡ ನನಗೆ ಸಲಹೆ ನೀಡಿದೆ. ಈ ಸಮೀಕ್ಷೆಯನ್ನು ಅವರೇ ನಡೆಸುವುದಾಗಿ ಹೇಳಿದ್ದಾರೆ. ಶಾಂತಿ ಮಂತ್ರ, ಅಭಿವೃದ್ಧಿ ಕನ್ನಡಿಗರ ಒಂದಂಶದ ಕಾರ್ಯಕ್ರಮವಾಗಬೇಕು ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರಿಗೆ ಡಾ.ಹಂಸಲೇಖ ಕೃತಜ್ಞತೆ ಸಲ್ಲಿಸಿದರು.

ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ 413ನೇ ನಾಡಹಬ್ಬ ದಸರಾ ಮಹೋತ್ಸವಕ್ಕೆ ಖ್ಯಾತ ಸಂಗೀತ ನಿರ್ದೇಶಕ, ಚಿತ್ರ ಸಾಹಿತಿ, ಹಂಸಲೇಖ ವಿದ್ಯುಕ್ತ ಚಾಲನೆ ನೀಡಿದರು. ಚಾಮುಂಡಿಬೆಟ್ಟದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆಳಗ್ಗೆ 10.18ಕ್ಕೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ಬೆಳ್ಳಿ ರಥದಲ್ಲಿ ಇರಿಸಿದ್ದ ಮೂರ್ತಿಗೆ ಪೂಜೆ ನೆರವೇರಿಸಲಾಯಿತು. ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹಿತ ಅನೇಕ ಸಚಿವರು ಗಣ್ಯರ ಸಮ್ಮುಖದಲ್ಲಿ ಹಂಸಲೇಖ ದಂಪತಿ ಚಾಮುಂಡೇಶ್ವರಿ ಮೂರ್ತಿಗೆ ದೀಪ ಬೆಳಗಿ ಪುಷ್ಪಾರ್ಚನೆ ಮಾಡಿದರು. ಉದ್ಘಾಟನೆಗೂ ಮುನ್ನ ದೇವಸಾನಕ್ಕೆ ತೆರಳಿದ ಸಿಎಂ. ಸಿದ್ದರಾಮಯ್ಯ ಹಲವು ಸಚಿವರು ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ದಸರಾ ಯಶಸ್ಸಿಗೆ ಪ್ರಾರ್ಥಿಸಿದರು.

ದಸರಾ ಉದ್ಘಾಟನೆ ನೆರವೇರಿಸಿದ ಹಂಸಲೇಖ ಅವರಿಗೆ ಮೈಸೂರು ಪೇಟ ತೊಡಿಸಿ, ಸರಸ್ವತಿ ವಿಗ್ರಹ, ಫಲ ತಾಂಬೂಲ ನೀಡಿ ಗೌರವಿಸಲಾಯಿತು. ಹಂಸಲೇಖ ಸಂಗೀತ ಸಂಯೋಜನೆ ಮಾಡಿರುವ ಸಂವಿಧಾನ ಪೀಠಿಕೆಯನ್ನು ಪ್ರಸ್ತುತ ಪಡಿಸಲಾಯಿತು.

**ಆಧಾರ:** ವಿಜಯವಾಣಿ, ದಿನಾಂಕ: 16.10.2023

## 10.ರೈತರಿಗೆ 3 ಪಾಳಿ ವಿದ್ಯುತ್

ಬರಗಾಲದ ಕಾರಣ ರಾಜ್ಯಾದ್ಯಂತ ವಿದ್ಯುತ್ ಹಾಹಾಕಾರ ಉಂಟಾಗಿದ್ದರೂ ರೈತರ ಕೃಷಿ ಪಂಪ್‌ಸೆಟ್‌ಗೆ ನಿತ್ಯ 5 ತಾಸು ತ್ರಿಫೇಸ್ ವಿದ್ಯುತ್ ಪೂರೈಕೆ ಆಗಬೇಕೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಜಾರಿಗೊಳಿಸಲು ವಿದ್ಯುತ್ ಇಲಾಖೆ ನಿರ್ಧರಿಸಿದೆ. ಅದರಂತೆ ರಾಜ್ಯಾದಂತ ಕೃಷಿ ಪಂಪ್ ಸೆಟ್‌ಗಳಿಗೆ ಮೂರು ಪಾಳಿಯಲ್ಲಿ ದಿನಕ್ಕೆ ಒಟ್ಟು 5 ಗಂಟೆ ವಿದ್ಯುತ್ ಪೂರೈಕೆ ಮಾಡಲು ಎಲ್ಲಾ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರಿಗೂ ವಿದ್ಯುತ್ ಸಚಿವ ಕೆ.ಜೆ.ಜಾರ್ಜ್ ಸೂಚನೆ ನೀಡಿದ್ದಾರೆ.

ಅದರಂತೆ ಬೆಳಗ್ಗೆ, ಮಧ್ಯಾಹ್ನ ಹಾಗೂ ಮಧ್ಯರಾತ್ರಿ ಹೀಗೆ ಮೂರು ಪಾಳಿಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಾಗಲಿದೆ. ಯಾವ ಪ್ರದೇಶದಲ್ಲಿ ಯಾವ ಸಮಯದಲ್ಲಿ ವಿದ್ಯುತ್ ಇರುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಪತ್ರಿಕೆ, ರೇಡಿಯೋ, ಮೊಬೈಲ್ ಎಸ್‌ಎಂಎಸ್ ಮೂಲಕ ರೈತರಿಗೆ ನೀಡಬೇಕು ಎಂದು ಇಂಧನ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಅವರು ಸೂಚನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಮಧ್ಯರಾತ್ರಿ 12 ರಿಂದ ಬೆಳಗ್ಗೆ 5, ಬೆಳಗ್ಗೆ 8.45 ರಿಂದ ಮಧ್ಯಾಹ್ನ 1.45, ಮಧ್ಯಾಹ್ನ 12 ರಿಂದ 5 ಗಂಟೆ ಅವಧಿಯಲ್ಲಿ ಇನ್ಮುಂದೆ ವಿದ್ಯುತ್ ಪೂರೈಕೆಯಾಗಲಿದೆ.

ಈ ನಡುವೆ, ಅಧಿಕಾರಿಗಳ ಜತೆಗೆ ಸಭೆ ನಡೆಸಿ ಸುದ್ದಿಗಾರರ ಜತೆ ಮಾತನಾಡಿದ ಜಾರ್ಜ್, ರೈತರಿಗೆ ಕೃಷಿ ಪಂಪ್‌ಸೆಟ್‌ಗಾಗಿ 5 ಗಂಟೆ ವಿದ್ಯುತ್ ಪೂರೈಸಲು ನಿರ್ಧರಿಸಲಾಗಿದೆ. ರಾತ್ರಿ ಹಾಗೂ ಹಗಲು ವೇಳೆಯಲ್ಲಿ ರೊಟೇಷನ್ ಪದ್ಧತಿ ಅನುಸರಿಸಿ ವಿದ್ಯುತ್ ನೀಡಲಾಗುವುದು. ಇದಕ್ಕಾಗಿ ಉತ್ತರ ಪ್ರದೇಶ ಹಾಗೂ ಪಂಜಾಬ್‌ನಿಂದ ವಿದ್ಯುತ್ ಪಡೆಯಲು ತೀರ್ಮಾನ ಮಾಡಲಾಗಿದೆ. ರಾಜ್ಯಗಳೊಂದಿಗೂ ಚರ್ಚಿಸಿದ್ದು, ವಿದ್ಯುತ್ ಪೂರೈಕೆಗೆ ಸಮಸ್ಯೆಯಾಗಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:17.10.2023

## 11. ರಾಜ್ಯದಲ್ಲಿ ಕನ್ನಡ ಮಾತನಾಡುವ ಅನಿವಾರ್ಯತೆ ಸೃಷ್ಟಿ ಅಗತ್ಯ

ಕರ್ನಾಟಕದಲ್ಲಿ ಕನ್ನಡವನ್ನು ಮಾತನಾಡುವಂತಹ ವಾತಾವರಣ ಹಾಗೂ ಕನ್ನಡದ ಅನಿವಾರ್ಯತೆಯನ್ನು ಸೃಷ್ಟಿಸುವ ತುರ್ತು ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಆಯೋಜಿಸಿದ್ದ ಕರ್ನಾಟಕದ ಏಕೀಕರಣವಾದಾಗಿನಿಂದ ವಿವಿಧ ಭಾಷೆಗಳನ್ನು ಮಾತನಾಡುವ ಜನರು ಕನ್ನಡ ನಾಡಿನಲ್ಲಿ ನೆಲೆಸಿದ್ದರೆ. ಇಲ್ಲಿ ವಾಸಿಸುವ ಪ್ರತಿಯೊಬ್ಬರು ಕನ್ನಡ ಭಾಷೆ ಮಾತನಾಡುವುದನ್ನು ಕಲಿಯಬೇಕು. ಕರ್ನಾಟಕದಲ್ಲಿ ಕನ್ನಡ ಬಾರದೇ ಇದ್ದರೂ ಬದುಕಬಹುದು ಎನ್ನುವ ವಾತಾವರಣ ಬದಲಾಗಬೇಕೆಂದು ಸಿಎಂ ಸಲಹೆ ನೀಡಿದರು.

ಏಕೀಕರಣವಾಗಿ 68 ವರ್ಷ ಸಂದರೂ ರಾಜ್ಯದಲ್ಲಿ ಕನ್ನಡದ ವಾತಾವರಣವನ್ನು ನಿರ್ಮಿಸಲು ಸಾಧ್ಯವಾಗದಿರುವುದು ಸರಿಯಲ್ಲ. ಕನ್ನಡಿಗರು ನಮ್ಮ ಭಾಷೆಯನ್ನು ಬೇರೆಯವರಿಗೆ ಕಲಿಸುತ್ತಿಲ್ಲ. ಇದು ಭಾಷಾ ಬೆಳವಣಿಗೆ ಹಾಗೂ ನಾಡು, ನುಡಿ, ಸಂಸ್ಕೃತಿ ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯದಲ್ಲ.

ಕನ್ನಡಿಗರು ಅಭಿಮಾನ ಶೂನ್ಯರಲ್ಲ. ಆದರೆ ಹೆಚ್ಚಿನ ಉದಾರತೆಯಿಂದಾಗಿ ಈ ರೀತಿ ಆಗಿದೆ. ನಮ್ಮಲ್ಲಿ ಇಂಗ್ಲಿಷ್ ವ್ಯಾಮೋಹ ಹೆಚ್ಚಾಗಿದೆ. ಹೊರರಾಜ್ಯ ಅಥವಾ ಕೇಂದ್ರಕ್ಕೆ ಕಳುಹಿಸುವ ಕಡತ ಹೊರತುಪಡಿಸಿ ಇನ್ನುಳಿದಂತೆ ಕನ್ನಡದಲ್ಲಿಯೇ ವ್ಯವಹರಿಸಬೇಕು. ಬಹಳ ವರ್ಷಗಳಿಂದ ಕನ್ನಡವನ್ನು ಆಡಳಿತ ಭಾಷೆಯಾಗಿದ್ದರೂ ನಿರ್ಲಕ್ಷ್ಯದಿಂದ ಪಾಲನೆಯಾಗುತ್ತಿಲ್ಲ ಎಂದರು. ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ 2023 ನವೆಂಬರ್ 1 ರಿಂದ 2024 ನವೆಂಬರ್ 1 ರವರೆಗೆ ವರ್ಷವಿಡೀ ಕರ್ನಾಟಕ ಸಂಭ್ರಮವನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕ ಸಂಭ್ರಮ–50 ಲಾಂಛನವನ್ನು ಬಿಡುಗಡೆ ಮಾಡಿದ್ದು, ಅದನ್ನು ವಿನ್ಯಾಸಗೊಳಿಸಿದ ರವಿರಾಜ್ ಜಿ.ಹಲಗೂರು ಅವರನ್ನು ಅಭಿನಂದಿಸಿದರು. ಲಾಂಛನದ ವಿನ್ಯಾಸ ಉತ್ತಮವಾಗಿದೆ ಎಂದು ಮುಖ್ಯಮಂತ್ರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಕಲಾವಿದನಿಗೆ 25 ಸಾವಿರ ಬಹುಮಾನ ಘೋಷಣೆ ಏನೇನು ಸಾಲದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಬಿಬಿಎಂಪಿ ವತಿಯಿಂದ ರೂ. 1 ಲಕ್ಷ ಕೊಡುವುದಾಗಿ ಪ್ರಕಟಿಸಿದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 18.10.2023

## 12.ಗ್ರಾಮೀಣ ವೈದ್ಯ ಸೇವೆ ಕಡ್ಡಾಯವಲ್ಲ

ಸರ್ಕಾರಿ ಆರೋಗ್ಯ ಸೇವೆಯಲ್ಲಿ ವೈದ್ಯರ ಕೊರತೆ ನೀಗಿಸಿಕೊಳ್ಳಲು, ಅದರಲ್ಲೂ ಗ್ರಾಮೀಣ ಭಾಗದಲ್ಲಿ ವೈದ್ಯರ ಸಮಸ್ಯೆ ಪರಿಹಾರಕ್ಕಾಗಿ ರಾಜ್ಯದಲ್ಲಿ ವೈದ್ಯ ಪದವಿ ಪೂರೈಸಿದ ವಿದ್ಯಾರ್ಥಿಗಳ ಕಡ್ಡಾಯ ಸೇವೆ ಬಳಸಿಕೊಳ್ಳುವ ಕಾಯ್ದೆಗೆ ಸರ್ಕಾರ ತಿದ್ದುಪಡಿ ತರುತ್ತಿದೆ.

ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಈ ಸಂಬಂಧ ನಿರ್ಣಯ ಕೈಗೊಳ್ಳಲಾಗಿದ್ದು, ತಕ್ಷಣದಿಂದಲೇ ಈ ತೀರ್ಮಾನ ಜಾರಿಗೆ ತರಲು ಸುಗ್ರೀವಾಜ್ಞೆಯನ್ನೂ

ತರಲಾಗುತ್ತಿದೆ. ಬಳಿಕ ಮುಂಬರುವ ಅಧಿವೇಶನದಲ್ಲಿ ಕಾಯ್ದೆ ರೂಪ ಕೊಡಲಾಗುತ್ತದೆ. ಸಂಪುಟ ಸಭೆಯ ನಿರ್ಣಯದ ಸಾರಾಂಶವನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ವಿವರಿಸಿದರು. ಕರ್ನಾಟಕದಲ್ಲಿ ಎಂಬಿಬಿಎಸ್ ಅಥವಾ ವೈದ್ಯಕೀಯ ಪಿಜಿ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ನೋಂದಾಯಿಸಿಕೊಳ್ಳುತ್ತಾರೆ. ಆದರೆ ಅಭ್ಯರ್ಥಿಗಳ/ ಸೇವೆಯನ್ನು ಖಾಲಿ ಇರುವ ಹುದ್ದೆಗಳಿಗೆ ಮಿತಿಗೊಳಿಸಿ, ಕೌನ್ಸಲಿಂಗ್ ಮೂಲಕ ಮೆರಿಟ್ ಆಧಾರದಲ್ಲಿ ನಿಯೋಜಿಸಲು ಕಡ್ಡಾಯ ಸೇವಾ ತರಬೇತಿ ಅಧಿನಿಯಮ 2012ರ ಕಾಯ್ದೆಗೆ ತಿದ್ದುಪಡಿ ತರಲಾಗುತ್ತಿದೆ.

**ಆಧಾರ:** ಕನ್ನಡಪ್ರಭ, ದಿನಾಂಕ: 20.10.2023

## 13. ಭವಿಷ್ಯದಲ್ಲಿ ಮೈಸೂರಿಗೂ ಮೆಟ್ರೋ ಸೇವೆ

ಮುಂಬರುವ ವರ್ಷಗಳಲ್ಲಿ ಅರಮನೆ ನಗರಿ ಮೈಸೂರು ಸೇರಿದಂತೆ ರಾಜ್ಯದ ಹಲವು ಪ್ರಮುಖ ನಗರಗಳಲ್ಲೂ ಮೆಟ್ರೋ ರೈಲುಗಳು ಓಡಾಡಲಿವೆ!

ಹೌದು, ಪ್ರಧಾನಿ ಮೋದಿಯವರೇ ಇಂಥದ್ದೊಂದು ಸುಳಿವನ್ನು ನೀಡಿದ್ದಾರೆ. ಬೆಂಗಳೂರಿನ ಮಾದರಿಯಲ್ಲಿ ಇತರೆ ನಗರಗಳಲ್ಲೂ ಮೆಟ್ರೋ ಸೇವೆಗಳನ್ನು ವಿಸ್ತರಿಸುವ ಯೋಚನೆ ಇದೆ ಎಂದು ಅವರು ಹೇಳಿದ್ದಾರೆ.

'ನಮ್ಮ ಮೆಟ್ರೋ' ಮಿಸ್ಸಿಂಗ್ ಲಿಂಕ್‌ಗಳಾದ ಬೈಯಪ್ಪನಹಳ್ಳಿ–ಕೆ.ಆರ್.ಪುರಂ ಮತ್ತು ಕೆಂಗೇರಿ–ಚಲ್ಲಘಟ್ಟ ನಡುವಿನ ವಿಸ್ತರಿತ ಮಾರ್ಗವನ್ನು ಉತ್ತರಪ್ರದೇಶದ ಸಹಿಬಾ ಬಾದ್‌ನಿಂದಲೇ ವರ್ಚುವಲ್ ಆಗಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು. ಈ ವಿಸ್ತರಿತ ಮಾರ್ಗವು ಸಂಪರ್ಕವನ್ನು ಸುಧಾರಿಸುವುದರ ಜೊತೆಗೆ ಲಕ್ಷಾಂತರ ಪ್ರಯಾಣಿಕರಿಗೆ ನೆರವಾಗಲಿದೆ. ಬೆಂಗಳೂರು ಮೆಟ್ರೋದ ಎರಡು ಲೇನ್‌ಗಳು ಕನೆಕ್ಟಿವಿಟಿಯನ್ನು ಸುಧಾರಿಸಲಿದೆ. ಪ್ರತಿ ದಿನ ಸುಮಾರು 8 ಲಕ್ಷ ಮಂದಿ ಇದರಲ್ಲಿ ಪ್ರಯಾಣಿಸುವ ನಿರೀಕ್ಷೆಯಿದೆ ಎಂದೂ ಮೋದಿ ಹೇಳಿದರು.

ಇಂದು ಉತ್ತರಪ್ರದೇಶದ ನೋಯ್ಡಾ ಘಾಜಿಯಾಬಾದ್, ಲಕ್ನೋ, ಮೀರತ್, ಅಗ್ರಾ ಮತ್ತು ಕಾನ್ಪುರದಲ್ಲಿ ಮೆಟ್ರೋ ರೈಲು ಸೇವೆ ಆರಂಭಗೊಂಡಿದೆ. ಅದೇ ರೀತಿ, ಕರ್ನಾಟಕದಲ್ಲೂ ಮುಂದಿನ ದಿನಗಳಲ್ಲಿ ಮೆಟ್ರೋ ಸೇವೆಯನ್ನು ವಿಸ್ತರಿಸಲಾಗುವುದು. ಮೈಸೂರು ಸೇರಿದಂತೆ ಇತರೆ ಪ್ರಮುಖ ನಗರಗಳಿಗೂ ಮೆಟ್ರೋ ಪರಿಚಯಿಸಲಾಗುವುದು ಎಂದು ಮೋದಿ ಹೇಳಿದರು. ಈ ಮೂಲಕ ಭವಿಷ್ಯದಲ್ಲಿ ರಾಜ್ಯದ ಇನ್ನಷ್ಟು ನಗರಗಳಲ್ಲಿ ಮೆಟ್ರೋ ರೈಲು ಸುಳಿವನ್ನು ಅವರು ನೀಡಿದರು.

ಇದೇ ವೇಳೆ, ಪ್ರಧಾನಿ ಮೋದಿಯವರು ದೇಶದ ಮೊಟ್ಟಮೊದಲ ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಂ (ಆರ್‌ಆರ್‌ಟಿಎಸ್) ರೈಲು ವ್ಯವಸ್ಥೆಗೆ ಚಾಲನೆ ನೀಡಿದರು. ಈ ವ್ಯವಸ್ಥೆಗೆ 'ನಮೋ ಭಾರತ್' ಎಂದು ಹೆಸರಿಡಲಾಗಿದೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂಚಾರ ದಟ್ಟಣೆಗೆ ಕಡಿವಾಣ ಹಾಕಲು ಮತ್ತು ಹೆಚ್ಚುತ್ತಿರುವ ಸಮೂಹ ಸಾರಿಗೆ ಬೇಡಿಕೆ ಪೂರೈಸಲು 'ನಮ್ಮ ಮೆಟ್ರೋ'ದ 3ನೇ ಹಂತದ ಅವಶ್ಯಕತೆ ಇದ್ದು, ಈ ಸಂಬಂಧದ ಪ್ರಸ್ತಾವನೆಗೆ ಶೀಘ್ರ ಅನುಮೋದನೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಿಎಂ ಸಿದ್ದರಾಮಯ್ಯ ಆಗ್ರಹಿಸಿದರು. ಬೈಯಪ್ಪನಹಳ್ಳಿ–ಕೆ.ಆರ್.ಪುರ ಮತ್ತು ಕೆಂಗೇರಿ–ಚಲ್ಲಘಟ್ಟ ನಡುವಿನ ಮಾರ್ಗ

ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಹೆಚ್ಚುತ್ತಿರುವ ಬೇಡಿಕೆ ಪೂರೈಸಲು, ಬೆಂಗಳೂರು ಮೆಟ್ರೋ ರೈಲು ಯೋಜನೆಯ 3ನೇ ಹಂತದಲ್ಲಿ 45 ಕಿ.ಮೀ.ಗಳ ಉದ್ದದ ಮಾರ್ಗವನ್ನು ಅಂದಾಜು ರೂ.15,611 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಸಂಬಂಧದ ಸಮಗ್ರ ಯೋಜನೆ ವರದಿ (ಡಿಪಿಆರ್)ಯನ್ನು ರಾಜ್ಯ ಸರ್ಕಾರ ಈಗಾಗಲೇ ಕೇಂದ್ರದ ಅನುಮೋದನೆಗಾಗಿ ಕಳುಹಿಸಿದೆ. ಈ ಯೋಜನೆಗೆ ಶೀಘ್ರ ಅನುಮೋದನೆ ನೀಡಬೇಕು ಎಂದು ಮನವಿ ಮಾಡಿದರು.

**ಆಧಾರ:** ಉದಯವಾಣಿ, ದಿನಾಂಕ: 21.10.2023

## 14. ಸೀಬರ್ಡ್ ನಿರಾಶ್ರಿತರಿಗೆ ಪರಿಹಾರ, ಉದ್ಯೋಗ

ಏಷ್ಯಾದ ಅತಿದೊಡ್ಡ ನೌಕಾನೆಲೆ ಎನ್ನುವ ಖ್ಯಾತಿ ಪಡೆದಿರುವ ಕಾರವಾರ ಸೀಬರ್ಡ್ ನೌಕಾನೆಲೆಯ ವಾಯುನೆಲೆ ವಿಸ್ತರಣೆ ವೇಳೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಾಯುನೆಲೆ ನಿರ್ಮಿಸುವ ವೇಳೆ ಭೂ ಸ್ವಾಧೀನ ಮಾಡಿಕೊಳ್ಳಲಾಗಿದ್ದು, ಪರಿಹಾರ ವಿತರಿಸುವ ವಿಷಯದಲ್ಲಿ ತಾರತಮ್ಯವಾಗಿದೆ ಎನ್ನುವ ಆರೋಪ ಕೇಳಿ ಬಂದಿದೆ. ಭೂ ಸ್ವಾಧೀನದ ಸಮಯದಲ್ಲಿ ಪರಿಹಾರದೊಂದಿಗೆ ಮನೆಗೊಂದು ಉದ್ಯೋಗ ನೀಡುವ ಭರವಸೆಯನ್ನು ನೀಡಲಾಗಿತ್ತು. ಆದರೆ ಇದೀಗ ಕೆಲ ಮನೆಗಳಿಗೆ ಮಾತ್ರ ನೀಡಲಾಗಿದೆ ಎನ್ನುವ ಆರೋಪ ಕೇಳಿಬಂದಿತ್ತು.

ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸುವಂತೆ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ನೇತೃತ್ವದ ನಿಯೋಗವೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕೃಷ್ಣದಲ್ಲಿ ಭೇಟಿಯಾಗಿ ಚರ್ಚೆ ನಡೆಸಿತು.

ನೌಕಾನೆಲೆಯೂ ನಿರ್ಮಿಸುತ್ತಿರುವ ವಾಯುನೆಲೆಯನ್ನು ವಿಸ್ತರಿಸಿ, ಸಿವಿಲ್ ಎನ್‌ಕ್ಲೇವ್ ನಿರ್ಮಿಸುವ ಯೋಜನೆಗೆ ನಡೆಸುತ್ತಿರುವ ಭೂಸ್ವಾಧೀನ ಪ್ರಕ್ರಿಯೆಯ ಪರಿಹಾರ ನಿಗದಿಯಲ್ಲಿ ತಾರತಮ್ಯವಾಗಿದೆ ಎಂದು ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2013 ರ ಭೂಸ್ವಾಧೀನ ಕಾಯ್ದೆಯ ಅನ್ವಯ ಇದನ್ನು ನಿವಾರಿಸಲು ಕ್ರಮಕೈಗೊಳ್ಳವುದಾಗಿ ಭರವಸೆ ನೀಡಿದರು.

**ಆಧಾರ:** ವಿಶ್ವವಾಣಿ, ದಿನಾಂಕ:22.10.2023

## 15.ಕಂದಾಯ ಭೂಮಿ ರಕ್ಷಣೆಗೆ 'ಅರಣ್ಯ ಕಾಯ್ದೆ' ಮಾದರಿ

ಕಂದಾಯ ಭೂಮಿಯನ್ನು ಅವ್ಯಾಹತವಾಗಿ ಕಬಳಿಸುವುದಕ್ಕೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ಸರ್ಕಾರ, ಅರಣ್ಯ ಭೂಮಿ ಒತ್ತುವರಿ ಮಾಡಿದವರಿಗೆ ವಿಧಿಸುವ ಶಿಕ್ಷೆಯನ್ನು ಈ ಕಬಳಿಕೆದಾರರಿಗೂ ಅನ್ವಯಿಸಲು ಮುಂದಾಗಿದೆ.

ಕಂದಾಯ ಭೂಮಿ ರಕ್ಷಣೆ ಕರಿತು ಸರ್ಕಾರಕ್ಕೆ ಶಿಫಾರಸು ಮಾಡಲು ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರನ್ನು ಒಳಗೊಂಡ ಸಚಿವ ಸಂಪುಟ ಉಪ ಸಮಿತಿಯು ನಿರ್ಧರಿಸಿದೆ.

ಕಂದಾಯ ಭೂಮಿ ಕಬಳಿಕೆ ತಡೆಗೆ ಕರ್ನಾಟಕ ಅರಣ್ಯ ಕಾಯ್ದೆ–1963 ಹಾಗೂ 1980ರಲ್ಲಿ ರೂಪಿಸಿದ್ದ ಕಾಯ್ದೆ ಮಾದರಿಯಲ್ಲಿ ಕಾನೂನು ರೂಪಿಸುವಂತೆ ಸಲಹೆ ನೀಡಲು ಸಮಿತಿ ತೀರ್ಮಾನಿಸಿದೆ.

ಅರಣ್ಯ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿದರೆ ಅಥವಾ ಕಬಳಿಸಿದರೆ ಕರ್ನಾಟಕ ಅರಣ್ಯ ಕಾಯ್ದೆ ಪ್ರಕಾರ ಕನಿಷ್ಠ ಒಂದು ವರ್ಷದಿಂದ ಗರಿಷ್ಠ ಎರಡು ವರ್ಷಗಳವರೆಗೆ ಶಿಕ್ಷೆ, ದಂಡ ವಿಧಿಸಲು ಅವಕಾಶವಿದೆ. ಸಂರಕ್ಷಿತ ಅರಣ್ಯ, ಜಿಲ್ಲಾ ಅರಣ್ಯ ಪ್ರದೇಶ, ಕಿರು ಅರಣ್ಯ ಪರಿಭಾವಿತ ಅರಣ್ಯಗಳ (ಡೀಮ್ಡ್ ಫಾರೆಸ್ಟ್) ಆಧಾರದಲ್ಲಿ ಶಿಕ್ಷೆ, ದಂಡದ ಪ್ರಮಾಣ ನಿರ್ಧರಿಸಲಾಗುತ್ತದೆ. ಸಹಾಯಕ ಅರಣ್ಯ ಸಂರಕ್ಷಾಧಿಕಾರಿ ಹಾಗೂ ಅವರ ಮೇಲ್ಪಟ್ಟದ ಅಧಿಕಾರಿಗಳಿಗೆ ಒತ್ತುವರಿ ತೆರವು ಅಧಿಕಾರ ನೀಡಲಾಗಿದೆ. ಇಂತಹ ನಿಯಮಗಳನ್ನು ರೂಪಿಸುವ ಮೂಲಕ ಕಂದಾಯ ಭೂಮಿ ಕಬಳಿಕೆ ಸಂಪೂರ್ಣ ಕಡಿವಾಣ ಹಾಕಬಹುದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿನ ಸರ್ಕಾರಿ ಜಮೀನು ಒತ್ತುವರಿ ಕುರಿತು ಎ.ಟಿ.ರಾಮಸ್ವಾಮಿ ನೇತೃತ್ವದ ವಿಧಾನಮಂಡಲ ಜಂಟಿ ಸಮಿತಿ 2007 ರಲ್ಲಿ ವರದಿ ನೀಡಿತ್ತು. ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣಿಯನ್ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯ ಪಡೆಯು ರಾಜ್ಯದ ಉದ್ದಗಲಕ್ಕೆ ಲಕ್ಷಾಂತರ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ಪತ್ತೇಹಚ್ಚಿತ್ತು. 2011ರಲ್ಲಿ ವರದಿ ನೀಡಿದ ನಂತರ ಜಂಟಿ ಸದನ ಸಮಿತಿ, ಕಾರ್ಯಪಡೆಗಳ ಶಿಫಾರಸಿನಂತೆ ಭೂಕಬಳಿಕೆ ನಿಷೇಧ ಕಾಯ್ದೆಯನ್ನು ರೂಪಿಸಿ, ಜಾರಿಗೊಳಿಸಲಾಗಿತ್ತು. ರೈತರಿಗೆ ಕಿರುಕುಳವಾಗುತ್ತಿದೆ ಎಂಬ ಕಾರಣ ನೀಡಿ ಕಳೆದ ವರ್ಷವಷ್ಟೇ ಮತ್ತೆ ತಿದ್ದುಪಡಿ ತಂದು ಬಿಬಿಎಂಪಿ ಹಾಗೂ ರಾಜ್ಯದ ಎಲ್ಲ ನಗರ ಪಾಲಿಕೆಗಳ ವ್ಯಾಪ್ತಿಯ ಹೊರಗಿನ ಪ್ರದೇಶಗಳನ್ನು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಚಾಲ್ತಿಯಲ್ಲಿರುವ ಗೂಂಡಾ ಕಾಯ್ದೆ ಸರ್ಕಾರಿ ದಾಖಲೆ ತಿದ್ದಿ ಆರ್ಥಿಕ ವಂಚನೆ ಎಸಗುವ ಪ್ರಕರಣಗಳಿಗೆ ಸೀಮಿತವಾಗಿದೆ. ಹಾಗಾಗಿ, ಆರ್ಥಿಕ ಅಪರಾಧ ಹೊರತಾದ ಭೂ ಕಬಳಿಕೆ ತಡೆಗೆ ಸದ್ಯಕ್ಕೆ ಪ್ರಬಲ ಕಾನೂನುಗಳು ಇಲ್ಲದಂತಾಗಿದೆ.

ರಾಜ್ಯದಲ್ಲಿನ ಕಂದಾಯ ಜಮೀನುಗಳನ್ನು ಅನಧಿಕೃತವಾಗಿ ಸಾಗುವಳಿ ಮಾಡಿದ ರೈತರಿಗೆ ಭೂ ಮಂಜೂರಾತಿ ನೀಡಲು 1990–92ರಲ್ಲಿ ಮೊದಲ ಬಾರಿ ಫಾರಂ 50 ಅಡಿ ಅವಕಾಶ ಕಲ್ಪಿಸಲಾಗಿತ್ತು. ನಂತರ ಫಾರಂ 53ಅಡಿ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿತ್ತು. 50 ಹಾಗೂ 53ರಲ್ಲಿ 20 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಮೊದಲ ಅರ್ಜಿಗಳಲ್ಲಿ ಶೇ 30ರಷ್ಟು ಇತ್ಯರ್ಥವಾದರೆ, ಎರಡನೇ ಅವಕಾಶದಲ್ಲಿ ಶೇ 10ರಷ್ಟೂ ಇತ್ಯರ್ಥವಾಗಿಲ್ಲ. ಇತ್ಯರ್ಥವಾಗದ ಒತ್ತುವರಿ ಭೂಮಿ 9.97 ಲಕ್ಷ ಎಕರೆ ಇದೆ. ಅರ್ಜಿಗಳನ್ನು ತಿರಸ್ಕರಿಸದೇ ಒತ್ತುವರಿ ತೆರವು ಮಾಡಲು ಈಗಿರುವ ಭೂ ಸುಧಾರಣಾ ಕಾನೂನಿನಲ್ಲಿ ಅವಕಾಶವಿಲ್ಲ.

2005 ಜನವರಿ 1ಕ್ಕೂ ಮೊದಲು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂರಹಿತರು, ಸಣ್ಣ ರೈತರ ಜಮೀನುಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 94ಎ(4)ಅಡಿ ನಮೂನೆ 57ರ ಅಡಿ ಅರ್ಜಿ ಸಲ್ಲಿಸಲು 2018ರಲ್ಲಿ ಸರ್ಕಾರ ಮತ್ತೆ ಅವಕಾಶ ನೀಡಿತ್ತು. 8,57,640 ಅರ್ಜಿಗಳು ಸಲ್ಲಿಕೆಯಾಗಿವೆ. ಅರ್ಜಿ ಸಲ್ಲಿಕೆಯ ಅವಧಿಯನ್ನು ನಾಲ್ಕು ವರ್ಷಗಳಷ್ಟು ವಿಸ್ತರಿಸಿದ್ದು, ಸಾಗುವಳಿಗೆ ಸರ್ಕಾರವೇ ಉತ್ತೇಜನ ನೀಡಿದಂತಾಗಿತ್ತು.

ಈಗಾಗಲೇ ಬಹುತೇಕ ಸಾಮೂಹಿಕ ಭೂಮಿ ಕೃಷಿ ಭೂಮಿಯಾಗಿ ಪರಿವರ್ತನೆಯಾಗಿವೆ. 25 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಸಾಗುವಳಿ ಮಾಡುತ್ತಿವೆ. ಮನೆ ಮತ್ತು ಗುಡಿಸಲು ನಿರ್ಮಿಸಿರುವವರು ನಮೂನೆ 94 ಸಿ (ಗ್ರಾಮೀಣ) ಮತ್ತು 94 ಸಿಸಿ (ನಗರ)ಅಡಿಯಲ್ಲಿ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಪ್ರಕರಣ ಕೋರ್ಟ್ ಮೆಟ್ಟಿಲೇರಿದೆ. ಬಗರ್‌ಹುಕುಂ ಅಡಿ ಸಲ್ಲಿಕೆಯಾದ ಎಲ್ಲ ಅರ್ಜಿಗಳನ್ನು ಸರ್ಕಾರ ಇತ್ಯರ್ಥಗೊಳಿಸಿದರೆ ಕಂದಾಯ ಭೂಮಿ ಸಂಪೂರ್ಣ ಖಾಲಿಯಾಗಲಿದೆ. ಬಹುಶ: ಸರ್ಕಾರಿ ಯೋಜನೆಗಳಿಗೂ ಭೂಮಿ ದೊರಕದಂತಾಗಲಿದೆ ಎಂದು ಉಪ ಸಮಿತಿ ಕಳವಳ ವ್ಯಕ್ತಪಡಿಸಿದೆ.

ಆಧಾರ: ಪ್ರಜಾವಾಣಿ, ದಿನಾಂಕ: 30.10.2023.

## 16. ರಾಜಧಾನಿಯೆಲ್ಲೆಡೆ ಕನ್ನಡ ಡಿಂಡಿಮ

ಕನ್ನಡ... ಕನ್ನಡ.. ಕನ್ನಡ.... ರಾಜಧಾನಿಯೆಲ್ಲೆಡೆ ಕನ್ನಡ ಕಲರವ ಹಳದಿ.... ಕೆಂಪು ಬಾವುಟಗಳನ್ನು ಹಿಡಿದ ಮಕ್ಕಳ ದಂಡು ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕನ್ನಡ ಹಾಡುಗಳು, ಚಿಣ್ಣರ ಮೊಗದ ಮೇಲೆ ಹಳದಿ–ಕೆಂಪು ಬಣ್ಣದ ನಾಡ ಧ್ವಜ ಚಿತ್ರ ಕನ್ನಡಾಂಬೆಗೆ ಮೊಳಗಿದ ಜೈಕಾರಗಳು...

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ನಗರ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ 68ನೇ ಕರ್ನಾಟಕ ರಾಜ್ಯೋತ್ಸವ ಹಿನ್ನೆಲೆಯಲ್ಲಿ ಈ ಎಲ್ಲಾ ದೃಶ್ಯಗಳು ಕಂಡುಬಂದವು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಡಾ.ಕೆ.ಗೋವಿಂದರಾಜು, ರಾಜ್ಯ ಸಭಾ ಸದಸ್ಯ ಲೆಹರ್ ಸಿಂಗ್, ಶಾಸಕರಾದ ಆರ್.ವಿ.ದೇಶಪಾಂಡೆ, ಎನ್.ಎ ಹ್ಯಾರೀಸ್, ಎ.ದೇವೇಗೌಡ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್, ವಿವಿಧ ಶಾಲಾ–ಕಾಲೇಜುಗಳ ಸಹಸ್ರಾರು ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಕನ್ನಡ ವೈಭವಕ್ಕೆ ಸಾಕ್ಷಿಯಾದರು.

ವೆಂಕಟಪುರದ ಸರ್ಕಾರಿ ಪ್ರಾಥಮಿಕ ಶಾಲೆ, ಸೂರಣುಸೆಯ ಸರ್ಕಾರಿ ಶಾಲೆ, ತಿಲಕ್ ಮೆಮೋರಿಯಲ್ ಶಾಲೆ, ಚಾಮರಾಜಪೇಟೆ ಬಾಲಕಿಯರ ಪ್ರೌಢಶಾಲೆ, ಕೆಪಿಎಸ್ ಸಾರಕ್ಕಿ ಬಿಜೆಸಿ ಕಾಡುಗೋಡಿ, ಕೆ.ಆರ್.ಪುರಂನ ಕೈರಾಳಿ ನಿಲಯಂ ಸಿ ಶಾಲೆ, ಕೆಂಗೇರಿ ಎಜ್ಯುಕೇಶನ್ ಟ್ರಸ್ಟ್, ಆರ್.ಟಿ.ನಗರ ಪಬ್ಲಿಕ್ ಸ್ಕೂಲ್‌ನ ಭಾರತ ಸ್ಕೌಟ್ಸ್– ಗೈಡ್ಸ್ ತಂಡ, ಆರ್.ಪಿ.ಸಿ ಲೇಔಟ್‌ನ ನ್ಯೂ ಕೆಂಬ್ರಿಡ್ಜ್ ಶಾಲೆ, ನವಭಾರತ ನಿರ್ಮಾಣ ವಿದ್ಯಾಮಂದಿರ ವೀವರ್ಸ್ ಕಾಲೋನಿ ಶಾಲೆಗಳ ತಂಡಗಳಿಂದ ಆಕರ್ಷಕ ಪಥಸಂಚಲನ ಜರುಗಿತು.

ಬೆಂಗಳೂರು ಗ್ರಾಮಾಂತರ ಕಗ್ಗಲಿಪುರದ ಕೆಪಿಎಸ್ ಶಾಲೆಯ 500 ವಿದ್ಯಾರ್ಥಿಗಳು ಮತ್ತು ಬನ್ನೇರುಘಟ್ಟದ ಲಿಲ್ಲಿರೋಜ್ ಆಂಗ್ಲ ಪ್ರೌಢಶಾಲೆಯ 500 ವಿದ್ಯಾರ್ಥಿಗಳಿಂದ ಕನ್ನಡಕ್ಕೆ ಸಂಬಂಧಿಸಿದ ಹಾಡುಗಳಿಗೆ ಮಾಡಿದ ನೃತ್ಯ ಎಲ್ಲರ ಗಮನ ಸೆಳೆಯಿತು. ನೃತ್ಯದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ನಾಡಿಗಾಗಿ ಹೋರಾಡಿದ ವೀರರು, ಖ್ಯಾತ ನಟರಾದ ಡಾ. ರಾಜ್‌ಕುಮಾರ್, ಶಂಕರ್‌ನಾಗ್ ಅವರ ಭಾವಚಿತ್ರಗಳು, ಯಕ್ಷಗಾನ, ಭರತನಾಟ್ಯ, ಡೊಳ್ಳು ಕುಣಿತ, ಸೋಮನ ಕುಣಿತ ಮುಂತಾದ ಜಾನಪದ ಕಲೆಗಳನ್ನು ನೃತ್ಯ ರೂಪಕದ ಮೂಲಕ ಪ್ರದರ್ಶಿಸಿದರು.

ರಾಜ್ಯೋತ್ಸವದ ಅಂಗವಾಗಿ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರಸಿದ್ಧ ಸಾಹಿತಿಗಳು ರಚಿಸಿರುವ ಐದು ಕನ್ನಡ ಗೀತೆಗಳನ್ನು ಹಾಡುವ ಮೂಲಕ ವಿಶೇಷ ರೀತಿಯಲ್ಲಿ ಆಚರಿಸಲಾಯಿತು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್‌ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಧ್ವಜಾರೋಹಣ ನೆರವೇರಿಸಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿದರು. ಐದು ಕನ್ನಡ ಗೀತೆಗಳನ್ನು ಹಾಡುವ ಮೂಲಕ ನುಡಿ ನಮನ ಸಲ್ಲಿಸಲಾಯಿತು.

ಹುಯಿಲಗೊಳ ನಾರಾಯಣ, ಕುವೆಂಪು, ದ.ರಾ.ಬೇಂದ್ರೆ, ಸಿದ್ದಯ್ಯ ಪುರಾಣಿಕ್, ಚನ್ನವೀರಕಣವಿ ರಚಿತ ಗೀತೆಗಳು ಆವರಣದಲ್ಲಿ ಅನುಕರಣಿಸಿದವು.

ಕರ್ನಾಟಕ ಸಂಭ್ರಮ–50 ಹೆಸರಾಯಿತು ಕರ್ನಾಟಕ', 'ಉಸಿರಾಗಲಿ ಕನ್ನಡ' ಎಂಬ ಘೋಷ ವಾಕ್ಯವು ಪಾಲಿಕೆ ಕೇಂದ್ರ ಕಛೇರಿ ಮುಂಭಾಗದಲ್ಲಿ ಕೆಂಪು ಹಾಗೂ ಹಳದಿ ಬಣ್ಣದಲ್ಲಿ ನಕ್ಷೆಯ ರಂಗೋಲಿಯಲ್ಲಿ ಬಿಡಿಸಿರುವುದು ಆಕರ್ಷಕವಾಗಿತ್ತು.

ಬಿಬಿಎಂಪಿ ವಿಶೇಷ ಆಯುಕ್ತ ಮನೀಶ್ ಮೌದ್ಗಿಲ್, ಶಿವಾನಂದ ಕಲ್ಕೆರಿ, ಡಾ.ಕೆ.ಹರೀಶ್‌ಕುಮಾರ್, ರೆಡ್ಡಿ ಶಂಕರ ಬಾಬು ಪ್ರೀತಿ ಗೆಹಲೋತ್, ಪೂರ್ವ ವಲಯ ಆಯುಕ್ತ ಸ್ನೇಹಲ್ ಇತರರಿದ್ದರು.

**ಆಧಾರ:** ಉದಯವಾಣಿ, ದಿನಾಂಕ:02.11.2023

## 17. ವಿಶ್ವವಿದ್ಯಾಲಯಗಳ ಅಧಿನಿಯಮದ ತಿದ್ದುಪಡಿಗೆ ಸಮಿತಿ ರಚಿಸಲು ಸೂಚನೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000ಕ್ಕೆ ತಿದ್ದುಪಡಿ ತರಲು ಉನ್ನತ ಶಿಕ್ಷಣ ಇಲಾಖೆ ಮುಂದಾಗಿದೆ.

ಈ ಸಂಬಂಧ ನಿವೃತ್ತ ಐಎಎಸ್ ಅಧಿಕಾರಿ ನೇತೃತ್ವದಲ್ಲಿ ವಿಶ್ರಾಂತ ಕುಲಪತಿ ನಿವೃತ್ತ ಕುಲಸಚಿವರು ಮತ್ತು ನಿವೃತ್ತ ಪ್ರಾಧ್ಯಾಪಕರನ್ನು ಒಳಗೊಂಡ ತಜ್ಞರ ಸಮಿತಿ ರಚಿಸಿ ಒಂದು ತಿಂಗಳೊಳಗೆ ವರದಿ ನೀಡುವಂತೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಇಲಾಖೆ ಪ್ರಧಾನ ಕಾರ್ಯದರ್ಶಿ ಅವರಿಗೆ ಪತ್ರ ಬರೆದು ಸೂಚನೆ ನೀಡಿದ್ದಾರೆ.

ಶೈಕ್ಷಣಿಕ ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಯನ್ನು ಪ್ರಧಾನವನ್ನಾಗಿಸುವುದು ಮತ್ತು ಆಡಳಿತದಲ್ಲಿ ಸುಧಾರಣೆ ತರುವ ಉದ್ದೇಶದಿಂದ ವಿಶ್ವವಿದ್ಯಾಲಯಗಳ ಅಧಿನಿಯಮ–2000 ಜಾರಿಯಲ್ಲಿದೆ. ಆದರೆ ಇದರಲ್ಲಿ ಹಲವು ನ್ಯೂನತೆಗಳಿವೆ ಎಂದು ಜನಪ್ರತಿನಿಧಿಗಳು, ಸಾರ್ವಜನಿಕರು, ಭೋದಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ಹಲವು ದೂರುಗಳು ಸ್ವೀಕೃತವಾಗಿದೆ. ಈ ಹಿನ್ನೆಲೆಯಲ್ಲಿ ಅಧಿನಿಯಮವನ್ನು ಕೂಲಂಕಷವಾಗಿ ಮತ್ತೊಮ್ಮೆ ಪರಿಶೀಲಿಸಿ ತಿದ್ದುಪಡಿ ತರುವುದು ಅತ್ಯವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ತಜ್ಞರ ಸಮಿತಿ ರಚಿಸಿ ವರದಿ ನೀಡುವಂತೆ ಸೂಚನೆ ನೀಡಲಾಗಿದೆ.

ಸಾರ್ವಜನಿಕ ವಿವಿಗಳಲ್ಲಿ ಪ್ರತೀ ವರ್ಷ ಲೆಕ್ಕಪರಿಶೋಧನೆ ನಡೆಸುವುದು, ಕುಲಸಚಿವರ(ಆಡಳಿತ) ಹುದ್ದೆಗಳಿಗೆ ಕಡ್ಡಾಯವಾಗಿ ಕೆಎಎಸ್ ಅಧಿಕಾರಿಗಳನ್ನು ನೇಮಿಸುವುದು, ವಿವಿಗಳಿಗೆ ಏಕರೂಪ ಪರೀಕ್ಷೆ, ಮೌಲ್ಯಮಾಪನ ಮತ್ತು ಫಲಿತಾಂಶ ಪ್ರಕಟಣೆಯ ವೇಳಾಪಟ್ಟಿ ನಿಗದಿ ಪಡಿಸುವ ಸಂಬಂಧ ಈಗಿರುವ ಕಾಯ್ದೆಯಲ್ಲಿ ತಿದ್ದುಪಡಿ ತರುವ ಉದ್ದೇಶ ಸರ್ಕಾರಕ್ಕಿದೆ ಎಂದು ಉನ್ನತ ಶಿಕ್ಷಣ ಇಲಾಖೆಯಲ್ಲಿ ಮೂಲಗಳು ತಿಳಿಸಿವೆ.

**ಆಧಾರ:** ಉದಯವಾಣಿ, ದಿನಾಂಕ: 09.11.2023

## 18. ಕಾರ್ಮಿಕರಿಗೆ ಭದ್ರತೆ ಒದಗಿಸಲು ಕಾನೂನು

ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸೂಕ್ತ ಕಾನೂನು ರೂಪಿಸಲಾಗುವುದು ಎಂದು ಕಾರ್ಮಿಕ ಸಚಿವರೂ ಆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿ ಅಧ್ಯಕ್ಷ ಸಂತೋಷ್ ಲಾಡ್ ಹೇಳಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಮ್ಮಿಕೊಂಡಿದ್ದ ಅಸಂಘಟಿತ ಕಾರ್ಮಿಕರ ಮಕ್ಕಳಿಗೆ 2022–23ನೇ ಸಾಲಿನ ಶೈಕ್ಷಣಿಕ ಧನ ಸಹಾಯ ಬಿಡುಗಡೆ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಸಚಿವ ಸಂತೋಷ್ ಲಾಡ್ ಸರಕಾರ ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸುತ್ತಿದೆ. ಕನಿಷ್ಠ ವೇತನ ಹೆಚ್ಚಿಸುವ ಪ್ರಸ್ತಾವನೆ ಸರಕಾರದ ಮುಂದಿದ್ದು, ಶೀಘ್ರದಲ್ಲೇ ಈ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಸಾರಿಗೆ ವಲಯದಲ್ಲಿ 35 ಲಕ್ಷ ವಾಣಿಜ್ಯ ಬಳಕೆ ವಾಹನ ಚಾಲಕರು ಮಾತ್ರವಲ್ಲದೆ, ಗ್ಯಾರೇಜ್ ಮೆಕ್ಯಾನಿಕ್, ಕ್ಲೀನರ್ಸ್‌ಗಳಿದ್ದಾರೆ. ಈ ವಲಯದಲ್ಲಿ ಕಲ್ಯಾಣ ಕಾರ್ಯಕ್ರಮಗಳ ಅನುಕೂಲಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಸಾರಿಗೆ ಸಚಿವರೊಂದಿಗೂ ಚರ್ಚಿಸಲಾಗಿದೆ. ಶೇ.11ರ ಸೆಸ್‌ನಲ್ಲಿ ಅದರ ಶೇ 27 ರಷ್ಟು ಸಾರಿಗೆ ಮಂಡಳಿಗೆ ನೀಡಲು ಕೇಳಿದ್ದು, ಈ ಮೂಲಕ ಸಾರಿಗೆ ಕಲ್ಯಾಣ ಮಂಡಳಿ ಸ್ಥಾಪನೆ ಮಾಡಿ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುವುದು ಎಂದರು.

**ಆಧಾರ:** ಉದಯವಾಣಿ, ದಿನಾಂಕ: 11.11.2023.

## 19. ಹವಾಮಾನ ಕ್ರಿಯಾಯೋಜನೆಗೆ ಸಜ್ಜು

ನಗರದ ಪ್ರಥಮ ಹವಾಮಾನ ಕ್ರಿಯಾ ಯೋಜನೆ(ಸಿಎಪಿ) ಕರಡು ಸಿದ್ಧಪಡಿಸಲು ಬಿಬಿಎಂಪಿ ಸಜ್ಜಾಗಿದೆ.

ಮುಂಬೈ, ಚೆನ್ನೈ ನಂತರ ಬೆಂಗಳೂರು ಸಿಎಪಿ ಕರಡು ಸಿದ್ಧಪಡಿಸಲಿದ್ದು, 2050ರ ವೇಳೆಗೆ ತಟಸ್ಥ ಇಂಗಾಲ (ಕಾರ್ಬನ್ ನ್ಯೂಟ್ರಲ್) ಸಾಧಿಸುವ ನಗರವಾಗಿಸುವ ನೀಲನಕ್ಷೆ ತಯಾರಾಗಲಿದೆ. 269 ಕ್ರಿಯೆಗಳನ್ನು ಒಳಗೊಂಡಿರುವ ಯೋಜನೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಅಂತಿಮಗೊಳಿಸಲಾಯಿತು.

ಹವಾಮಾನ ವೈಪರೀತ್ಯ ಎದುರಿಸುವ 'ಸಿ40' ನಗರಗಳ ಜಾಗತಿಕ ಸಂಪರ್ಕ ಜಾಲದಲ್ಲಿ ಬೆಂಗಳೂರು ಸಹ ನಾಯಕತ್ವವನ್ನು ಹೊಂದಿದೆ. ಈ ನಗರಗಳ ಪಟ್ಟಿಯಲ್ಲಿ ಮುಂಬೈ, ದೆಹಲಿ, ಕೊಲ್ಕತ್ತ, ಚೆನ್ನೈ, ಅಹಮದಾಬಾದ್ ನಗರಗಳೂ ಇವೆ.

ಗ್ಲೋಬಲ್ ಕನ್‌ಸ್ಟಲ್ಟೆಂಟ್ ಆಗಿರುವ ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್(ಡಬ್ಲ್ಯುಆರ್‌ಐ) 269 ಕ್ರಿಯೆಗಳ ಯೋಜನೆಗಳನ್ನು ಪ್ರಸ್ತುತ ಪಡಿಸಿತ್ತು. ಇಂಧನ, ಕಟ್ಟಡ, ಸಾರಿಗೆ, ಘನತಾಜ್ಯ ನಿರ್ವಹಣೆ, ವಾಯು ಗುಣಮಟ್ಟ, ನೀರು ನಗರ ಯೋಜನೆ, ಹಸಿರೀಕರಣ ಜೀವವೈವಿಧ್ಯ ಮತ್ತು ವಿಪತ್ತು ನಿರ್ವಹಣೆ ಸೇರಿದಂತೆ ಹಲವು ಕ್ರಿಯೆಗಳನ್ನು ಈ ಯೋಜನೆ ಒಳಗೊಂಡಿದೆ. ಈ 269 ಕ್ರಿಯೆಗಳಲ್ಲಿ 143 ಕ್ರಿಯೆಗಳಿಗೆ ಬಿಬಿಎಂಪಿ 'ಪ್ರಾಥಮಿಕವಾಗಿ' ಜವಾಬ್ದಾರಿಯನ್ನು ಹೊಂದಿದೆ.

ನಗರದಲ್ಲಿ ಗ್ರೀನ್‌ಹೌಸ್ ಗ್ಯಾಸ್(ಜಿಎಚ್‌ಜಿ) ಹೊರ ಸೂಸುವಿಕೆಯನ್ನು ಕಡಿತಗೊಳಿಸುವುದು, ಹವಾಮಾನ ಬದಲಾವಣೆಯಿಂದ ಉಂಟಾಗುವ ವೈಪರೀತ್ಯಗಳ ವಿರುದ್ಧ ಸ್ಥಿತಿಸ್ಥಾಪಕವನ್ನು ನಿರ್ಮಿಸುವುದು 'ಬೆಂಗಳೂರು' ಹವಾಮಾನ ಕ್ರಿಯಾಯೋಜನೆಯ ಪ್ರಮುಖ ಉದ್ದೇಶವಾಗಿದೆ. 30 ವರ್ಷಗಳ ಹವಾಮಾನವನ್ನು ವಿಮರ್ಶಿಸಿ ಡಬ್ಲ್ಯುಆರ್‌ಐ ನಗರಗಳ ಜಿಎಚ್‌ಜಿ ಮಟ್ಟವನ್ನು 2019ರಲ್ಲಿ ಸಿದ್ಧಪಡಿಸಿದೆ ಎಂದು ಅಧಿಕಾರಿಗಳು ತಿಳಿಸಿದರು.

**ಆಧಾರ:** ಪ್ರಜಾವಾಣಿ, ದಿನಾಂಕ: 16.11.2023

## 20. 188 ಇಂದಿರಾ ಕ್ಯಾಂಟೀನ್ ಸ್ಥಾಪನೆಗೆ ಅಸ್ತು

ರಾಜ್ಯದಲ್ಲಿ ಹೊಸದಾಗಿ 188 ಇಂದಿರಾ ಕ್ಯಾಂಟೀನ್ ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಮುಂದಾಗಿದ್ದು, ಇದಕ್ಕಾಗಿ ಒಟ್ಟು ರೂ. 154 ಕೋಟಿ ನೀಡಲು ಸಚಿವ ಸಂಪುಟ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಂಪುಟ ಸಭೆ ಬಳಿಕ ನಡೆದ ಪ್ರತಿಕಾ ಗೋಷ್ಠಿಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್.ಕೆ.ಪಾಟೀಲ್ ಈ ವಿಚಾರ ತಿಳಿಸಿದ್ದಾರೆ. ಬಿಬಿಎಂಪಿ ಹೊರತುಪಡಿಸಿ ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ 188 ಕಡೆ ಇಂದಿರಾ ಕ್ಯಾಂಟೀನ್ ಸ್ಥಾಪಿಸಲಾಗುತ್ತದೆ. ಈ ಕಾಮಗಾರಿಗೆ ಕೆಟಿಟಿಪಿ ವಿನಾಯಿತಿ ನೀಡಲಾಗಿದೆ. ಅನುಮೋದಿತ ವಿನ್ಯಾಸದಡಿ ರೂ.154 ಕೋಟಿ ವೆಚ್ಚದಲ್ಲಿ 188 ಕ್ಯಾಂಟೀನ್ ಮಾಡಲಾಗುತ್ತದೆ. ಸ್ಪರ್ಧೆ ಇಲ್ಲದ ಕಾರಣ ಕೆಟಿಟಿಪಿ ಕಾಯ್ದೆ ವಿನಾಯಿತಿ ಕೊಡಲಾಗಿದೆ ಎಂದು ತಿಳಿಸಿದರು.

**ಆಧಾರ:** ಉದಯವಾಣಿ, ದಿನಾಂಕ: 17.11.2023

## 21. ಹಸಿರು ಕ್ರಾಂತಿಯಿಂದ ಸುಸ್ಥಿರ ಕೃಷಿ ಬೆಳವಣಿಗೆ

ಹೊಸ ತಳಿಗಳು, ಹೊಸ ಔಷಧ, ಮಣ್ಣಿನ ಫಲವತ್ತತೆ, ರೈತರಿಗೆ ನ್ಯಾಯಯುತ ಬೆಲೆ, ಆಹಾರ ಸಂಗ್ರಹಣೆಗೆ ಗೋಮಾಮುಗಳು ಆಗಬೇಕಾದರೆ ಹಸಿರು ಕ್ರಾಂತಿ ನಿರಂತರವಾಗಿರಬೇಕು. ಆಗ ಮಾತ್ರ ಸುಸ್ಥಿರ ಕೃಷಿ ಬೆಳವಣಿಗೆ ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಜಿಕೆವಿಕೆ ಆವರಣದಲ್ಲಿ ಕೃಷಿ ಮೇಳ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ಕೃಷಿಕರಿಗೆ ವಿವಿಯಲ್ಲಿ ಆಗುವ ತಂತ್ರಜ್ಞಾನದ ಅಭಿವೃದ್ಧಿ, ಹೊಸ ತಳಿಗಳು, ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳುವುದು ಮುಂತಾದವನ್ನು ಜನರಿಗೆ ತಿಳಿಸುವ ಕೆಲಸವನ್ನು ಮಾಡಬೇಕು. ಕೃಷಿ ವಿದ್ಯಾಲಯ

ಕೇವಲ ಕೃಷಿ ಪದವೀಧರರನ್ನು ತಯಾರು ಮಾಡುವ ಸಂಸ್ಥೆಯಲ್ಲ. ಕೃಷಿ ವಿದ್ಯಾರ್ಥಿಗಳನ್ನು ತಯಾರಿಸುವ ಜೊತೆಗೆ ಸಂಶೋಧನೆಗಳಿಗೆ ಒತ್ತು ನೀಡಬೇಕು ಎಂದರು.

ನಮ್ಮ ರಾಜ್ಯ ಇಡೀ ದೇಶದಲ್ಲಿ ರಾಜಸ್ಥಾನವನ್ನು ಬಿಟ್ಟರೆ ಹೆಚ್ಚು ಒಣ ಭೂಮಿಯಿರುವ ರಾಜ್ಯ. ಹೆಚ್ಚು ರೈತರು ಕೃಷಿಯನ್ನು ಅವಲಂಬಿಸಿದ್ದಾರೆ. ನಾವು ಎಲ್ಲಾ ರೈತರೂ ಕೃಷಿಯಲ್ಲಿಯೇ ಮುಂದುವರೆಯುವಂತೆ ಮಾಡಬೇಕೆಂದರೆ ಕೃಷಿ ಲಾಭದಾಯಕವಾಗಬೇಕು. ಕೃಷಿ ಲಾಭದಾಯಕವಾಗದೇ ಹೋದರೆ ಬಹಳಷ್ಟು ಜನ ಕೃಷಿಯನ್ನು ಬಿಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗಾಗಲೇ ಅನೇಕ ರೈತರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಕೃಷಿ ಮಾಡಿ ಬದುಕಬಹುದು ಎಂಬ ಪರಿಸ್ಥಿತಿ ನಿರ್ಮಿಸುವುದು ಕೃಷಿ ವಿವಿಗಳಲ್ಲಿ ಕೆಲಸ ಎಂದು ಹೇಳಿದರು.

**ಆಧಾರ:** ವಿಜಯವಾಣಿ, ದಿನಾಂಕ: 26.11.2023

## 22. 324 ಕೋಟಿ ಬರ ಪರಿಹಾರ ಬಿಡುಗಡೆ

ರಾಜ್ಯದಲ್ಲಿ ಬರ ಪರಿಸ್ಥಿತಿ ಉಂಟಾಗಿದ್ದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಯಾವುದೇ ಬರ ಪರಿಹಾರ ನಿಧಿ ಬಿಡುಗಡೆಯಾಗದ ಬಗ್ಗೆ ರೈತ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೇ ರಾಜ್ಯ ಸರ್ಕಾರವು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ 2023–24ನೇ ಸಾಲಿನ ಬರ ಪರಿಹಾರಕ್ಕಾಗಿ ರೂ.324 ಕೋಟಿ ಬಿಡುಗಡೆ ಮಾಡಿ ಆದೇಶಿಸಿದೆ.

ರಾಜ್ಯದ 31 ಜಿಲ್ಲೆಗಳ 216 ತಾಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿದ್ದು ರೂ.35,000 ಕೋಟಿಗಳಷ್ಟು ಬೆಳೆ ಹಾನಿ ಆಗಿರುವುದಾಗಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಿ ರೂ.5,426.87 ಕೋಟಿ ಪರಿಹಾರ ಒದಗಿಸುವಂತೆ ಮನವಿ ಮಾಡಿತ್ತು. ಕೇಂದ್ರ ಸರ್ಕಾರವು ಕೇಂದ್ರದಿಂದ ಬರ ಅಧ್ಯಯನ ತಂಡವನ್ನು ಕಳುಹಿಸಿ ವರದಿ ಪಡೆದಿದ್ದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ.

ರಾಜ್ಯದಲ್ಲಿ ಮೂರು ತಿಂಗಳಿಂದ ಬರ ತಾಂಡವವಾಡುತ್ತಿದ್ದರೂ ರಾಜ್ಯ ಅಥವಾ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿದ್ದ ಹಿನ್ನೆಲೆಯಲ್ಲಿ ಕೇಂದ್ರ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿದ್ದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

**ಆಧಾರ:** ಕನ್ನಡಪ್ರಭ, ದಿನಾಂಕ:04.11.2023

# ಭಾಗ – 6

# ನ್ಯಾಯಾಲಯ ಸುದ್ದಿಗಳು

## 1. Court issues notice to RS Secretariat over AAP MP's suspension.

The Supreme court on Monday issued formal notice to the Rajya Sabha secretariat on a petition by Aam Aadmi Party (AAP) MP Raghav Chadha, who has challenged his " indefiinite suspension' from the Upper House.

A three-judge Bench headed by chief justice of India. D.Y.Chandrachud sought a response from the secretariat and the Rajya Sabha Chairman on Mr.Chadha's petition, questioning the latter's jurisdiction to suspend him despite the fact that the privilege Committee was already enquiring into his conduct.

There is no power to suspend. where is the power to suspend pending enquiry.' Chief Justice Chandrachud asked.

Mr.Chadha, represented by senior advocate Rakesh Dwivedi and advocate shadan Farasat, submitted that the suspension was in clear breach of Rules 256 and 266 of the Rules of Procedure and Conduct of Business in the Council of States ('Rajya sabha Rueles') which incorporate a categorical prohibition against the suspension of any Member for a period 'exceeding the remainder of the Session'.

The petition asked whether an MP could be suspended even in a case of breach of parliamentary privilege and that too indefinitely.

Would that kind of suspension pass the test of proportionality? Even if Rule 256 allows suspension for disregarding the Chair, it should extend only till the end of that particular session,' Mr Farasat said.

The Bench also highlighted the right of an MP to free speech inside and outside the House. The court listed the case for hearing on October 30.

**Courtesty:** The Hindu, Dated: 17.10.2023

## 2. ಮಹಾರಾಷ್ಟ್ರ ಸ್ಪೀಕರ್‌ಗೆ ಗಡುವು

ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಅವರ ಬಣದ ಶಾಸಕರ ಅನರ್ಹತೆ ಸಂಬಂಧ ಸಲ್ಲಿಸಿರುವ ಅರ್ಜಿಗಳ ಇತ್ಯರ್ಥಕ್ಕೆ ನಿರ್ದಿಷ್ಟ ವೇಳಾಪಟ್ಟಿ ನಿಗದಿಪಡಿಸುವಂತೆ ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ಸುಪ್ರೀಂ ಕೋರ್ಟ್ ಅಂತಿಮ ಗಡುವು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ಅನರ್ಹತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿತು.

2022 ಜೂನ್‌ನಿಂದ ಅರ್ಜಿಗಳ ಇತ್ಯರ್ಥ ಬಾಕಿ ಇರುವುದನ್ನು ಗಮನಿಸಿದ ಪೀಠವು, ಸ್ಪೀಕರ್ ಅವರ ವಿಳಂಬ ನಡೆಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿತು. ಸುರಂಗದ ಕೊನೆಯಲ್ಲಿ ಯಾವಾಗಲೂ ಬೆಳಕು ಇರುತ್ತದೆ. ಅದನ್ನು ಕಾಣಲು ಅವಕಾಶ ನೀಡಬೇಕು ಎಂದು ಮಾರ್ಮಿಕವಾಗಿ ಹೇಳಿತು.

ಮಹಾರಾಷ್ಟ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಅರ್ಜಿಗಳನ್ನು ಇತ್ಯರ್ಥ ಪಡಿಸಬೇಕಿರುವ ಸ್ಪೀಕರ್ ಅವರು ದಸರಾ ಸಂಭ್ರಮದಲ್ಲಿ ತೊಡಗಿಕೊಂಡಿದ್ದಾರೆ. ಹಬ್ಬ ಮುಗಿದ ಬಳಿದ ಇತ್ಯರ್ಥಪಡಿಸುತ್ತಾರೆ. ಅಲ್ಲದೇ ಹಲವು ಅರ್ಜಿಗಳು ಸಲ್ಲಿಕೆಯಾಗವೆ. ಹಾಗಾಗಿ ನಿರ್ದಿಷ್ಟ ವೇಳಾಪಟ್ಟಿ ನಿಗದಿಪಡಿಸಲು ಸ್ಪೀಕರ್ ಮತ್ತಷ್ಟು ಕಾಲವಕಾಶ ಬೇಕಿದೆ ಎಂದು ಪೀಠಕ್ಕೆ ತಿಳಿಸಿದರು.

ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಪೀಠವು, ಸದನದಲ್ಲಿ ಏನು ನಡೆದಿದೆ ಎಂಬುದು ನಮಗೆ ತಿಳಿದಿಲ್ಲ. ನಾವು ಮಧ್ಯ ಪ್ರವೇಶಿಸುವುದಿಲ್ಲ. ಸ್ಪೀಕರ್ ಅವರೇ ಅಂತಿಮ ನಿರ್ಧಾರ ಕೈಗೊಳ್ಳಬೇಕು. ಅವರು ಯಾವಾಗ ಈ ಪ್ರಕರಣವನ್ನು ಇತ್ಯರ್ಥಪಡಿಸುತ್ತಾರೆ ಎಂದು ಪ್ರಶ್ನಿಸಿತು.

ನಿರ್ದಿಷ್ಟ ದಿನಾಂಕ ನಿಗದಿಪಡಿಸುವ ಕುರಿತು ನ್ಯಾಯಾಲಯಕ್ಕೆ ತಿಳಿಸಬೇಕು. ಇಲ್ಲವಾದರೆ ನಾವೇ ಸಮಯವನ್ನು ನಿಗದಿಪಡಿಸುತ್ತೇವೆ ಎಂದು ಎಚ್ಚರಿಕೆ ನೀಡಿದ ಪೀಠವು ಸ್ಪೀಕರ್ ಅವರು ಸರ್ವಪಕ್ಷಗಳ ಸಭೆ ಕರೆದು ಚರ್ಚಿಸಿ ಸಮಯ ನಿಗದಿಪಡಿಸುವುದು ಉತ್ತಮ ಎಂದು ಸಲಹೆ ನೀಡಿತು. ಬಳಿಕ ಅಕ್ಟೋಬರ್ 30ಕ್ಕೆ ವಿಚಾರಣೆಯನ್ನು ಮುಂದೂಡಿತು.

ಶಾಸಕರ ಅನರ್ಹತೆ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಸ್ಪೀಕರ್‌ಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಶಿವಸೇನಾ (ಉದ್ಧವ್ ಠಾಕ್ರೆ ಬಣ) ಅರ್ಜಿ ಸಲ್ಲಿಸಿದೆ. ಅಜಿತ್ ಪವಾರ್ ಹಾಗೂ ಅವರ ಬಣದ ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಎನ್‌ಸಿಪಿ (ಶರದ್ ಪವಾರ್ ಬಣ) ನಾಯಕ ಜಯಂತರ ಪಟೇಲ್ ಅವರು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ.

**ಆಧಾರ:** ಪ್ರಜಾವಾಣಿ, ದಿನಾಂಕ: 18.10.2023

## 3. SC puts Maharashtra Speaker on deadline over defection pleas

The Supreme Court on Monday directed Maharashtra Assembly Speaker Rahul Narwekar to decide disqualification petitions filed under the Tenth Schedule (anti-defection law) of the Constitution against the Chief Minister Ekanath Shinde camp in the Shiv Sena dispute by December 31, 2023.

A three-judge Bench led by Chief Justice. D.Y.Chandrachud ordered the Speaker, in his capacity as a tribunal under the Tenth Schedule, to decide the disqualification petitions against the breakaway action headed by Deputy Chief Minister Ajit Pawar in the Nationalist Congress party (NCP) dispute by January 31,2024.

So we are giving the Speaker two months to decide the disqualification petitions in the Shiv Sena case and a month more in the Nationalist Congress Party case. That is fair. It is reasonable time, Chief Justice Chandrachud addressed the lawyers on both sides.

The Chief Justice said the need to bind the Speaker to deadlines had come after giving him repeated opportunities to conclude the disqualification proceedings.

The Court took matters into its hands after the Secretary, Maharashtra Legislative Assembly Secretariat, filed an affidavit that the Speaker could only decide by February 29,2024.

**Before election**

We do not want this to creep into the next election schedule. The proceeding cannot wrangle on until the next elections are announced. This has to come to an end within a fixed date, Chief Justice Chandrachud responded firmly to the affidavit during the hearing.

He noted that a Constitution Bench had directed the Speaker in May to conclude and pronounce the final orders in the Shiv Sena case Our Constitution Bench judgment was in May 2023. The incident (Shiv Sena split) happened in 2022, chief justice Chandrachud pointed out the delay.

There are 34 disqualification petitions pending before the Speaker in the Shiv Sena case and nine in the NCP matter. Solictor General Tushar Mehta urged the court to give the Speaker time till January 31, 2023, taking into account the intervening Deepavali holidays and the assembly’s shift to Nagpur for the 15 day Winter Session in December.

Senior advocates Kapit Sibal and A.M. Singhvi, appearing for the Uddhav Thackeray and Sharad pawar loyalist camps which were part of the Mahavikas Aghadi government overthrown by the Eknath Shinde BJP alliance in the State, said any ambiguity in the deadline or any further delay would subvert the anti defection proceedings.

Mr.Singhvi said the court ought to take into consideration the past months that the Speaker had to decide the case.

Chief Justice Chandrachud made it clear in the order that procedural wranglings should not delay the Tenth Schedule hearing in both cases.

In an earlier hearing in October, the court had slammed Mr Narwekar for reducing the anti-defection proceedings to a charade saying that he cannot merrily defer hearings and has to decide before the next elections.

The Speaker had disregarded the court’s order on September 18 to prepare a schedule to complete the disqualification proceedings under the Tenth Schedule against the Shinde camp. The Bench had at the time given Mr. Narwekar a week to prepare the timeline and submit it in court

**Courtesty:** The Hindu, Dated: 31.10.2023

## 4. TN guv delaying nod for bills a serious concern, says SC

The Supreme Court expressed serious concern over delay by Tamil Nau Governor RN Ravi in giving assent to bills passed by the Tamil Nadu Assembly.

A three-judge bench of Chief Justice DY Chandrachud, Justice JB Pardiwala and Justice Manoj Misra noted that as many as 12 bills are pending with the Tamil Nadu governor and sought the Centre's response to the state government writ petition accusing the Raj Bhavan of sitting over legislations, Senior advocates Abhishek Manu Singhvi, Mukul Rohatgi, and Wilson appeared on behalf of the state government.

During the hearing Singavi submitted that key decisions taken by the state government such as sanction for prosecution, appointment of members to the Tamil Nadu Public Service Commission, and grant of premature release to prisoners are awaiting the approval of the governor. The state cannot carry out recruitment without the full quorum of the public Service Commission including the chairman. From Punjab to Tamil Nadu, the disease is spreading, he said. States are now made to approach the Supreme Court with the same problems and the Constitution does not permit the governor to act again the state government. Article 200 requires him to deal with bills as soon as possible, Singhvi said.

Senior advocate P Willson said the governor is acting in defiance of the Constitution and the elected government and the elected government and governor have beome dysfunctional. He submitted five legal propositions for consideration by the Supreme Court regarding the time frame to be fixed for governors while dealing with bills and executive actions. Under Article 91 of the draft constitution, the time limit fixed for President to decide on bills was six weeks and the same can be fixed for governors too, Wilson said.

**Courtesty:** Indian Express, Dated: 11.11.2023

# ಭಾಗ–7

# ಹೊರ ರಾಜ್ಯಗಳ ಸುದ್ದಿಗಳು

# ಹೊರ ರಾಜ್ಯಗಳ ಸುದ್ಧಿಗಳು

## 1. ಬಿಹಾರದಲ್ಲಿ ದೇಶದ ಮೊದಲ ಜಾತಿಗಣತಿ ವರದಿ ಬಿಡುಗಡೆ

ಸ್ವತಂತ್ರ ಭಾರತದ ಮೊದಲ ಜಾತಿ ಸಮೀಕ್ಷಾ ವರದಿ ಗಾಂಧಿಜಯಂತಿ ದಿನ ಬಿಡುಗಡೆಯಾಗಿದೆ. 2022ರಲ್ಲಿ ಬಿಹಾರದ ಅಂದಿನ ಜೆಡಿಯು ಬಿಜೆಪಿ ಸರ್ಕಾರ ಆರಂಭಿಸಿದ್ದ ಜಾತಿ ಸಮೀಕ್ಷೆಯ ವರದಿಯನ್ನು ಬಿಡುಗಡೆ ಮಾಡಲಾಗಿದ್ದು ದೇಶಾದ್ಯಂತ ರಾಜಕೀಯ ವಲಯದಲ್ಲಿ ಭಾರೀ ಸಂಚಲನಕ್ಕೆ ಕಾರಣವಾಗಿದೆ. ಭಾರತದಲ್ಲಿ ಜಾತಿ ಸಮೀಕ್ಷೆ ನಡೆಸಿದ್ದು ಇದೇ ಮೊದಲು ಜೊತೆಗೆ ರಾಜ್ಯವೊಂದು ಇಂಥ ಸಮೀಕ್ಷೆ ನಡೆಸಿ ಅದನ್ನು ಬಿಡುಗಡೆ ಮಾಡಿದ್ದು ಕೂಡಾ ಇದೇ ಮೊದಲು ಹೀಗಾಗಿ ಇದು ಐತಿಹಾಸಿಕ ಎನ್ನಿಸಿಕೊಂಡಿದೆ. ಬಿಹಾರದ ಸಿಎಂ ನಿತೀಶ್ ಕುಮಾರ್ ಜಾತಿ ಸಮೀಕ್ಷೆಯ ಅಂಕಿ–ಅಂಶ ಬಿಡುಗಡೆ ಮಾಡಿದ್ದಾರೆ.

ಸಮೀಕ್ಷೆ ಕೇವಲ ಬಿಹಾರಕ್ಕೆ ಸೀಮಿತವಾಗಿದ್ದರೂ, ಇಂಥದ್ದೇ ಬೇಡಿಕೆ ದೇಶವ್ಯಾಪಿ ವ್ಯಕ್ತವಾದರೆ ಅದು ಮುಂದಿನ ದಿನಗಳಲ್ಲಿ ಎಲ್ಲಾ ರಾಜ್ಯಗಳಲ್ಲಿ ನೀತಿ ನಿರೂಪಣೆ, ಮೀಸಲು ನಿಯಮದಲ್ಲಿ ಬದಲಾವಣೆಗೆ ಕಾರಣವಾಗುವ ಜೊತೆಗೆ ರಾಜಕೀಯವಾಗಿ ಭಾರೀ ಪರಿಣಾಮ ಹೊಂದಿರುವ ಕಾರಣ ಈ ವರದಿ ಸಾಕಷ್ಟು ಮಹತ್ವ ಪಡೆದುಕೊಂಡಿದೆ.

ವರದಿ ಪ್ರಕಟವಾದ ಬೆನ್ನಲ್ಲೇ ಬಿಹಾರ ಜೆಡಿಯು, ಆರ್‌ಜೆಡಿ, ಕಾಂಗ್ರೆಸ್ ಸರ್ಕಾರವು ಸರ್ವಪಕ್ಷ ಸಭೆ ಕರೆದಿದ್ದು ಅವುಗಳ ಮುಂದೆ ವರದಿ ಮಂಡಿಸಲಿದೆ. ಜೊತೆಗೆ ವರದಿ ಆಧರಿಸಿ ಮುಂದಿನ ಕ್ರಮಗಳ ಬಗ್ಗೆ ನಿರ್ಧಾರ ಘೋಷಿಸುವ ಸಾಧ್ಯತೆ ಇದೆ. ಒಬಿಸಿ ಸೇರಿದಂತೆ ಹಿಂದುಳಿದ ವರ್ಗಗಳಿಗೆ ಹೆಚ್ಚಿನ ಮೀಸಲು ನೀಡಲು ಒಟ್ಟಾರೆ ಮೀಸಲು ಪ್ರಮಾಣವನ್ನೇ ಹೆಚ್ಚಿಸಬೇಕೆಂಬ ಇಂಡಿಯಾ ಮೈತ್ರಿಕೂಟದ ಬೇಡಿಕೆಯ ನಡುವೆಯೇ ಪ್ರಕಟವಾಗಿರುವ ವರದಿಯಲ್ಲಿ ಒಬಿಸಿ, ಇಬಿಸಿ ಸಮುದಾಯವು ಒಟ್ಟು ಜನ ಸಂಖ್ಯೆಯಲ್ಲಿ ಶೇ 63ರಷ್ಟು ಭಾರೀ ಪಾಲು ಹೊಂದಿದೆ ಎಂಬ ಅಂಶ ವರದಿಯಲ್ಲಿದೆ.

ಜಾತಿ ಸಮೀಕ್ಷೆಯ ವರದಿಯ ಪ್ರಕಾರ, ರಾಜ್ಯದ ಒಟ್ಟು 13,07,25,310 (13.17 ಕೋಟಿ) ಜನ ಸಂಖ್ಯೆ ಪೈಕಿ, ಇತರೆ ಹಿಂದುಳಿದ ವರ್ಗ (ಒಬಿಸಿ) ಮತ್ತು ಅತ್ಯಂತ ಹಿಂದುಳಿದ ವರ್ಗಗಳ (ಇಬಿಸಿ) ವರ್ಗದ ಶೇ.63 ಜನರಿದ್ದಾರೆ. ಇವರಲ್ಲಿ ಒಬಿಸಿ ಪಾಲು ಶೇ 27.12 ಹಾಗೂ ಇಬಿಸಿ ಪಾಲು ಶೇ.36.01ರಷ್ಟಾಗಿದೆ.

ಇನ್ನು ಎಸ್‌ಸಿ ಶೇ 19.65 ಜನರಿದ್ದರೆ, ಶೇ1.68ರಷ್ಟು ಎಸ್‌ಟಿ ಜನರಿದ್ದಾರೆ. ಯಾವುದೇ ಮೀಸಲಾಗಿ ಇಲ್ಲದ (ಮೇಲ್ಜಾತಿ) ಶೇ.15.52ರಷ್ಟು ಜನರಿದ್ದಾರೆ. ಇನ್ನು ಯಾದವರು ಅತಿ ದೊಡ್ಡ ಒಬಿಸಿ ಸಮೂಹವಾಗಿದ್ದು, ಒಬಿಸಿಗಳಲ್ಲಿ ಅವರ ಪಾಲು ಶೇ.14. ಬ್ರಾಹ್ಮಣರ ಸಂಖ್ಯೆ ಶೇ.3.65 ಎಂದು ತಿಳಿದುಬಂದಿದೆ. ಅಲ್ಲದೆ, ರಾಜ್ಯದ ಜನಸಂಖ್ಯೆಯಲ್ಲಿ ಮುಸ್ಲಿಮರ ಪಾಲು ಶೇ.19 ಆಗಿದ್ದರೆ, ಹಿಂದೂಗಳ ಪಾಲು ಶೇ.81 ಎಂಬ ಅಂಶವೂ ಗೊತ್ತಾಗಿದೆ.

ಒಟ್ಟಾರೆ ಈ ಸಮೀಕ್ಷೆಯಲ್ಲಿ ಶೇ.85ರಷ್ಟು ಬಿಹಾರದ ಜನತೆಯು (ಒಬಿಸಿ, ಇಬಿಸಿ, ಎಸ್ಸಿ, ಎಸ್ಟಿ ಸೇರಿ) ದಮನಿತ ವರ್ಗಕ್ಕೆ ಸೇರಿದವರಾಗಿದ್ದಾರೆ ಎಂದು ರುಜುವಾತಾಗಿದೆ.

ಇದೇ ವೇಳೆ ರಾಜ್ಯದಲ್ಲಿ 6,41,31,992 (6.41 ಕೋಟಿ) ಪುರುಷರು, 6,11,38,460 (6.11 ಕೋಟಿ) ಮಹಿಳೆಯರು ಹಾಗೂ 82,836 ಇತರ ಲಿಂಗದ ಜನರಿದ್ದಾರೆ ಪುರುಷ ಮತ್ತು ಸ್ತ್ರೀ ಅನುಪಾತ 1000:953 ಇದೆ ಎಂದೂ ಸಮೀಕ್ಷೆ ಹೇಳಿದೆ.

ಬಿಹಾರದಲ್ಲಿ 2022ರಲ್ಲೇ ಜಾತಿ ಸಮೀಕ್ಷೆಗೆ ನಿತೀಶ್ ಸರ್ಕಾರ ಅನುಮೋದನೆ ನೀಡಿತ್ತು ಅದೇ ವೇಳೆ, ಗಣತಿ ನಡೆಸುವ ಅಧಿಕಾರ ರಾಜ್ಯ ಸರ್ಕಾರಗಳಿಗಿಲ್ಲ. ಕೇಂದ್ರಕ್ಕೆ ಮಾತ್ರವಿದೆ ಎಂದು ಪಟನಾ ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳು ಸಲ್ಲಿಕೆ ಆಗಿದ್ದವು. ಆದರೆ ಕೋರ್ಟುಗಳು ಜಾತಿಗಳ ಸ್ಥಿತಿಗತಿ ಅರಿಯುವಲ್ಲಿ ತಪ್ಪಿಲ್ಲ ಎಂದು ಹೇಳಿ ಸಮೀಕ್ಷೆಗೆ ಹಸಿರು ನಿಶಾನೆ ತೋರಿಸಿದ್ದವು.

**ಆಧಾರ:** ಕನ್ನಡ ಪ್ರಭ, ದಿನಾಂಕ:03.10.2023

## 2. ನವೆಂಬರ್ 7ರಿಂದ ಪಂಚರಾಜ್ಯ ಮಹಾಸಮರ

2024ರ ಲೋಕಸಭಾ ಚುನಾವಣೆಯ ಸೆಮಿಫೈನಲ್ ಎಂದೇ ಬಿಂಬಿತವಾಗಿರುವ 5 ರಾಜ್ಯಗಳ ವಿಧಾನಸಭಾ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ದಿನಾಂಕ ಪ್ರಕಟಿಸಿದೆ. ರಾಜಸ್ಥಾನ, ತೆಲಂಗಾಣ, ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ಮಿಜೋರಾ ರಾಜ್ಯಗಳ ಚುನಾವಣೆ ನಂ.7 ರಿಂದ 30ರವರೆಗೆ ಚುನಾವಣೆ ನಡೆಯಲಿದ್ದು, ಡಿ.3ಕ್ಕೆ ಫಲಿತಾಂಶ ಪ್ರಕಟವಾಗಲಿದೆ.

'ಇಂಡಿಯಾ' ಮೈತ್ರಿಕೂಟ ರಚನೆಯಾದ ಬಳಿಕ ನಡೆಯುತ್ತಿರುವ ದೊಡ್ಡ ಚುನಾವಣೆ ಇದಾಗಿದೆ. ಕೇಂದ್ರದಲ್ಲಿ ಮೂರನೇ ಬಾರಿಗೆ ಅಧಿಕಾರಕ್ಕೇರಲು ಯತ್ನಿಸುತ್ತಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ಇಂಡಿಯಾ ಕೂಟಗಳ ನಡುವಣ ಹಣಾಹಣಿಗೆ ಈ ಚುನಾವಣೆ ವೇದಿಕೆಯಾಗಲಿದ್ದು, ಫಲಿತಾಂಶ ಸಾಕಷ್ಟು ಕುತೂಹಲ ಮೂಡಿಸಿದೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ದಿನಾಂಕ ಪ್ರಕಟಿಸಿದರು. 5 ರಾಜ್ಯಗಳಲ್ಲಿ ಒಟ್ಟು 16ಕೋಟಿ ಮತದಾರರು ಮತ ಚಲಾವಣೆಯ ಹಕ್ಕು ಹೊಂದಿರಲಿದ್ದಾರೆ.

ಹಾಲಿ ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದರೆ ಮಧ್ಯಪ್ರದೇಶದಲ್ಲಿ ಬಿಜೆಪಿ, ತೆಲಂಗಾಣದಲ್ಲಿ ಭಾರತ ರಾಷ್ಟ್ರ ಸಮಿತಿ ಮತ್ತು ಮಿಜೋರಂನಲ್ಲಿ ಎನ್‌ಡಿಎ ಮಿತ್ರಪಕ್ಷವಾದ ಮಿಜೋ ನ್ಯಾಷನಲ್ ಫ್ರಂಟ್ ಅಧಿಕಾರದಲ್ಲಿದೆ

5 ರಾಜ್ಯಗಳಲ್ಲಿ ಒಟ್ಟಾರೆ 8.2ಕೋಟಿ ಪುರುಷ ಮತ್ತು 7.8 ಕೋಟಿ ಮಹಿಳಾ ಮತದಾರರು ಸೇರಿ ಒಟ್ಟು 18 ಕೋಟಿ ಮತದಾನದ ಅವಕಾಶ ಹೊಂದಿದ್ದಾರೆ. ಈ ಪೈಕಿ 60.2 ಲಕ್ಷ ಜನರು ಮೊದಲ ಬಾರಿ ಮತದಾನದ ಹಕ್ಕು ಪಡೆದುಕೊಂಡವರು.

ಚುನಾವಣೆಗಾಗಿ ಒಟ್ಟು 1.77 ಲಕ್ಷ ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು, ಈ ಪೈಕಿ 1.01 ಲಕ್ಷ ಮತಗಟ್ಟೆಗಳು ವೆಬ್‌ಕಾಸ್ಟಿಂಗ್ ಸೌಲಭ್ಯ ಹೊಂದಿರಲಿವೆ. 8000 ಮತಗಟ್ಟೆಗಳನ್ನು ಸಂಪೂರ್ಣವಾಗಿ ಮಹಿಳೆಯರೇ ನಿರ್ವಹಿಸಲಿದ್ದಾರೆ. ಚುನಾವಣೆಯನ್ನು ನ್ಯಾಯಸಮ್ಮತ ಮತ್ತು ಯಾವುದೇ ಆಮಿಷಕ್ಕೆ ಒಳಗಾಗಿ ನಡೆಸದಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ರಾಜೀವ್‌ಕುಮಾರ್ ತಿಳಿಸಿದರು

**ಆಧಾರ:** ಕನ್ನಡ ಪ್ರಭ, ದಿನಾಂಕ: 10.10.2023

## 3. ಮೀಸಲಾತಿ ಹೆಚ್ಚಳಕ್ಕೆ ಸಂಪುಟ ಅಸ್ತು

ರಾಜ್ಯದಲ್ಲಿ ಇತರೆ ಹಿಂದುಳಿದ ಸಮುದಾಯದವರು (ಒಬಿಸಿ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಈಗಿರುವ ಶೇ 50 ರಿಂದ ಶೇ 65ಕ್ಕೆ ಹೆಚ್ಚಿಸುವ ಪ್ರಸ್ತಾವಕ್ಕೆ ಬಿಹಾರ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಇದಕ್ಕೆ ಅಗತ್ಯವಿರುವ ಮಸೂದೆಯನ್ನು ಪ್ರಸಕ್ತ ಅಧಿವೇಶನದಲ್ಲಿಯೇ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ನಿತೀಶ್‌ಕುಮಾರ್ ಹೇಳಿದ್ದಾರೆ. ಸದನದಲ್ಲಿ ಮಂಡನೆಯಾದ, ಬಿಹಾರ ಸರ್ಕಾರದ ಜಾತಿ ಸಮೀಕ್ಷೆಯ ವರದಿ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಿದ ವೇಳೆ ಅವರು ಈ ವಿಷಯ ಪ್ರಕಟಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಟ್ಟು ಮೀಸಲಾತಿ ಪ್ರಮಾಣ ಈಗ ಶೇಕಡ 17ರಷ್ಟಿದೆ. ಇದು ಶೇ 22 ಆಗಲಿದೆ. ಅದೇ ರೀತಿಯಲ್ಲಿ  ಒಬಿಸಿ ಸಮುದಾಯಗಳಿಗೆ ಈಗಿರುವ ಮೀಸಲಾತಿ ಪ್ರಮಾಣ ಶೇ 30 ರಿಂದ ಶೇ 43 ಕ್ಕೆ ಹೆಚ್ಚಲಿದೆ.

ಆರ್ಥಿಕ ದುರ್ಬಲ ವರ್ಗದವರಿಗೆ (ಇಡಬ್ಲ್ಯೂಎಸ್) ಶೇ 10ರಷ್ಟು ಮೀಸಲಾತಿ ಇದೆ. ಇದೂ ಸೇರಿದಂತೆ ರಾಜ್ಯದಲ್ಲಿನ ಒಟ್ಟಾರೆ ಮೀಸಲಾತಿ ಪ್ರಮಾಣ ಶೇ.75 ರಷ್ಟು ಆಗಲಿದೆ.

ಬಿಹಾರದ ಜಾತಿ ಗಣತಿಯ ವರದಿ ಪ್ರಕಾರ, ಅತ್ಯಂತ ಹಿಂದುಳಿದ ವರ್ಗಗಳು ಸೇರಿದಂತೆ ಒಬಿಸಿ ಸಮುದಾಯದ ಪಾಲು ಒಟ್ಟು ಜನಸಂಖ್ಯೆಯಲ್ಲಿ ಶೇ 63 ರಷ್ಟು ಇದೆ. ಎಸ್‌ಸಿ, ಎಸ್‌ಟಿ ಸಮುದಾಯಗಳ ಜನಸಂಖ್ಯೆಯು ಒಟ್ಟು ಜನ ಸಂಖ್ಯೆಯು ಒಟ್ಟು ಜನ ಸಂಖ್ಯೆಯಲ್ಲಿ ಶೇ 21ಕ್ಕಿಂತ ತುಸು ಹೆಚ್ಚು ಇದೆ.

ನಿತೀಶ್‌ಕುಮಾರ್ ಅವರು ಸದನದಲ್ಲಿ ನೀಡಿರುವ ಹೇಳಿಕೆಯು ರಾಜ್ಯ ರಾಜಕಾರಣದ ಮೇಲೆ ಗಮನಾರ್ಹ ಪರಿಣಾಮ ಬೀರುವ ಸಾಧ್ಯತೆ ಇದೆ ಅಲ್ಲದೆ, ಬಿಹಾರ ಸರ್ಕಾರದ ಈ ನಡೆಯು ದೇಶದ ಇತರ ಕಡೆಗಳಲ್ಲಿ ಮೀಸಲಾತಿ ಪ್ರಮಾಣದ ಹೆಚ್ಚಳಕ್ಕೆ ಬೇಡಿಕೆಯು ಬಲಗೊಳ್ಳಲು ಕಾರಣವಾಗಬಹುದು ಎನ್ನಲಾಗಿದೆ.

ಕೆಲವು ನಿರ್ದಿಷ್ಟ ಸಮುದಾಯಗಳ ಜನಸಂಖ್ಯೆಯನ್ನು ಇತರ ಸಮುದಾಯಗಳ ಜನರಿಗೆ ತೊಂದರೆಯಾಗುವ ರೀತಿಯಲ್ಲಿ ಹೆಚ್ಚಿಸಿ ತೋರಿಸಲಾಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಇವು ಬೋಗಸ್ ಆರೋಪಗಳು ಎಂದು ನಿತೀಶ್ ಕುಮಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು. ಜಾತಿ ಗಣತಿಯ ವರದಿಯು ಯಾದವ ಹಾಗೂ ಮುಸ್ಲಿಂ ಸಮುದಾಯದ ಜನಸಂಖ್ಯೆಯನ್ನು ಹೆಚ್ಚಾಗಿ ತೋರಿಸಿದೆ ಎಂದು ಶಾ ಆರೋಪಿಸಿದ್ದರು.

ನನ್ನದೇ ಜಾತಿಯ (ಕುರ್ಮಿ) ಪ್ರಮಾಣ ಕಡಿಮೆ ಇದೆ ಎಂಬುದು ಸಮೀಕ್ಷೆಯಿಂದ ಗೊತ್ತಾಗಿದೆ. ಎಂದು ನಿತೀಶ್ ಹೇಳಿದ್ದಾರೆ. ಜಾತಿ ಗಣತಿಯ ವರದಿಯ ಪ್ರತಿಯೊಂದನ್ನು ಕೇಂದ್ರ ಸರ್ಕಾರಕ್ಕೆ ರವಾನಿಸಿ, ಸಮಾಜದ ದುರ್ಬಲ ವರ್ಗಗಳನ್ನು ಗುರಿಯಾಗಿಸಿ ಕೈಗೊಳ್ಳುವ ವರ್ಗಗಳನ್ನು ಗುರಿಯಾಗಿಸಿ ಕೈಗೊಳ್ಳುವ ಕ್ರಮಗಳಿಗೆ ಹೆಚ್ಚಿನ ನೆರವು ಒದಗಿಸಬೇಕು ಎಂದು ಕೇಳಿಕೊಳ್ಳುವುದಾಗಿ ಅವರು ಹೇಳಿದ್ದಾರೆ.

ಜಾತಿ ಗಣತಿಯನ್ನು ರಾಷ್ಟ್ರದ ಎಲ್ಲೆಡೆ ನಡೆಸಬೇಕು ಎಂದು ಹಿಂದೆ ಸಲ್ಲಿಸಿದ್ದ ಮನವಿಯನ್ನು ಪುನರ್ ಪರಿಶೀಲಿಸುವುದಕ್ಕೆ ಬಿಹಾರದ ಸಮೀಕ್ಷೆಯು ಕಾರಣವಾಗಬಹುದು ಎಂದು ನಿತೀಶ್ ಹೇಳಿದ್ದಾರೆ. ರಾಷ್ಟ್ರವ್ಯಾಪಿ ಜಾತಿ ಗಣತಿ ನಡೆಸುವಂತೆ ನಿತೀಶ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಎರಡು ವರ್ಷಗಳ ಹಿಂದೆ ಆಗ್ರಹಿಸಿದ್ದರು.

ಬಿಹಾರದ ಶೇಕಡ 34.13ರಷ್ಟು ಕುಟುಂಬಗಳು ಬಡತನದ ಬೇಗೆಯಲ್ಲಿವೆ. ಈ ಕುಟುಂಬಗಳ ತಿಂಗಳ ಆದಾಯ ರೂ.6,000 ಅಥವಾ ಅದಕ್ಕಿಂತ ಕಡಿಮೆ.

ರಾಜ್ಯದ ಜಾತಿ ಗಣತಿಯ ವಿಸ್ತೃತ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿದ್ದು, ಆ ವರದಿಯಲ್ಲಿ ಈ ಅಂಶ ಇದೆ.

ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಲ್ಲಿ ಇಷ್ಟು ಆದಾಯ ಹೊಂದಿರುವ ಕುಟುಂಬಗಳ ಪ್ರಮಾಣವು ಶೇ 43 ರಷ್ಟು ಇದೆ. ರಾಜ್ಯದ 2.97 ಕೋಟಿ ಕುಟುಂಬಗಳ ಪೈಕಿ 94 ಲಕ್ಷಕ್ಕಿಂತ ಹೆಚ್ಚಿನ ಕುಟುಂಬಗಳ ತಿಂಗಳ ಆದಾಯವು ರೂ.6,000ಕ್ಕಿಂತ ಕಡಿಮೆ.

ಬಿಹಾರದ ಸಂಸದೀಯ ವ್ಯವಹಾರಗಳ ಸಚಿವ ವಿಜಯ್‌ಕುಮಾರ್ ಚೌಧರಿ ಅವರು ವರದಿಯನ್ನು ಮಂಡಿಸಿದರು. ಈಗ ಬಿಹಾರದ ಸಾಕ್ಷರತಾ ಪ್ರಮಾಣವು ಶೇ 79.8ಕ್ಕೆ ಏರಿಕೆ ಆಗಿದೆ. ಇದು 2011ರಲ್ಲಿ ಶೇ 69.8ರಷ್ಟು ಇತ್ತು.

ಬಿಹಾರದ 47ಲಕ್ಷ ಮಂದಿ ಬೇರೆ ರಾಜ್ಯಗಳಲ್ಲಿ ಜೀವನೋಪಾಯ ಕಂಡುಕೊಂಡಿದ್ದಾರೆ ಎಂದು ಸಮೀಕ್ಷೆ ಹೇಳಿದೆ.

ಮುಂದುವರಿದ ಜಾತಿಗಳ ಸೇರಿದ ಶೇ 25ಕ್ಕಿಂತ ಹೆಚ್ಚು ಮಂದಿ ವರಮಾನವು ತಿಂಗಳಿಗೆ ರೂ.6,000 ಅಥವಾ ಅದಕ್ಕಿಂತ ಕಡಿಮೆ ಇದೆ. ಸಂಖ್ಯೆಯ ದೃಷ್ಟಿಯಿಂದ ಬಹಳ ಕಡಿಮೆ ಇರುವ ಕಾಯಸ್ಥರು ಬಿಹಾರದಲ್ಲಿ ಆರ್ಥಿಕವಾಗಿ ಹೆಚ್ಚು ಅನುಕೂಲ ಹೊಂದಿದ್ದಾರೆ. ಈ ಸಮುದಾಯದ ಶೇ 13.83 ರಷ್ಟು ಕುಟುಂಬಗಳು ಮಾತ್ರ ತಿಂಗಳಿಗೆ ರೂ.6,000 ಅಥವಾ ಅದಕ್ಕಿಂತ ಕಡಿಮೆ ವರಮಾನ ಹೊಂದಿದೆ. ಕುರ್ಮಿ ಸಮುದಾಯದ ಶೇಕಡ 30ರಷ್ಟು ಕುಟುಂಬಗಳ ವರಮಾನವು ಇಷ್ಟೇ ಇದೆ.

**ಆಧಾರ:** ಪ್ರಜಾವಾಣಿ, ದಿನಾಂಕ: 08.11.2023

## 4. TN Assembly adopts 10 bills

The Tamil Nadu Assembly on Saturday re adopted the 10 bills for which Governor RN Ravi has withheld his assent. The bills were re adopted without any change. Principal opposition party AIADMK and its erst while ally BJP staged a walkout for different reasons before the House re adopted the bills.

“The governor has kept the bills pending for long, on November 13, without giving any reason, returned the bills mentioning that he has with hold assent. This Assembly feels that this is not acceptable, the CM said before moving the resolution for reconsideration of the bills by the House.

This House takes note that uder proviso to Article 200 of the Constitution, if these bills are passed to the governor, he shall not with old assent there form, he said. Leader of the Opposition, Edappadi K Palaniswami, said since the governor has said he has withheld his assent, it would mean that the bills are still under his consideration. The government, therefore, should examine if there are any legal

issues in re-adopting the bills. He also said the state government could have waited for the verdict of the Supreme Court in the petition filed regarding delay by the governor in clearing bills. Palaniswami said if the judgment, there would not be any need for a special session of the Assembly.

Replying to EPS, Leader of the House. Duraimurugan, said only after the state moved the SC, did the governor convey that he had withheld assent to the bills. He would be informing this to the SC when the case is taken up for hearing in the SC, the governor should face the court only after giving assent to the readopted bills. Finance Minister Thangam Thennarasu said, withholding assent amounts to rejection. During the previous AIADMK regime, the president returned the NEE T Bill saying withheld and returned. The Union government counsels also later clarified that with held would mean that the bill had been rejected.

Reacting to the developments senior advocate, K Vijayan said. As per the Constitution, the governor doesn't have any independent powers. He can only act on the advice of the council of ministers.

Kerala files another affidavit against Governor over bills

The Kerala government has filed an additional affidavit to strengthen its case in the Supreme Court against Governor Arif Mohammed Khan for delaying decisions on bills passed by the Assembly.

On Monday, the Supreme Court will consider the State governments writ petition and a special leave petition seeking to issue directives to Article 200 of the Constitution, which has charted out the course of action for a Governor on Bills passed by an Assembly.

**Courtesty:** Indian Express, Dated: 19.11.2023

## 5. Additional affidavits

The additional affidavit includes nearly 15 correspondence nearly between the Chief Minister and the Governor to counter the argument of the latter that the Chief Minister had shirked his constitutional duty to brief the head of the State.

Mr.Khan had said that the Chief Minister had not been visiting the Raj Bhavan to brief him and was instead assigning the task to Ministers and officials. Seven Bills have been pending with the Governor.

The Governor had said that he was not a rubber stamp and the administration should not expect him to sign Bills without applying his mind.

He had also alleged that the government had not answered some of his queries on the Bills.

On its part, the government has included in the affidavit one of its replies to the Governor which stated that he had no authority to seek explanations from officials on the Bills passed by the legislature.

The Governor has refused to clear some Bills for which he had given assent when introduced as ordinances.

**Courtesty:** The Hindu, Dated: 24.11.2023

# ಭಾಗ–8

# ಶ್ರದ್ಧಾಂಜಲಿ

# ಶ್ರದ್ಧಾಂಜಲಿ

## 1. ಡಿ.ಬಿ. ಚಂದ್ರೇಗೌಡರು, ಮಾಜಿ ಸಚಿವರು



ಅತ್ಯುತ್ತಮ ಸಂಸದೀಯ ಪಟು, ವಿಧಾನಸಭೆ ಮಾಜಿ ಅಧ್ಯಕ್ಷ, ನಾಲ್ಕೂ ಸದನಗಳಿಗೂ ಪದಾರ್ಪಣೆ ಮಾಡಿದ್ದ ರಾಜ್ಯದ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದ ಡಿ.ಬಿ.ಚಂದ್ರೇಗೌಡ (87) ಮೂಡಿಗೆರೆ ತಾಲೂಕು ದಾರದಹಳ್ಳಿಯ ತೋಟದ ಮನೆಯಲ್ಲಿ ನಿಧನರಾದರು.

ಚಂದ್ರೇಗೌಡರ ನಿಧನದಿಂದ ನಾಡು ಹಿರಿಯ ಮುತ್ಸದ್ಧಿಯೊಬ್ಬರನ್ನು ಕಳೆದುಕೊಂಡಿದೆ. ದಿನಾಂಕ: 26.08.1936 ರಂದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿ ಗ್ರಾಮದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾದ ಶ್ರೀಯುತರು ಸಂಗೀತ, ಸಾಹಿತ್ಯದಲ್ಲಿ ಅಪಾರ ಆಸಕ್ತಿ ಹೊಂದಿದ್ದು ಅವರು "ನನ್ನ ಗೋಪಾಲ" ಚಲನಚಿತ್ರದಲ್ಲಿಯೂ ಅಭಿನಯಿಸಿದ್ದರು.

ಪ್ರಜಾಪ್ರಭುತ್ವದ ಗಟ್ಟಿ ಧ್ವನಿಯ ಪ್ರತಿಪಾದಕರಾಗಿದ್ದ ಶ್ರೀಯುತರು ರೈತರ ಮೇಲೆ ನರಗುಂದದಲ್ಲಿ ನಡೆದ ಗೋಲಿಬಾರ್ ಪ್ರಕರಣವನ್ನು ವಿರೋಧಿಸಿ ರೈತರ ಜಾಥವನ್ನು ಬೆಂಗಳೂರಿನವರೆಗೆ ಏರ್ಪಡಿಸಿದ್ದ ಅವರು 1971ರಲ್ಲಿ 5ನೇ, 1976ರಲ್ಲಿ 6ನೇ ಹಾಗೂ 2009ರಲ್ಲಿ 15ನೇ ಲೋಕಸಭೆಗೆ ಆಯ್ಕೆಯಾಗಿದ್ದ ಶ್ರೀಯುತರು 1986ರಿಂದ 1989ರವರೆಗೆ ರಾಜ್ಯ ಸಭಾ ಸದಸ್ಯರಾಗಿದ್ದರು.

1978 ರಿಂದ 1983 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀಯುತರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ್ದರು. 1983ರಲ್ಲಿ ಪ್ರಥಮ ಬಾರಿಗೆ 7ನೇ ವಿಧಾನಸಭೆಗೆ ತೀರ್ಥಹಳ್ಳಿ ಕ್ಷೇತ್ರದಿಂದ ಚುನಾಯಿತರಾಗಿದ್ದ ಶ್ರೀಯುತರು ವಿಧಾನಸಭೆಯ ಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ನಂತರ 1989ರಲ್ಲಿ 09ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಚುನಾಯಿತರಾಗಿದ್ದ ಅವರು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿಯೂ ಕರ್ತವ್ಯ ನಿರ್ವಹಿಸಿದ್ದರು. 1999ರಲ್ಲಿ 11ನೇ ವಿಧಾನಸಭೆಗೆ ಶೃಂಗೇರಿ ಕ್ಷೇತ್ರದಿಂದ ಚುನಾಯಿತರಾಗಿದ್ದ ಶ್ರೀಯುತರು ನೀರಾವರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಐದು ದಶಕಗಳ ಕಾಲ ದೇಶ ಮತ್ತು ರಾಜ್ಯ ರಾಜಕಾರಣದಲ್ಲಿ "ಡಿಬಿಸಿ' ಎಂದೇ ಖ್ಯಾತರಾಗಿ ಸದನದ ಕಲಾಪಗಳ ಬಗ್ಗೆ ಆಳವಾದ ಜ್ಞಾನ ಹೊಂದಿದ್ದ ಶ್ರೀಯುತರು ನಾಲ್ಕೂ ಸದನಗಳನ್ನು ಪ್ರವೇಶಿಸಿದ ಕನ್ನಡಿಗ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು.

## 2. ಪಿ.ಬಿ.ಆಚಾರ್ಯ, ಮಾಜಿ ರಾಜ್ಯಪಾಲರು



ನಾಗಲ್ಯಾಂಡ್ ಮಾಜಿ ರಾಜ್ಯಪಾಲ ಪದ್ಮನಾಭ ಆಚಾರ್ಯ (92) ಮುಂಬೈನ ನಿವಾಸದಲ್ಲಿ ನಿಧನರಾದರು.

ದಿನಾಂಕ: 08.08.1931 ರಂದು ಉಡುಪಿ ತೆಂಕಪೇಟೆಯ ಆಚಾರ್ಯ ಮಠದಲ್ಲಿ ಹುಟ್ಟಿ ಬೆಳೆದ ಅವರು ಕಾನೂನು ಪದವೀಧರರಾಗಿದ್ದರು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಅಧ್ಯಕ್ಷರಾಗಿ ಹಾಗೂ ಮುಂಬಯಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಶೈಕ್ಷಣಿಕ ವಿಚಾರದಲ್ಲಿ ಆಳವಾದ ಜ್ಞಾನ ಹೊಂದಿದ್ದ ಅವರು ಈಶಾನ್ಯ ರಾಜ್ಯಗಳ ಬುಡಕಟ್ಟು, ಗುಡ್ಡಗಾಡು ಜನಾಂಗದ ಅಭಿವೃದ್ಧಿ ಹಾಗೂ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿದ್ದರು. ನಾಗಾಲ್ಯಾಂಡ್ ರಾಜ್ಯಪಾಲರಾಗಿ ನೇಮಕಗೊಂಡಿದ್ದ ಶ್ರೀಯುತರು ತ್ರಿಪುರಾ, ಅಸ್ಸಾಂ, ಅರುಣಾಚಲ ಪ್ರದೇಶ ಹಾಗೂ ಮಣಿಪುರ ರಾಜ್ಯಗಳಲ್ಲಿ ಹಂಗಾಮಿ ರಾಜ್ಯಪಾಲರಾಗಿಯೂ ಸಹ ಸೇವೆ ಸಲ್ಲಿಸಿದ್ದರು.

## 3. ಸಿ.ವೆಂಕಟೇಶಪ್ಪ, ಮಾಜಿ ಶಾಸಕರು



ಸಿ.ವೆಂಕಟೇಶಪ್ಪ, ಮಾಜಿ ಶಾಸಕರು (75) ಹೃದಯಾಘಾತದಿಂದ ದಿನಾಂಕ:10.11.2023ರಂದು ಅವರ ಸ್ವಗ್ರಾಮ ಭುವನಹಳ್ಳಿಯಲ್ಲಿ ನಿಧನರಾದರು. ಅವರು ದಿನಾಂಕ:09.09.1950 ರಂದು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕು ಭುವನಹಳ್ಳಿ ಜನಿಸಿದ್ದರು.

ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಬಂಗಾರಪೇಟೆ ತಾಲ್ಲುಕಿನ ಪಿ.ಎಲ್.ಡಿ. ಬ್ಯಾಂಕಿನ ನಿರ್ದೇಶಕರಾಗಿದ್ದ ಶ್ರೀಯುತರು ಬೇತಮಂಗಲ ಕ್ಷೇತ್ರದಿಂದ 1978ರಲ್ಲಿ ಪ್ರಥಮ ಬಾರಿಗೆ 6ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು 1983ರಲ್ಲಿ 7ನೇ ವಿಧಾನಸಭೆಗೆ ಮತ್ತು 1999ರಲ್ಲಿ 11ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನಾರಾಯ್ಕೆಗೊಂಡಿದ್ದರು.

# ಭಾಗ–9

# ಪ್ರಮುಖ ಲೇಖನಗಳು

# ಪ್ರಮುಖ ಲೇಖನಗಳು

## 1.ಚುನಾವಣಾ ಬಾಂಡ್ ವ್ಯವಸ್ಥೆ ಸಲ್ಲ ಇದು ಪ್ರಜಾತಂತ್ರಕ್ಕೆ ಅಪಾಯಕಾರಿ

ಚುನಾವಣಾ ಬಾಂಡ್ ಯೋಜನೆಗೆ ಸಂಬಂಧಿಸಿದ ಅರ್ಜಿಗಳ ಬಗ್ಗೆ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ವಿಚಾರಣೆ ನಡೆಸಲಿದೆ. ರಾಜಕೀಯ ಪಕ್ಷಗಳಿಗೆ ಅನಾಮಧೇಯವಾಗಿ, ಗೋಪ್ಯವಾಗಿ ದೇಣಿಗೆ ನೀಡುವ ಈ ಅಪಾಯಕಾರಿ ವ್ಯವಸ್ಥೆಯ ವಿಚಾರದಲ್ಲಿ ತ್ವರಿತವಾಗಿ ತೀರ್ಮಾನವೊಂದು ಆಗಬಹುದು, ಚುನಾವಣಾ ಬಾಂಡ್ ವ್ಯವಸ್ಥೆಯ ಕೊನೆಗೊಳ್ಳಬಹುದು ಎಂಬ ಆಶಾಭಾವನೆಯು ಇದರಿಂದಾಗಿ ಮೂಡಿದೆ. ಈ ವ್ಯವಸ್ಥೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳು ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಇತ್ಯರ್ಥವಾಗದೇ ಉಳಿದಿವೆ. ಈಗ ಐವರು ನ್ಯಾಯಮೂರ್ತಿಗಳು ಇರುವ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಅಕ್ಟೋಬರ್ 31 ರಿಂದ ಈ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳುವ ನಿರೀಕ್ಷೆ ಇದೆ. ಪ್ರಾಥಮಿಕ ಹಂತದ ವಾದಗಳನ್ನು ಮಂಡಿಸಿ ಆಗಿರುವ ಕಾರಣ, ಅಂತಿಮ ವಿಚಾರಣೆ ನಡೆಯಲಿದೆ ಎಂದು ಕೋರ್ಟ್ ಹೇಳಿದೆ. 'ನಾವು ಪ್ರಕರಣದ ಬಗ್ಗೆ ತೀರ್ಮಾನ ಕೊಡಲು ಇಲ್ಲಿದ್ದೇವೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಅವರು ಕಳೆದ ವಾರ ಹೇಳಿದ್ದಾರೆ. ಅಂದರೆ, ಚುನಾವಣಾ ಬಾಂಡ್‌ಗಳ ವಿಚಾರವಾಗಿ ಅಂತಿಮ ತೀರ್ಮಾನವೊಂದು ಪ್ರಕಟವಾಗಬಹುದು. ಐದು ರಾಜ್ಯಗಳ ವಿಧಾನಸಭೆಗಳಿಗೆ ಮುಂದಿನ ತಿಂಗಳೂ ಚುನಾವಣಾ ಬಾಂಡ್‌ಗಳ ಮಾರಾಟವು ಈ ತಿಂಗಳು ಪೂರ್ಣಗೊಂಡಿದೆ. ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನವಣೆಗೂ ಮೊದಲು ತೀರ್ಮಾನ ಆಗಬೇಕು ಎಂದು ಚುನಾವಣಾ ಬಾಂಡ್ ಯೋಜನೆ ಕುರಿತು ಅರ್ಜಿ ಸಲ್ಲಿಸಿರುವವರು ಮನವಿ ಮಾಡಿದ್ದಾರೆ. ಪ್ರಕರಣದ ಮಹತ್ವವನ್ನು ಗುರುತಿಸಿ, ವಿಚಾರಣೆಯಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಲು ನಿರ್ಧರಿಸಿರುವ ಸಿಜೆಐ ಕ್ರಮವು ಸ್ವಾಗತಾರ್ಹ.

ಚುನಾವಣಾ ಬಾಂಡ್ ಯೋಜನೆಯಲ್ಲಿ ಹಲವು ಸಮಸ್ಯೆಗಳಿವೆ. ಈ ಯೋಜನೆಗೆ ಸಂಬಂಧಿಸಿದ ಎರಡು ಪ್ರಮುಖ ವಿಚಾರಗಳ ಬಗ್ಗೆ ಕೋರ್ಟ್ ಗಮನ ನೀಡಬೇಕು ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ. ಈ ಎರಡು ವಿಚಾರಗಳಲ್ಲಿ ಒಂದನೆಯದು, ಅನಾಮಧೇಯವಾಗಿ ದೇಣಿಗೆ ನೀಡುವುದಕ್ಕೆ ಇರುವ ಅವಕಾಶ; ಎರಡನೇಯದು, ರಾಜಕೀಯ ಪಕ್ಷಗಳಿಗೆ ಬರುವ ದೇಣಿಗೆಯ ಬಗ್ಗೆ ಮಾಹಿತಿ ಪಡೆಯಲು ಪ್ರಜೆಗಳು ಹೊಂದಿರುವ ಹಕ್ಕಿನ ಉಲ್ಲಂಘನೆಗೆ ಸಂಬಂಧಿಸಿದೆ. ಈ ಎರಡು ವಿಷಯಗಳು ಸಂವಿಧಾನದ 14, 19 ಮತ್ತು 21ನೇ ವಿಧಿಗಳ ಉಲ್ಲಂಘನೆಗೆ ಸಂಬಂಧಿಸಿದೆ. ಯೋಜನೆಯು ಆರಂಭದಿಂದಲೂ ಇದರ ಬಗ್ಗೆ ಹಲವು ಪ್ರಶ್ನೆಗಳು ಇವೆ. ಈ ಯೋಜನೆಯು ರಾಜಕೀಯ ಪಕ್ಷಗಳಿಗೆ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ದೇಣಿಗೆ ಲಭ್ಯವಾಗುವಂತೆ ಮಾಡುತ್ತದೆ. ಆದರೆ, ಇಲ್ಲಿ ದೇಣಿಗೆ ನೀಡುತ್ತಿರುವ ವ್ಯಕ್ತಿ ಯಾರೆಂಬುದು ಗೊತ್ತಾಗುವುದೇ ಇಲ್ಲ. ಅನಾಮಧೇಯರಾಗಿ ಇದ್ದುಕೊಂಡು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುತ್ತಿರುವವರು ಯಾರು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಇರಬೇಕು. ಏಕೆಂದರೆ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಮೂಲಕ, ಆ ಪಕ್ಷಗಳ ನೀತಿ–ನಿಲುವುಗಳ ಮೇಲೆ ಪ್ರಭಾವ ಬೀರುವ ಅವಕಾಶವೂ ಇರುತ್ತದೆ. ಚುನಾವಣಾ ಬಾಂಡ್‌ಗಳ ಮೂಲಕ ನೀಡಲಾಗಿರುವ ದೇಣಿಗೆಗಳಲ್ಲಿ ಶೇಕಡ 95 ರಷ್ಟಕ್ಕಿಂತ ಹೆಚ್ಚಿನವು ರೂ. 1 ಕೋಟಿ ಹಾಗೂ ಅದಕ್ಕೂ ಹೆಚ್ಚಿನ ಮೊತ್ತದ್ದಾಗಿವೆ. ಅಂದರೆ ಈ ಮೊತ್ತವನ್ನು ಪಕ್ಷಗಳಿಗೆ ದೇಣಿಗೆಯಾಗಿ ನೀಡಿದ್ದು ಕಾರ್ಪೊರೇಟ್ ಸಂಸ್ಥೆಗಳಾಗಿರಬಹುದು ಅಥವಾ ಶ್ರೀಮಂತ ವ್ಯಕ್ತಿಗಳಾಗಿರಬಹುದು. ಬಾಂಡ್‌ಗಳು ಹಣದ ಅಕ್ರಮ ವರ್ಗಾವಣೆಗೆ ನೆರವಾಬಹುದು

ಎಂಬ ಕಳವಳವೂ ವ್ಯಕ್ತವಾಗಿದೆ. ಅದರೆ ಈ ಕಳವಳಕ್ಕೆ ಅಧಾರವಿಲ್ಲ ಎಂದ ಸರ್ಕಾರ ಹೇಳಿದೆ. ಹಣದ ಅಕ್ರಮ ವರ್ಗಾವಣೆಯನ್ನು ತಡೆಯುವುದೇ ಈ ಯೊಜನೆಯ ಉದ್ದೇಶ ಎಂದು ಅದು ಹೇಳಿಕೊಂಡಿದೆ.

ಬಾಂಡ್ ಮೂಲಕ ಆಗಿರುವ ದೇಣಿಗೆಗಳಲ್ಲಿ ಅತಿಹೆಚ್ಚಿನ ಪಾಲು ಹೋಗಿರುವುದು ಬಿಜೆಪಿಗೆ. ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯ ವಿಚಾರದಲ್ಲಿ ಆಡಳಿತಾರೂಢರಿಗೆ ಹೆಚ್ಚಿನ ಅನುಕೂಲಗಳು ಇರುತ್ತವೆ ಎಂಬುದು ನಿಜ.  ಆದರೆ ಆ ಅನುಕೂಲವನ್ನು ಸಾಂಸ್ಥಿಕವಾಗಿಸಬಾರದು. ಈ ಯೋಜನೆಯಲ್ಲಿ ದೇಣಿಗೆಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೂಲಕ ನೀಡಲಾಗುವ ಕಾರಣ, ದೇಣಿಗೆ ನೀಡಿದವರ ವಿವರಗಳನ್ನು ಪಡೆಯುವ ಅವಕಾಶ ಸರ್ಕಾರಕ್ಕೆ ಇರುತ್ತದೆ. ಇದನ್ನು ಬಳಸಿ ಸರ್ಕಾರವು ವಿರೋಧ ಪಕ್ಷಗಳಿಗೆ ದೇಣಿಗೆ ಸಿಗದಂತೆ ಮಾಡಬಹುದು. ಈ ಎಲ್ಲ ಕಾರಣಗಳಿಂದಾಗಿ ಚುನಾವಣಾ ಬಾಂಡ್ ವ್ಯವಸ್ಥೆಯು ರಾಜಕೀಯ ಪಕ್ಷಗಳ ನಡುವೆ ಅಸಮತೋಲನ ಸೃಷ್ಟಿಸುತ್ತದೆ. ಅಷ್ಟೇ ಅಲ್ಲ, ಇದು ನಮ್ಮ ಪ್ರಜಾತಂತ್ರ ವ್ಯವಸ್ಥೆಗೆ ಅಪಾಯಕಾರಿಯೂ ಹೌದು.

**ಆಧಾರ**: ಪ್ರಜಾವಾಣಿ, ದಿನಾಂಕ: 19.10.2023

## 2. 370ನೇ ವಿಧಿಯ ರದ್ದತಿ ಸಿಂಧುವಾದದ್ದು ಹೇಗೆ?

ಕೇಂದ್ರ ಸರಕಾರವು 2019ರಲ್ಲಿ ರದ್ದು ಮಾಡಿದ್ದ 370ನೇ ವಿಧಿಯ ಸಾಂವಿಧಾನಿಕ ಮಾನ್ಯತೆ ಕುರಿತು ಸರ್ವೋಚ್ಚ  ನ್ಯಾಯಾಲಯದಲ್ಲಿ ಹೂಡಿದ್ದ ದಾವೆಗಳಿಗೆ ಸಂಬಂಧಿಸದಂತೆ ಇಂದು ನ್ಯಾಯಾಲಯವು ಅಂತಿಮ ತೀರ್ಪು ಪ್ರಕಟಿಸಿದೆ. 370ನೇ ವಿಧಿಯ ರದ್ದತಿಯ ಸಾಂವಿಧಾನಿಕವಾಗಿ ಸಿಂಧು ಆಗಿದ್ದು, ಅದನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದಿದೆ ನ್ಯಾಯಾಲಯ. ಈ ತೀರ್ಪು ಸಂಸತ್ತಿನ ಘನತೆ ಮತ್ತು ಮಿತಿ ಎರಡನ್ನೂ ಸಾದರಪಡಿಸಿದೆ.

ತೀರ್ಪಿನಲ್ಲಿ, ರಾಷ್ಟ್ರಪತಿಗಳ ಆದೇಶವು ನ್ಯಾಯಾಲಯದ ವಿಮರ್ಶೆಯ ವ್ಯಾಪ್ತಿಗೆ ಬರುತ್ತದೆ ಎನ್ನುವ ಮುಖಾಂತರ, ಬಹುಮತದ ಸರಕಾರ ಎನ್ನುವ ಕಾರಣಕ್ಕಾಗಿ ಸಂವಿಧಾನವನ್ನು ಮೀರಿ ಅಧಿಕಾರ ಚಲಾಯಿಸುವಂತಿಲ್ಲ ಎಂಬ ಮಿತಿಯನ್ನು ನೆನಪು ಮಾಡಿದೆ. ಜೊತೆಗೆ, ರದ್ಧತಿಯು ಸಿಂಧು ಎನ್ನುವ ಮುಖೇನ, ಕೇಂದ್ರ ಸರಕಾರವು ಸಾಂವಿಧಾನಕ ಮಾದರಿಯಲ್ಲೇ 370ನೇ ವಿಧಿಯನ್ನು ಅಂತ್ಯಗೊಳಿಸಿರುವುದ್ನು ದೃಢಪಡಿಸುತ್ತದೆ. ಸರ್ವೋಚ್ಚ ನ್ಯಾಯಾಲಯ ಈ ಎರಡೂ ಪ್ರಕರಣಗಳಲ್ಲಿ 370ನೇ ವಿಧಿಯ ಮೂರನೇ ಉಪವಿಧಿಯ ಉಲ್ಲೇಖ ಮಾಡಿದೆ.

ಫೆಬ್ರವರಿ 21, 1948ರಲ್ಲಿ ಸಂವಿಧಾನದ ಕರಡು ಪ್ರತಿಯ ರಚನಾ ಸಂದರ್ಭದಲ್ಲಿ ನೆಹರುರವರು 370ನೇ ವಿಧಿಯನ್ನು ಸಂವಿಧಾನದ ಭಾಗವಾಗಿ ಮಾಡಬೇಕೆಂದು ಒತ್ತಾಯಿಸಿದಾಗ, ಬಾಬು ರಾಜೇಂದ್ರ ಪ್ರಸಾದರ ಸಮ್ಮುಖದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದ ಒಟ್ಟು ಆಶಯವನ್ನು, ಬಹಳ ಮುಖ್ಯವಾಗಿ ಸಮಾನತೆಯ ತತ್ವವನ್ನು ಮೀರಿ ನಿಲ್ಲುವ ಆ ವಿಧಿಯನ್ನು ಸಂವಿಧಾನದ ಭಾಗವನ್ನಾಗಿ ಮಾಡುವುದಿಲ್ಲ ಎಂದು ತಿರಸ್ಕಾರ ಮಾಡುತ್ತಾರೆ. ಆ ಸಮಯದಲ್ಲಿ ಬಹುಮತವಿರುವವರು, ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಂದ 370ನೇ ವಿಧಿಯನ್ನು ಸಂವಿಧಾನದ ಭಾಗವನ್ನಾಗಿ ಮಾಡಿಸುತ್ತಾರೆ.

ಅದಾಗ್ಯೂ, ಕಟಿಬದ್ಧ ರಾಷ್ಟ್ರಪ್ರೇಮಿಯಾದ ಅಂಬೇಡ್ಕರ್‌ರರು 370ನೇ ವಿಧಿಗೆ ಮೂರನೇ ಉಪವಿಧಿಯನ್ನು ಜೋಡಿಸಿ ಸಂವಿಧಾನದಲ್ಲಿ ಏನೇ ಇದ್ದಾಗಿಯೂ ರಾಷ್ಟ್ರಪತಿಗಳ ಆದೇಶದೊಂದಿಗೆ 370ನೇ

ವಿಧಿಯನ್ನು ರದ್ದು ಮಾಡಬಹುದೆಂಬ ನಿಯಮವನ್ನು ಸೇರ್ಪಡೆ ಮಾಡಿದ್ದರ ಕಾರಣಕ್ಕಾಗಿ, ಅತ್ಯಂತ ಸರಳವಾಗಿ 370ನೇ ವಿಧಿಯನ್ನು ರದ್ದುಪಡಿಸಲಾಗಿದೆ.

ಸಂವಿಧಾನಕ್ಕೆ ಮರುವ್ಯಾಖ್ಯಾನ ನೀಡಲು ಅವಕಾಶವಿರುವ ಏಕೈಕ ಸಂಸ್ಥೆಯಾದ ಸರ್ವೋಚ್ಚ ನ್ಯಾಯಾಲಯವೇ ರದ್ದತಿಯ ಮಾನ್ಯತೆಯನ್ನು ಸಿಂಧು ಮಾಡಿರುವುದರಿಂದ, 370ನೇ ವಿಧಿಯನ್ನು ಮತ್ತೆ ಸಂವಿಧಾನ ಮುಟ್ಟಿಸುವ ವಾಮಮಾರ್ಗದ ಪ್ರಯತ್ನಕ್ಕೆ ಅವಕಾಶವಿಲ್ಲದಂತಾಗಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನೆಲೆಯಲ್ಲಿ ನಿಂತು 370ನೇ ವಿಧಿಯ ಆಯಾಮಗಳ ಪರಾಮರ್ಶೆ ಮಾಡುವುದು ಸ್ವೀಕೃತವೇ ಹೌದು.

ಪಾಕಿಸ್ತಾನದ ಡಾಂಭಿಕ ಹಿತಾಸಕ್ತಿಯಿಂದ ಜಮ್ಮು-ಕಾಶ್ಮೀರ ಸಮಸ್ಯೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿತ್ತು. ರಾಷ್ಟ್ರದ ಗಡಿ ದಾಟಿದ ಸೂಕ್ಷ್ಮ ಸಮಸ್ಯೆಯಾಗಿತ್ತು. ಅದರ ಬಗ್ಗೆ ತೆಗೆದುಕೊಳ್ಳುವ ಯಾವುದೇ ನಿರ್ಧಾರಗಳು ಹತ್ತಾರು ಬಾರಿ ಚರ್ಚೆಗೊಳಪಡಲೇಬೇಕು. ಸಮಯ, ಜನರ ಭಾವನೆ, ಪರಮಾಧಿಕಾರದ ಸ್ಥಿರತೆ, ಆಂತರಿಕ ಹಿಡಿತ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿತ್ತು. ಏಕಾಏಕಿ ನಿರ್ಧಾರವು ದೇಶದ ಆಡಳಿತದ ಸದೃಢತೆಯನ್ನು ಶಿಥಿಲಗೊಳಿಸುವ ಅಪಾಯವಿತ್ತು. 'ತಾತ್ಕಾಲಿಕ ನಿಯಮಗಳು' ಎಂಬ ಷರತ್ತಿನೊಂದಿಗೆ ನೀಡಿರುವ ವಿಶೇಷ ಸವಲತ್ತುಗಳಿಂದ ದುರುಳ ಕಾಶ್ಮೀರಿಗಳು ಅನಧಿಕೃತವಾಗಿ ಮೇಳೈಸುತ್ತಿದ್ದುದರಿಂದ, 370ನೇ ವಿಧಿಯ ರದ್ದತಿಗೆ ತೀವ್ರ ಹೋರಾಟ ಪ್ರಾರಂಭವಾಗಿತ್ತು. ಸಂವಿಧಾನದ ಪ್ರಸ್ತಾವನೆ, 14ನೇ ವಿಧಿಯ ಅನ್ವಯ ಕಾನೂನಿನ ಮುಂದೆ ಎಲ್ಲರೂ ಸಮಾನರೆಂಬ ಶ್ರೇಷ್ಠ ತತ್ವಗಳಿಗೆ ವಿರುದ್ಧವಾಗಿ ಸ್ಥಾಪಿತವಾಗಿರುವ ಸದರಿ ವಿಧಿಯ ರದ್ದತಿ ಬೇಡಿಕೆ ನ್ಯಾಯಸಮ್ಮತವಾಗಿದ್ದಾಗಿಯೂ, ಅದರ ರದ್ದತಿಗೆ 70 ವರ್ಷ ಕಾದಿದ್ದು ಮಾತ್ರ ದುರದೃಷ್ಟಕರ.

ಬರತಕ್ಕಿರುವುದು ಒಂದೇ ಸಂವಿಧಾನ, ಮೂಲ ಸಂವಿಧಾನ 395 ವಿಧಿಗಳ ಮತ್ತು ಪ್ರಸ್ತುತ ಉಪವಿಧಿಗಳ ಸೇರ್ಪಡೆಯಿಂದಾಗಿ 450ಕ್ಕೂ ಹೆಚ್ಚಾಗಿರುವ ವಿಧಿಗಳಲ್ಲಿ 370 ಕೂಡ ಒಂದು ವಿಧಿಯಷ್ಟೇ. ಇದರಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸವಲತ್ತು ಅಥವಾ ವಿನಾಯಿತಿಗಳನ್ನು ನೀಡಲಾಗಿದೆ. ಭಾರತ ಸಂವಿಧಾನವು 371, 371ಎ, 371ಬಿ, 371ಸಿ, 371ಡಿ, 371ಇ, 371ಎಫ್, 371ಜಿ, 371ಕೆ ಈ ವಿಧಿಗಳನ್ವಯ ಇನ್ನೂ ಹಲವು ರಾಜ್ಯಗಳಿಗೆ ವಿಶೇಷ ವಿನಾಯಿತಿಗಳನ್ನು ನೀಡಿದೆ. ಅವುಗಳಲ್ಲಿ 380 ಮಾತ್ರ ಸ್ವಲ್ಪ ವಿಭಿನ್ನ ವಿನಾಯಿತಿಗಳನ್ನು ಪಡೆದಿದೆ. ಸಂವಿಧಾನದ ಯಾವುದೇ ಭಾಗದಲ್ಲೂ 370 ಅನ್ನು ಪ್ರತ್ಯೇಕ ಎಂದು ನಮೂದಿಸಿರಲಿಲ್ಲ.

**370 ಮತ್ತು 35ಎ ವಿಧಿಗಳಿಗಿದ್ದ ವಿನಾಯಿತಿಗಳು:**

- ರಕ್ಷಣೆ, ವಿದೇಶಾಂಗ, ಆಂತರಿಕ ಭದ್ರತೆ ವಿಷಯಗಳನ್ನು ಹೊರತುಪಡಿಸಿ, ಉಳಿದ ವಿಷಯಗಳ ಹೊರತುಪಡಿಸಿ, ಉಳಿದ ವಿಷಯಗಳ ಮೇಲೆ ಕೇಂದ್ರವು ಜಮ್ಮು-ಕಾಶ್ಮೀರದ ಮೇಲೆ ನೇರವಾಗಿ ಕಾನೂನುಗಳನ್ನು ಹೇರಲಾಗುವುದಿಲ್ಲ.
- 238ನೇ ವಿಧಿಯ ಕೇಂದ್ರ ಮತ್ತು ರಾಜ್ಯಗಳ ಆಡಳಿತಾತ್ಮಕ ಸಂಬಂಧಗಳು ಜಮ್ಮು-ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ.
- 1ನೇ ಅನುಸೂಚಿಯ ಕಾರ್ಯಾಂಗ ಮತ್ತು ಶಾಸಕಾಂಗ ನಿಯಮಗಳು, ಅ-ಆ ನಿಯಮಗಳು ಜಮ್ಮು-ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ.
- ಬಾಹ್ಯ ಪರಿಸ್ಥಿತಿಯನ್ನು ಹೊರತುಪಡಿಸಿ ಉಳಿದ ತುರ್ತು ಪರಿಸ್ಥಿತಿಗಳನ್ನು ಹೇರಲು ಅಲ್ಲಿನ ಮಂತ್ರಿಮಂಡಲದ ಸಹಮತ ಬೇಕು.

- ರಾಜ್ಯ ಮತ್ತು ಸಮವರ್ತಿ ಪಟ್ಟಿಗಳಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ರಚಿಸಲು ಅಲ್ಲಿನ ಮಂತ್ರಿಮಂಡಲದ ಸಹಮತ ಅಗತ್ಯ.
- ಅಲ್ಲಿನ ಆಸ್ತಿಯನ್ನು ಬೇರೆಯವರು ಖರೀದಿಸುವಂತಿಲ್ಲ.
- ರಾಷ್ಟ್ರದ ಕೆಲವು ಸಾಮಾನ್ಯ ಕಾನೂನುಗಳು ಅವರಿಗೆ ಅನ್ವಯಿಸುವುದಿಲ್ಲ.
- 365ನೇ ವಿಧಿಯನುಸಾರದ ಕೇಂದ್ರದ ಶಕ್ತಿಯುತ ಅಧಿಕಾರ, ನಿರ್ದೇಶನ ಮತ್ತು ಅದನ್ನು ಉಲ್ಲಂಘಿಸಿದರೆ ರಾಜ್ಯಗಳ ಮೇಲೆ ತುರ್ತು ಪರಿಸ್ಥಿತಿ ಹೇರುವ ಅಧಿಕಾರ ಜಮ್ಮು-ಕಾಶ್ಮೀರಕ್ಕೆ ಹೊರತುಪಡಿಸಿದ್ದಾಗಿದೆ.
- 3701(1) ವಿಧಿಯನ್ವಯ ಈ ರಾಜ್ಯಕ್ಕೆ ಸಂಬಂಧಿಸಿದ ಸರಕಾರಿ ಅದೇಶಗಳನ್ನು ಅಲ್ಲಿನ ಮಂತ್ರಿಮಂಡಲದ ಸಹಮತವಿಲ್ಲದೆ ಹೊರಡಿಸುವಂತಿಲ್ಲ.

**ಕೇಂದ್ರ ಸರಕಾರವು 370ನೇ ವಿಧಿಯನ್ನು ರದ್ದುಮಾಡಲು ಇದ್ದ ಸಾಂವಿಧಾನಿಕ ಸಾಧ್ಯತೆ:**

- 368(1)ರ ತಿದ್ದುಪಡಿಯ ನಿಯಮಾನುಸಾರ ಸಂವಿಧಾನದಲ್ಲಿ ಏನೇ ಇದ್ದಾಗಿಯೂ, ಯಾವುದೇ ಉಪಬಂಧವನ್ನು ವಿಸ್ತರಿಸುವ ಹಾಗೂ ನಿರಸನಗೊಳಿಸುವ ಅಧಿಕಾರ ಸಂಸತ್ತಿಗಿದೆ.
- ಸಂವಿಧಾನದ 1ನೇ ಅನುಸೂಚಿಯ ಅನ್ವಯ, ಜಮ್ಮು-ಕಾಶ್ಮೀರ ಭಾರತದ 15ನೇ ರಾಜ್ಯವಾಗಿದ್ದು, ಸಾಂವಿಧಾನಿಕ ನಿಯಮಗಳ ಅಡಿಯಲ್ಲಿಯೇ ಬರುತ್ತದೆ.
- 1976ರ 42ನೇ ಸಂವಿಧಾನ ತಿದ್ದುಪಡಿಯ ನಂತರ 368(4)ನೇ ವಿಧಿಯನ್ವಯ ಮಾಡಿದ ಯಾವುದೇ ತಿದ್ದುಪಡಿಯ ವಿರುದ್ಧ(ಮೂಲಭೂತ ಹಕ್ಕಗಳನ್ನು ಒಳಗೊಂಡಂತೆ) ನ್ಯಾಯಾಲಯದ ಮೊರೆಹೋಗುವಂತಿಲ್ಲ.
- 368(5)ಇದರ ಅನ್ವಯ ಸಂಸತ್ತು ತಿದ್ದುಪಡಿ ಮಾಡುವ ಅಧಿಕಾರ ಯಾವುದೇ ಪರಿಮಿತಿಗೆ ಒಳಪಡುವುದಿಲ್ಲ ಎಂಬ ನಿಯಮವಿದೆ.
- ಸಂವಿಧಾನದ 1ನೇ ವಿಧಿಯನ್ವಯ ಭಾರತವು ರಾಜ್ಯಗಳ ಒಂದು ಒಕ್ಕೂಟ. ಸಂಸತ್ತಿಗೆ ಯಾವುದೇ ರಾಜ್ಯದ ಪ್ರದೇಶಗಳನ್ನು ಹೆಚ್ಚಿಸುವುದಕ್ಕೆ ಅಥವಾ ಕಡಿತಗೊಳಿಸುವುದಕ್ಕೆ ಅಧಿಕಾರವಿದೆ. ಅದರಂತೆ 370(ಅ)ವಿಧಿಯ ಪ್ರಕಾರ 1ನೇ ವಿಧಿಯು ಜಮ್ಮು-ಕಾಶ್ಮೀರಕ್ಕೆ ಅನ್ವಯಿಸುತ್ತದೆ ಎಂದು ನಿಯಮ ತಿಳಿಸುತ್ತದೆ.
- ಬಹಳ ಮುಖ್ಯವಾಗಿ 370(3)ರಂತೆ ಈ ಅನುಬಂಧದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗಿಯೂ ರಾಷ್ಟ್ರಪತಿಯವರು ಸಾರ್ವಜನಿಕ ಅಧಿಸೂಚನೆಯ ಮೂಲಕ ತಾವು ನಿರ್ದಿಷ್ಟ ಪಡಿಸಬಹುದಾದ ದಿನಾಂಕದಿಂದ ಈ ಅನುಬಂಧವು ಜಾರಿಯಲ್ಲಿರುವುದು ನಿಂತುಹೋಗತಕ್ಕದೆಂದು ಘೋಷಿಸಬಹುದು.
- ರಾಷ್ಟ್ರಪತಿಗಳು 74(2) ವಿಧಿಯನ್ವಯ ಕೇಂದ್ರಮಂತ್ರಿ ಮಂಡಲದ ಶಿಫಾರಸಿನ ಮೇರೆಗೆ, ಸಂಸತ್ತಿನ ಸಹಮತದೊಂದಿಗೆ ಮೇಲಿನ ಘೋಷಣೆಯನ್ನು ಹೊರಡಿಸಬಹುದು.
- ಸಂವಿಧಾನವು ಕೇಂದ್ರ ಮತ್ತು ರಾಜ್ಯಗಳ ನಡುವೆ ಕೇಂದ್ರ ಪಟ್ಟಿ, ರಾಜ್ಯಪಟ್ಟಿ ಹಾಗೂ ಸಮವರ್ತಿ ಪಟ್ಟಿಗಳಲ್ಲಿ ಅಧಿಕಾರ ವಿಭಜನೆ ಮಾಡಿದ್ದರೂ ಇವುಗಳನ್ನು ಹೊರತುಪಡಿಸಿದ ಉಳಿಕೆ ಅಧಿಕಾರ ಅಥವಾ ರೆಸಿಡರಿ ಪವರ್ ಅನ್ನು ಕೇಂದ್ರಕ್ಕೆ ನೀಡಿರುವುದರಿಂದ ಸಂಸತ್ತು ಶ್ರೇಷ್ಠ ಅಧಿಕಾರವನ್ನು ಹೊಂದಿದ್ದು, ಅದಕ್ಕೆ ಯಾವುದೇ ವಿಧಿಯನ್ನು ತಿದ್ದುಪಡಿ ಮಾಡುವ ಅಧಿಕಾರವಿರುತ್ತದೆ.

ಒಟ್ಟಿನಲ್ಲಿ ಸಂವಿಧಾನವನ್ನು ಧಿಕ್ಕರಿಸಿ ಜಮ್ಮು-ಕಾಶ್ಮೀರ ವರ್ತಿಸಲು ಸಾಧ್ಯವೇ ಇಲ್ಲ ಎಂಬ ವಾಸ್ತವಿಕ ಮೂಲಾಂಶಗಳು, ಆಗಸ್ಟ್ 5 ರಂದು ನರೇಂದ್ರ ಮೋದಿ ನೇತೃತ್ವದ ಸರಕಾರದ ನಡೆಯಿಂದ ಸಾದೃಶವಾಗಿದೆ. 370ನೇ ವಿಧಿಯನ್ನು ತಿದ್ದುಪಡಿ ಮಾಡಲು ಸಾಧ್ಯವಿಲ್ಲ ಎಂಬ ವಾದ ಮಂಡಿಸುತ್ತಿದ್ದ ಪ್ರಾಯೋಜಿತ ಬುದ್ಧಿಜೀವಿಗಳಿಗೆ 370ನೇ ವಿಧಿಯ ತಿದ್ದುಪಡಿಯು ಸಾಮಾನ್ಯ ತಿದ್ದುಪಡಿ ನಿಯಮದಡಿ ಬರುತ್ತದೆ ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲ.

ಸಾಮಾನ್ಯ ತಿದ್ದುಪಡಿ ಎಂದರೆ ಸಂಸತ್ತಿನ ಉಭಯ ಸದನಗಳ ಮೂರನೇ ಎರಡಷ್ಟು ಬಹುಮತವಿದ್ದರೆ ಅಂಥ ವಿಷಯಗಳನ್ನು ತಿದ್ದುಪಡಿ ಮಾಡಬಹುದು ಅದೇ ವಿಶೇಷ ತಿದ್ದುಪಡಿ ಎಂದರೆ, ಉಭಯ ಸದನಗಳ ಮೂರನೇ ಎರಡರಷ್ಟು ರಾಜ್ಯಗಳ ಅನುಮತಿಯೂ ಅಗತ್ಯವಾಗಿರುತ್ತದೆ. ಕೇಂದ್ರ ಸರಕಾರವು 370ನೇ ವಿಧಿಯ 3ನೇ ಉಪವಿಧಿಯಲ್ಲಿ ಅಡಕವಾಗಿದ್ದ ರಾಷ್ಟ್ರಪತಿಯವರ ಆದೇಶದ ಅನ್ವಯವೇ ಈ ವಿಧಿಗಳನ್ನು ರದ್ದುಪಡಿಸಬಹುದೆಂಬ ಜಾಣ್ಮೆ ಮೆರೆದದ್ದು ಸ್ವಾಗತಾರ್ಹ.

ಇವುಗಳ ರದ್ಧತಿಯ ಬಗ್ಗೆ ಪಾಕಿಸ್ತಾನವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಡೋಲು ಬಾರಿಸಿದರೂ, ವಿಶ್ವಸಂಸ್ಥೆಯು ಜಮ್ಮು-ಕಾಶ್ಮೀರ ವಿಷಯ ಭಾರತ ಮತ್ತು ಪಾಕಿಸ್ತಾನದ ನಡುವಿನ ದ್ವಿಪಕ್ಷೀಯ ಸಂಬಂಧದ ವ್ಯಾಪ್ತಿಯಲ್ಲೇ ಬರುತ್ತದೆ ಎಂದು ನಿರ್ಣಯಿಸಿದ್ದು ರಾಯಭಾರದ ಸಾಂಗತ್ಯಕ್ಕೆ ಸಂದ ಗೌರವ ಮುಂದುವರಿದು ಸದರಿ ವಿಧಿಗಳ ರದ್ದತಿಯ ಕುರಿತು ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲು ಏರಿದ್ದರೂ, ಈ ಸಂವಿಧಾನದ ಮೂಲಸತ್ವವನ್ನು ಬುಡಮೇಲು ಮಾಡಿದ್ದ 370ನೇ ವಿಧಿಯ ರದ್ದತಿಯನ್ನು ಈ ಮೇಲ್ಕಾಣಿಸಿದ ಸಾಂವಿಧಾನಿಕ ಅವಕಾಶಗಳ ಕಾರಣಕ್ಕಾಗಿಯೇ ಸರ್ವೋಚ್ಚ ನ್ಯಾಯಾಲಯವು ಮಾನ್ಯ ಮಾಡಿದೆ.

**ಆಧಾರ:** ವಿಶ್ವವಾಣಿ, ದಿನಾಂಕ: 12.12.2023

## 3. ನ್ಯಾಯಾಲಯವು ಶ್ರೇಷ್ಠ ಭಾರತ್ ಮನೋಭಾವವನ್ನು ಬಲಪಡಿಸಿದೆ

ಡಿಸೆಂಬರ್ 11 ರಂದು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು 370 ಮತ್ತು 35(ಎ) ವಿಧಿಗಳ ರದ್ದತಿಯ ಬಗ್ಗೆ ಐತಿಹಾಸಿಕ ತೀರ್ಪು ನೀಡಿತು. ತನ್ನ ತೀರ್ಪಿನ ಮೂಲಕ, ನ್ಯಾಯಾಲಯವು ಪ್ರತಿಯೊಬ್ಬ ಭಾರತೀಯನು ಗೌರವಿಸುವ ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ಎತ್ತಿಹಿಡಿದಿದೆ. 2019ರ ಆಗಸ್ಟ್ 5ರಂದು ತೆಗೆದುಕೊಂಡ ನಿರ್ಧಾರವನ್ನು ಸಾಂವಿಧಾನಿಕ ಏಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಮಾಡಲಾಗಿದೆಯೇ ಹೊರತು ವಿಘಟನೆಯಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಸರಿಯಾಗಿ ಗಮನಿಸಿದೆ. 370ನೇ ವಿಧಿ ಶಾಶ್ವತವಲ್ಲ ಎಂಬ ಅಂಶವನ್ನೂ ನ್ಯಾಯಾಲಯವು ಗುರುತಿಸಿದೆ.

ಜಮ್ಮು, ಕಾಶ್ಮೀರ ಮತ್ತು ಲಡಾಖ್‌ನ ಅದ್ಭುತವಾದ ಭೂದೃಶ್ಯಗಳು, ಪ್ರಶಾಂತ ಕಣಿವೆಗಳು ಮತ್ತು ಭವ್ಯವಾದ ಪರ್ವತಗಳು ತಲೆಮಾರುಗಳಿಂದ ಕವಿಗಳು, ಕಲಾವಿದರು ಮತ್ತು ಸಾಹಸಿಗಳ ಮನಸೂರೆಗೊಂಡಿವೆ. ಇದು ಭವ್ಯತೆಯು ಅಸಾಧಾರಣವಾದುದನ್ನು ಸಂಧಿಸುವ ಸ್ಥಳವಾಗಿದೆ. ಇಲ್ಲಿ ಹಿಮಾಲಯವು ಆಕಾಶದೆತ್ತರಕ್ಕೆ ನಿಂತಿದೆ ಮತ್ತು ಸರೋವರಗಳು ಹಾಗೂ ನದಿಗಳ ಶುದ್ಧ ನೀರು ಸ್ವರ್ಗವನ್ನು ಪ್ರತಿಬಿಂಬಿಸುತ್ತವೆ. ಆದರೆ, ಕಳೆದ ಏಳು ದಶಕಗಳಿಂದ, ಈ ಸ್ಥಳಗಳು ಹಿಂಸಾಚಾರ ಮತ್ತು ಅಸ್ಥಿರತೆಗೆ ಸಾಕ್ಷಿಯಾಗಿದ್ದವು, ಇದು ಇಲ್ಲಿನ ಅದ್ಭುತವಾದ ಜನರಿಗೆ ಎಂದಿಗೂ ಅರ್ಹವಾದುದಾಗಿರಲಿಲ್ಲ.

ದುರದೃಷ್ಟವಶಾತ್, ಶತಮಾನಗಳ ವಸಾಹತುಶಾಹಿಯಿಂದಾಗಿ, ಮುಖ್ಯವಾಗಿ ಆರ್ಥಿಕ ಮತ್ತು ಮಾನಸಿಕ ಅಧೀನತೆಯಿಂದಾಗಿ ನಮ್ಮದು ಒಂದು ರೀತಿಯ ಗೊಂದಲಮಯ ಸಮಾಜವಾಗಿದೆ. ಮೂಲಭೂತ ವಿಷಯಗಳ ಬಗ್ಗೆ ಸ್ಪಷ್ಟತೆಯ ಬದಲು ನಾವು ದ್ವಂದ್ವಕ್ಕೀಡಾಗುತ್ತೇವೆ. ವಿಷಾದದ ವಿಷಯವೆಂದರೆ, ಜಮ್ಮು ಮತ್ತು ಕಾಶ್ಮೀರ ಇಂಥ ಮನಸ್ಥಿತಿಯ ದೊಡ್ಡ ಬಲಿಪಶುವಾಯಿತು. ಸ್ವಾತಂತ್ರ್ಯದ ಸಮಯದಲ್ಲಿ ನಾವು ರಾಷ್ಟ್ರೀಯ ಐಕ್ಯತೆಯ ಹೊಸ ಆರಂಭದ ಆಯ್ಕೆಯನ್ನು ಹೊಂದಿದೆವು. ಆದರೆ, ದೀರ್ಘಾವಧಿಯ ರಾಷ್ಟ್ರೀಯ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿ ಗೊಂದಲಮಯ ಸಮಾಜದ ವಿಧಾನವನ್ನು ಮುಂದುವರಿಸಲು ನಾವು ನಿರ್ಧರಿಸಿದೆವು.

ನನ್ನ ಜೀವನದ ಆರಂಭದಿಂದಲೂ ಜಮ್ಮು ಮತ್ತು ಕಾಶ್ಮೀರ ಆಂದೋಲನದೊಂದಿಗೆ ಸಂಪರ್ಕ ಹೊಂದುವ ಅವಕಾಶವನ್ನು ನಾನು ಪಡೆದಿದ್ದೇನೆ. ನಾನು ಜಮ್ಮು ಮತ್ತು ಕಾಶ್ಮೀರವು ಕೇವಲ ರಾಜಕೀಯ ವಿಷಯವಲ್ಲ ಎಂಬ ಸೈದ್ಧಾಂತಿಕ ಚೌಕಟ್ಟಿಗೆ ಸೇರಿದವನು. ಶ್ಯಾಮಾ ಪ್ರಸಾದ್ ಮುಖರ್ಜಿ ಅವರು ನೆಹರು ಸಂಪುಟದಲ್ಲಿ ಪ್ರಮುಖ ಖಾತೆಯನ್ನು ಹೊಂದಿದ್ದರು ಮತ್ತು ಅವರು ದೀರ್ಘಕಾಲ ಸರಕಾರದಲ್ಲಿ ಉಳಿಯಬಹುದಿತ್ತು. ಆದರೂ, ಅವರು ಕಾಶ್ಮೀರ ಸಮಸ್ಯೆಯ ಕಾರಣದಿಂದಾಗಿ ಸಂಪುಟ ತೊರೆದರು ಮತ್ತು ಮುಂದೆ ತಮ್ಮ ಜೀವನವನ್ನು ಪಣಕ್ಕಿಟ್ಟು ಕಠಿಣ ಹಾದಿ ಹಿಡಿದರು. ಅವರ ಪ್ರಯತ್ನಗಳು ಮತ್ತು ತ್ಯಾಗದಿಂದಾಗಿ ಕೋಟ್ಯಂತರ ಭಾರತೀಯರು  ಕಾಶ್ಮೀರ ಸಮಸ್ಯೆಯೊಂದಿಗೆ ಭಾವನಾತ್ಮಕವಾಗಿ ಸಂಬಂಧ ಹೊಂದಿದ್ದಾರೆ. ವರ್ಷಗಳ ನಂತರ, ಶ್ರೀನಗರದ ಸಾರ್ವಜನಿಕ ಸಭೆಯೊಂದರಲ್ಲಿ ಅಟಲ್ ಜಿ ಅವರು ಇನ್ಸಾನಿಯಾತ್ ಜಮ್ಹೂರಿಯಾತ್ ಮತ್ತು ಕಾಶ್ಮೀರಿಯಾತ್ ಎಂಬ ಪ್ರಬಲ ಸಂದೇಶವನ್ನು ನೀಡಿದರು, ಇದು ಯಾವಾಗಲೂ ಸ್ಫೂರ್ತಿಯ ಮೂಲವಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿರುವುದು ನಮ್ಮ ದೇಶಕ್ಕೆ ಮತ್ತು ಅಲ್ಲಿ ವಾಸಿಸುವ ಜನರಿಗೆ ಮಾಡಿದ ದೊಡ್ಡ ದ್ರೋಹ ಎಂಬುದು ನನ್ನ ದೃಢವಾದ ನಂಬಿಕೆಯಾಗಿತ್ತು. ಈ ಕಳಂಕವನ್ನು, ಜನರಿಗೆ ಮಾಡಿದ ಅನ್ಯಾಯವನ್ನು ತೊಡೆದುಹಾಕಲು ನಾನು ಏನನ್ನಾದರೂ ಮಾಡಬೇಕೆಂಬುದು ನನ್ನ ಬಲವಾದ ಬಯಕೆಯಾಗಿತ್ತು. ಜಮ್ಮು ಮತ್ತು ಕಾಶ್ಮೀರದ ಜನರ ನೋವನ್ನು ನಿವಾರಿಸಲು ನಾನು ಸದಾಕಾಲ ಕೆಲಸ ಮಾಡಲು ಬಯಸುತ್ತೇನೆ.

ಮೂಲಭೂತವಾಗಿ ಹೇಳುವುದಾದರೆ–370 ಮತ್ತು 35(ಎ)ವಿಧಿಗಳು ಪ್ರಮುಖ ಅಡೆತಡೆಗಳಾಗಿದ್ದವು. ಅದು ಒಡೆಯಲಾಗದ ಗೋಡೆಯಂತೆ ಕಾಣುತ್ತಿತ್ತು ಮತ್ತು ಇದರಿಂದ ಬಡವರು ಮತ್ತು ದೀನದಲಿತರು ಬಳಲುತ್ತಿದ್ದರು 370 ಮತ್ತು 35(ಎ) ವಿಧಿಗಳು ಜಮ್ಮು ಮತ್ತು ಕಾಶ್ಮೀರದ ಜನರು ತಮ್ಮ ಇತರ ಸಹ ಭಾರತೀಯರು ಪಡೆದ ಹಕ್ಕುಗಳು ಮತ್ತು ಅಭಿವೃದ್ಧಿಯನ್ನು ಎಂದಿಗೂ ಪಡೆಯದಂತೆ ಮಾಡಿದ್ದವು. ಈ ವಿಧಿಗಳಿಂದಾಗಿ ಒಂದೇ ರಾಷ್ಟ್ರಕ್ಕೆ ಸೇರಿದ ಜನರ ನಡುವೆ ಅಂತರವನ್ನು ಸೃಷ್ಟಿಸಲಾಯಿತು. ಈ ಅಂತರದಿಂದಾಗಿ, ಜಮ್ಮು ಮತ್ತು ಕಾಶ್ಮೀರದ ಸಮಸ್ಯೆಗಳನ್ನು ಪರಿಹರಿಸುವ ಕೆಲಸ ಮಾಡಲು ಬಯಸಿದ ನಮ್ಮ ರಾಷ್ಟ್ರದ ಅನೇಕರು ಅಲ್ಲಿನ ಜನರ ನೋವನ್ನು ಸ್ಪಷ್ಟವಾಗಿ ಅನುಭವಿಸಿದರೂ ಅದನ್ನು ಮಾಡಲು ಸಾಧ್ಯವಾಗಲಿಲ್ಲ.

ಕಳೆದ ಹಲವು ದಶಕಗಳಲ್ಲಿ ಸಮಸ್ಯೆಯನ್ನು ಹತ್ತಿರದಿಂದ ನೋಡಿದ ಒಬ್ಬ ಕಾರ್ಯಕರ್ತನಾಗಿ, ನಾನು ಸಮಸ್ಯೆಯ ನಿರ್ದಿಷ್ಟತೆಗಳು ಮತ್ತು ಸಂಕೀರ್ಣತೆಗಳ ಸೂಕ್ಷ್ಮವಾದ ತಿಳಿವಳಿಕೆಯನ್ನು ಹೊಂದಿದ್ದೆ. ಆದರೂ, ನನಗೆ ಒಂದು ವಿಷಯ ಸ್ಪಷ್ಟವಾಗಿತ್ತು. ಅದೆಂದರೆ, ಜಮ್ಮು ಮತ್ತು ಕಾಶ್ಮೀರದ ಜನರು ಅಭಿವೃದ್ಧಿಯನ್ನು ಬಯಸುತ್ತಾರೆ ಮತ್ತು ಅವರು ತಮ್ಮ ಸಾಮರ್ಥ್ಯ ಮತ್ತು ಕೌಶಲಗಳ ಆಧಾರದ ಮೇಲೆ ಭಾರತದ ಅಭಿವೃದ್ಧಿಗೆ ಕೊಡುಗೆ ನೀಡಲು ಬಯಸುತ್ತಾರೆ, ಅವರು ತಮ್ಮ ಮಕ್ಕಳ ಉತ್ತಮ ಗುಣಮಟ್ಟದ ಜೀವನವನ್ನು, ಹಿಂಸೆ ಮತ್ತು ಅನಿಶ್ಚಿತತೆಯಿಂದ ಮುಕ್ತವಾದ ಜೀವನವನ್ನು ಬಯಸುತ್ತಾರೆ ಎಂಬುದು.

ಹೀಗಾಗಿ ಜಮ್ಮು ಮತ್ತು ಕಾಶ್ಮೀರದ ಜನರಿಗೆ ಸೇವೆ ಸಲ್ಲಿಸುವಾಗ ನಾವು ಮೂರು ಆಧಾರ ಸ್ತಂಭಗಳಿಗೆ ಆದ್ಯತೆ ನೀಡಿದ್ದೇವೆ. ನಾಗರಿಕರ ಕಾಳಜಿಯನ್ನು ಅರ್ಥಮಾಡಿಕೊಳ್ಳುವುದು, ಬೆಂಬಲ ಕ್ರಮಗಳ ಮೂಲಕ ವಿಶ್ವಾಸವನ್ನು ಬೆಳೆಸುವುದು ಮತ್ತು ಅಭಿವೃದ್ಧಿ, ಅಭಿವೃದ್ಧಿ ಮತ್ತು ಹೆಚ್ಚಿನ ಅಭಿವೃದ್ಧಿಗೆ ಆದ್ಯತೆ ನೀಡುವುದು.

2014ರಲ್ಲಿ, ನಾವು ಅಧಿಕಾರ ವಹಿಸಿಕೊಂಡ ನಂತರ, ಜಮ್ಮು ಮತ್ತು ಕಾಶ್ಮೀರದಲ್ಲಿ ವಿನಾಶಕಾರಿ ಪ್ರವಾಹಗಳು ಸಂಭವಿಸಿದವು. ಕಾಶ್ಮೀರ ಕಣಿವೆಯಲ್ಲಿ ಸಾಕಷ್ಟು ಹಾನಿಯಾಯಿತು. ಸೆಪ್ಟೆಂಬರ್ 2014ರಲ್ಲಿ, ನಾನು ಪರಿಸ್ಥಿತಿಯನ್ನು ತಿಳಿಯಲು ಶ್ರೀನಗರಕ್ಕೆ ಹೋಗಿದ್ದೆ ಮತ್ತು ಪುನರ್ವಸತಿಗಾಗಿ ವಿಶೇಷ ಸಹಾಯವಾಗಿ 1000ಕೋಟಿ ರೂಪಾಯಿಗಳನ್ನು ಘೋಷಿಸಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ಜನರನ್ನು ಬೆಂಬಲಿಸಲು ನಮ್ಮ ಸರಕಾರದ ಬದ್ಧತೆಯನ್ನು ತಿಳಿಸಿದೆ. ನಾನು ಸಮಾಜದ ವಿವಿಧ ವರ್ಗಗಳ ಜನರನ್ನು ಭೇಟಿ ಮಾಡುವ ಅವಕಾಶವನ್ನು ಪಡೆದಿದ್ದೇನೆ ಮತ್ತು ಈ ಸಂವಾದಗಳಲ್ಲಿ ಒಂದು ಸಾಮಾನ್ಯ ವಿಷಯವಿದೆ– ಜನರು ಅಭಿವೃದ್ಧಿಯನ್ನು ಬಯಸುವುದು ಮಾತ್ರವಲ್ಲ ಅವರು ದಶಕಗಳಿಂದ ಚಾಲ್ತಿಯಲ್ಲಿರುವ ಬ್ರಹ್ಮಾಂಡ, ಭ್ರಷ್ಟಾಚಾರದಿಂದ ಮುಕ್ತಿಯನ್ನೂ ಬಯಸುತ್ತಾರೆ. ಅದೇ ವರ್ಷ, ಜಮ್ಮು ಮತ್ತು ಕಾಶ್ಮೀರದಲ್ಲಿ ನಾವು ಕಳೆದುಕೊಂಡವರ ಸ್ಮರಣಾರ್ಥವಾಗಿ ನಾನು ದೀಪಾವಳಿಯನ್ನು ಆಚರಿಸದಿರಲು ನಿರ್ಧರಿಸಿದೆ. ನಾನು ದೀಪಾವಳಿಯ ದಿನ ಜಮ್ಮು ಮತ್ತು ಕಾಶ್ಮೀರದಲ್ಲಿರಲು ಸಹ ನಿರ್ಧರಿಸಿದೆ.

ಜಮ್ಮು ಮತ್ತು ಕಾಶ್ಮೀರದ ಅಭಿವೃದ್ಧಿ ಪಯಣವನ್ನು ಮತ್ತಷ್ಟು ಬಲಪಡಿಸುವ ಸಲುವಾಗಿ, ನಮ್ಮ ಸರಕಾರದ ಸಚಿವರು ಆಗಾಗ ಅಲ್ಲಿಗೆ ಹೋಗಿ ಜನರೊಂದಿಗೆ ನೇರವಾಗಿ ಸಂವಾದ ನಡೆಸಬೇಕೆಂದು ನಾವು ನಿರ್ಧರಿಸಿದೆವು. ಈ ಭೇಟಿಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಸೌಹಾರ್ದವನ್ನು ಬೆಳೆಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿವೆ. ಮೇ 2014ರಿಂದ ಮಾರ್ಚ್ 2019ರವರೆಗೆ ಸಚಿವರ 150ಕ್ಕೂ ಹೆಚ್ಚು ಭೇಟಿಗಳು ನಡೆದಿವೆ. ಇದೊಂದು ದಾಖಲೆಯಾಗಿದೆ. 2015ರ ವಿಶೇಷ ಪ್ಯಾಕೇಜ್ ಜಮ್ಮು ಮತ್ತು ಕಾಶ್ಮೀರದ ಅಭಿವೃದ್ಧಿ ಅಗತ್ಯಗಳನ್ನು ಪರಿಹರಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಇದು ಮೂಲಸೌಕರ್ಯ ಅಭಿವೃದ್ಧಿ, ಉದ್ಯೋಗ ಸೃಷ್ಟಿ, ಪ್ರವಾಸೋದ್ಯಮ ಉತ್ತೇಜನ ಮತ್ತು ಕರಕುಶಲ ಉದ್ಯಮಕ್ಕೆ ಬೆಂಬಲವಾಗಿದೆ.

ನಾವು ಜಮ್ಮು ಮತ್ತು ಕಾಶ್ಮೀರದಲ್ಲಿ ಕ್ರೀಡೆಯ ಶಕ್ತಿಯನ್ನು ಬಳಸಿಕೊಂಡಿದ್ದೇವೆ, ಯುವಜನರ ಕನಸುಗಳಿಗೆ ಕಿಚ್ಚು ಹೊತ್ತಿಸುವ ಸಾಮರ್ಥ್ಯವನ್ನು ಗುರುತಿಸಿದ್ದೇವೆ. ಕ್ರೀಡಾ ಉಪಕ್ರಮಗಳ ಮೂಲಕ, ಅವರ ಆಕಾಂಕ್ಷೆಗಳು ಮತ್ತು ಭವಿಷ್ಯದಲ್ಲಿ ಅಥ್ಲೆಟಿಕ್ ಹಾದಿ ಹಿಡಿಯುವ ಅವರ ರೂಪಾಂತರದ ಪರಿಣಾಮವನ್ನು ನಾವು ನೋಡಿದ್ದೇವೆ. ಕ್ರೀಡಾ ಸ್ಥಳಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಮತ್ತು ತರಬೇತುದಾರರು ಲಭ್ಯವಾಗುವಂತೆ ಮಾಡಲಾಗಿದೆ. ಅತ್ಯಂತ ವಿಶಿಷ್ಟವಾದ ವಿಷಯವೆಂದರೆ ಸ್ಥಳೀಯ ಫುಟ್‌ಬಾಲ್ ಕ್ಲಬ್‌ಗಳ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು. ಫಲಿತಾಂಶಗಳು ಅತ್ಯುತ್ತಮವಾಗಿದ್ದವು. ಪ್ರಭಾನ್ವಿತ ಫುಟ್ಬಾಲ್ ಆಟಗಾರ್ತಿ ಅಫ್ಶಾನ್ ಅನಿಕ್ ಅವರ ಹೆಸರು ನನ್ನ ನೆನಪಿಗೆ ಬರುತ್ತದೆ–ಡಿಸೆಂಬರ್ 2014ರಲ್ಲಿ ಅವರು ಶ್ರೀನಗರದಲ್ಲಿ ಕಲ್ಲು ತೂರಾಟ ನಡೆಸುತ್ತಿದ್ದ ಗುಂಪಿನ ಭಾಗವಾಗಿದ್ದರು, ಆದರೆ ಸೂಕ್ತ ಪ್ರೋತ್ಸಾಹ ದೊರೆತ ಕಾರಣದಿಂದ ಆಕೆ ಫುಟ್ಬಾಲ್ ಕಡೆಗೆ ತಿರುಗಿದರು. ಅವರನ್ನು ತರಬೇತಿಗೆ ಕಳುಹಿಸಲಾಯಿತು ಮತ್ತು ನಂತರ ಅವರು ಆಟದಲ್ಲಿ ಮಿಂಚಿದರು. ಫಿಟ್ ಇಂಡಿಯಾ ಡೈಲಾಗ್ ಒಂದರಲ್ಲಿ ನಾನು ಅವರೊಂದಿಗೆ ಸಂವಾದ ನಡೆಸಿದದು ನೆನಪಿದೆ. ಅಲ್ಲಿ ನಾನು ಬೆಂಟ್ ಇಟ್ ಲೈಕ್ ಹ್ಯಾಮ್ ಬಿಟ್ಟು ಏಸ್ ಇಟ್ ಲೈಕ್ ಇಫ್ಶಾನ್ ಆಗುವ ಸಮಯ ಬಂದಿದೆ ಎಂದು ಹೇಳಿದೆ. ಇತರ ಯುವಕರು ಕಿಕ್ ಬಾಕ್ಸಿಂಗ್ ಕರಾಟೆ ಮತ್ತು ಇತರ ಕ್ರೀಡೆಗಳಲ್ಲಿ ಮಿಂಚಲು ಪ್ರಾರಂಭಿಸಿದರು.

ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ಪಂಚಾಯತ್ ಚುನಾವಣೆಗಳು ಒಂದು ಅಭೂತಪೂರ್ವ ಕ್ಷಣವಾಗಿದೆ. ಮತ್ತೊಮ್ಮೆ ನಾವು ಅಧಿಕಾರದಲ್ಲಿ ಉಳಿಯುವ ಅಥವಾ ನಮ್ಮ ತತ್ವಗಳ ಮೇಲೆ ನಿಲ್ಲುವ ಆಯ್ಕೆಯನ್ನು ಎದುರಿಸದೆವು. ಆಯ್ಕೆಯು ಎಂದಿಗೂ ಕಠಿಣವಾಗಿರಲಿಲ್ಲ ಮತ್ತು ನಾವು ಸರಕಾರವನ್ನು ಬಿಡುತ್ತೇವೆ. ಆದರೆ ನಮ್ಮ ಆದರ್ಶಗಳನ್ನಲ್ಲ. ಜಮ್ಮು ಮತ್ತು ಕಾಶ್ಮೀರದ ಜನರ ಆಕಾಂಕ್ಷೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪಂಚಾಯತ್ ಚುನಾವಣೆಯ ಯಶಸ್ಸು ಜಮ್ಮು ಮತ್ತು ಕಾಶ್ಮೀರದ ಜನರ ಆಕಾಂಕ್ಷೆಗಳಿಗೆ

ಹೆಚ್ಚಿನ ಆದ್ಯತೆ ನೀಡಲಾಗಿದೆ. ಪಂಚಾಯತ್ ಚುನಾವಣೆಯ ಯಶಸ್ಸು ಜಮ್ಮು ಮತ್ತು ಕಾಶ್ಮೀರದ ಜನರ ಪ್ರಜಾಸತ್ತಾತ್ಮಕ ಗುಣವನ್ನು ಸೂಚಿಸುತ್ತದೆ. ಹಳ್ಳಿಗಳ ಪ್ರಧಾನರೊಂದಿಗೆ ನಡೆಸಿದ ಸಂವಾದವನ್ನು ನಾನು ನೆನಪಿಸಿಕೊಳ್ಳುತ್ತೇನೆ. ಇತರ ಸಮಸ್ಯೆಗಳ ಜತೆಗೆ ನಾನು ಅವರಿಗೆ ಯಾವುದೇ ಹಂತದಲ್ಲೂ ಶಾಲೆಗಳನ್ನು ಸುಡಬಾರದು ಮತ್ತು ಅದಾಗದಂತೆ ಖಚಿತಪಡಿಸಿಕೊಳ್ಳಬೇಕು ಎಂದು ವಿನಂತಿಯನ್ನು ಮಾಡಿದೆ. ಅವರು ಇದಕ್ಕೆ ಬದ್ಧವಾಗಿರುವುದನ್ನು ನೋಡಿ ನನಗೆ ಸಂತೋಷವಾಗುತ್ತಿದೆ. ಅಷ್ಟಕ್ಕೂ ಶಾಲೆಗಳನ್ನು ಸುಟ್ಟರೆ ಹೆಚ್ಚು ನಷ್ಟಕ್ಕೊಳಗಾಗುವವರು ಪುಟ್ಟಮಕ್ಕಳು.

ಆಗಸ್ಟ್ 5ರ ಐತಿಹಾಸಿಕ ದಿನವು ಪ್ರತಿಯೊಬ್ಬ ಭಾರತೀಯನ ಹೃದಯ ಮತ್ತು ಮನಸ್ಸಿನಲ್ಲಿ ಅಚ್ಚೊತ್ತಿದೆ. ನಮ್ಮ ಸಂಸತ್ತು 370ನೇ ವಿಧಿಯನ್ನು ರದ್ದುಗೊಳಿಸುವ ಐತಿಹಾಸಿಕ ನಿರ್ಧಾರವನ್ನು ಅಂಗೀಕರಿಸಿತು. ಅಂದಿನಿಂದ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ನ್ಯಾಯಾಲಯದ ತೀರ್ಪು ಡಿಸೆಂಬರ್ 2023ರಲ್ಲಿ ಬಂದಿದೆ. ಆದರೆ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನಾದ್ಯಂತ ಅಭಿವೃದ್ಧಿಯ ಅಲೆಯನ್ನು ಜನತಾ ನ್ಯಾಯಾಲಯವು ನಾಲ್ಕು ವರ್ಷಗಳಿಂದ ನೋಡಿದೆ. 370 ಮತ್ತು 35(ಎ) ವಿಧಿಗಳನ್ನು ರದ್ದುಗೊಳಿಸುವ ಸಂಸತ್ತಿನ ನಿರ್ಧಾರಕ್ಕೆ ಬೆಂಬಲ ಸೂಚಿಸಿದೆ.

ರಾಜಕೀಯವಾಗಿ, ಕಳೆದ 4 ವರ್ಷಗಳು ತಳಮಟ್ಟದ ಪ್ರಜಾಪ್ರಭುತ್ವದಲ್ಲಿ ಹೊಸ ನಂಬಿಕೆಯೊಂದಿಗೆ ಗುರುತಿಸಲ್ಪಟ್ಟಿದೆ. ಮಹಿಳೆಯರು, ಆದಿವಾಸಿಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಮಾಜದ ಕಟ್ಟಕಡೆಯ ವರ್ಗದವರಿಗೆ ಅವರ ಸವಲತ್ತುಗಳು ಸಿಗುತ್ತಿರಲಿಲ್ಲ. ಅದೇ ಸಮಯದಲ್ಲಿ ಲಡಾಖ್‌ನ ಅಕಾಂಕ್ಷೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು. ಆಗಸ್ಟ್ 5, 2019 ಎಲ್ಲವನ್ನೂ ಬದಲಾಯಿಸಿತು. ಎಲ್ಲಾ ಕೇಂದ್ರೀಯ ಕಾನೂನುಗಳು ಈಗ ಭಯ ಅಥವಾ ಪಕ್ಷಪಾತವಿಲ್ಲದೇ ಅನ್ವಯವಾಗುತ್ತಿವೆ. ಪ್ರಾತಿನಿಧ್ಯವು ಹೆಚ್ಚು ವ್ಯಾಪಕವಾಗಿದೆ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಯಲ್ಲಿದೆ. ಬಿ.ಡಿ.ಸಿ ಚುನಾವಣೆಗಳು ನಡೆದಿವೆ ಮತ್ತು ಎಲ್ಲವನ್ನು ಕಳೆದುಕೊಂಡ ನಿರಾಶ್ರಿತ ಸಮುದಾಯಗಳು ಅಭಿವೃದ್ಧಿಯ ಫಲವನ್ನು ಪಡೆಯಲು ಪ್ರಾರಂಭಿಸಿವೆ.

ಕೇಂದ್ರ ಸರಕಾರದ ಪ್ರಮುಖ ಯೋಜನೆಗಳು ಪರಿಪೂರ್ಣತೆಯ ಮಟ್ಟವನ್ನು ತಲುಪಿವೆ, ಹೀಗಾಗಿ ಸಮಾಜದ ಎಲ್ಲಾ ವರ್ಗಗಳನ್ನು ಒಳಗೊಂಡಿವೆ. ಇವುಗಳಲ್ಲಿ ಸೌಭಾಗ್ಯ, ಉಜ್ವಲಾ ಮತ್ತು ಉಜಾಲ ಯೋಜನೆಗಳು ಸೇರಿವೆ. ವಸತಿ, ನಲ್ಲಿ ನೀರಿನ ಸಂಪರ್ಕ ಮತ್ತು ಆರ್ಥಿಕ ಸೇರ್ಪಡೆಯಲ್ಲಿ ದಾಪುಗಾಲು ಹಾಕಲಾಗಿದೆ. ಜನರಿಗೆ ಪ್ರಮುಖ ಸವಾಲಾಗಿರುವ ಆರೋಗ್ಯ ರಕ್ಷಣೆಯ ಮೂಲ ಸೌಕರ್ಯವನ್ನು ಉನ್ನತೀಕರಿಸಲಾಗಿದೆ. ಎಲ್ಲಾ ಗ್ರಾಮಗಳು ಒಡಿಎಫ್ ಪ್ಲಸ್ ಸ್ಥಾನಮಾನಗಳನ್ನು ಸಾಧಿಸಿವೆ. ಭ್ರಷ್ಟಾಚಾರ ಮತ್ತು ಪಕ್ಷಪಾತದ ಕೂಪವಾಗಿದ್ದ ಸರಕಾರಿ ಹುದ್ದೆಗಳನ್ನು ಪಾರದರ್ಶಕ ಮತ್ತು ಪ್ರಕ್ರಿಯೆ ಚಾಲಿತ ರೀತಿಯಲ್ಲಿ ಭರ್ತಿ ಮಾಡಲಾಗಿದೆ. ಐಎಂಆರ್ ನಂಥ ಇತರ ಸೂಚಕಗಳು ಸುಧಾರಣೆಯನ್ನು ತೋರಿಸಿವೆ. ಮೂಲಸೌಕರ್ಯ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ಎಲ್ಲರಿಗೂ ಕಾಣಿಸುತ್ತಿದೆ. ಇದರ ಶ್ರೇಯ ಸಹಜವಾಗಿ ಜಮ್ಮು ಮತ್ತು ಕಾಶ್ಮೀರದ ಜನರ ಸ್ಥೈರ್ಯಕ್ಕೆ ಸಲ್ಲುತ್ತದೆ. ಅವರು ಅಭಿವೃದ್ಧಿಯನ್ನು ಮಾತ್ರ ಬಯಸುತ್ತಾರೆ ಮತ್ತು ಈ ಸಕಾರಾತ್ಮಕ ಬಲಾವಣೆಯ ಚಾಲಕರಾಗಲು ಸಿದ್ಧರಿದ್ದಾರೆ ಎಂದು ಪದೇ ಪದೇ ತೋರಿಸಿದ್ದಾರೆ. ಈ ಹಿಂದೆ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಕ್‌ನ ಪರಿಸ್ಥಿತಿಯ ಬಗ್ಗೆ ಪ್ರಶ್ನಾರ್ಥಕ ಚಿಹ್ನೆ ಇತ್ತು. ಈಗ, ದಾಖಲೆಯ ಬೆಳವಣಿಗೆ ದಾಖಲೆಯ ಅಭಿವೃದ್ಧಿ, ದಾಖಲೆ ಪ್ರವಾಸಿಗರ ಒಳಹರಿವಿನ ಬಗ್ಗೆ ಆಶ್ಚರ್ಯಸೂಚಕ ಚಿಹ್ನೆಗಳು ಮಾತ್ರ ಇವೆ.

ಡಿಸೆಂಬರ್ 11 ರಂದು ತನ್ನ ತೀರ್ಪಿನಲ್ಲಿ, ಸರ್ವೋಚ್ಚ ನ್ಯಾಯಾಲಯವು ಏಕ್ ಭಾರತ್, ಶ್ರೇಷ್ಠ ಭಾರತ್ ಎಂಬ ಮನೋಭಾವವನ್ನು ಬಲಪಡಿಸಿದೆ. ಅದು ನಮಗೆ ಏಕತೆಯ ಬಂಧಗಳು ಮತ್ತು ಉತ್ತಮ ಆಡಳಿತದ ಹಂಚಿಕೆಯ ಬದ್ಧತೆಯನ್ನು ನೆನಪಿಸಿದೆ. ಇಂದು ಜಮ್ಮು, ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಜನಿಸಿದ ಪ್ರತಿಯೊಂದು ಮಗುವೂ ಸ್ವಚ್ಛವಾದ ಕ್ಯಾನ್ವಾಸ್‌ನೊಂದಿಗೆ ಜನಿಸುತ್ತದೆ, ಅಲ್ಲಿ ಅವನು ಅಥವಾ ಅವಳು ರೋಮಾಂಚಕ ಅಕಾಂಕ್ಷೆಗಳಿಂದ ಕೂಡಿದ ಭವಿಷ್ಯವನ್ನು ಚಿತ್ರಿಸಬಹುದು. ಇಂದು, ಜನರ ಕನಸುಗಳು ಬಂಧಿಗಳಾಗದೆ ಭವಿಷ್ಯದ ಸಾಧ್ಯತೆಗಳಾಗಿವೆ. ಅಭಿವೃದ್ಧಿ, ಪ್ರಜಾಪ್ರಭುತ್ವ ಮತ್ತು ಘನತೆಯು ಭ್ರಮನಿರಸನ, ನಿರಾಶೆ ಮತ್ತು ಹತಾಶೆಯನ್ನು ಬದಲಿಸಿವೆ. **ಲೇಖಕರು– ಭಾರತದ ಪ್ರಧಾನ ಮಂತ್ರಿಗಳು**

**ಆಧಾರ:** ವಿಶ್ವವಾಣಿ, ದಿನಾಂಕ: 12.12.2023

## 4. ಸಂಸತ್ತಿನ ಘನತೆಯನ್ನು ಸದಸ್ಯರು ಕಾಪಾಡಲಿ

ಮುಕ್ತಾಯಗೊಳ್ಳಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನ ಹಿಂದೆಂದೂ ಕಂಡಿರದ ಅನಿರೀಕ್ಷಿತ ಘಟನಾವಳಿಗಳಿಗೆ ಸಾಕ್ಷಿಯಾಗುತ್ತಿದೆ. ಅತ್ಯಂತ ಬಿಗಿಭದ್ರತೆ ಇದ್ದರೂ ಲೋಕಸಭೆಯೊಳಕ್ಕೆ ನುಗ್ಗಿ ಹೊಗೆಬಾಂಬ್ ಸ್ಫೋಟಿಸಿದ ಪ್ರಕರಣ, ಈ ಭದ್ರತಾ ಲೋಪದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಬೇಕು ಎಂದು ಪ್ರತಿಭಟನೆಗಿಳಿದ ಪ್ರತಿಪಕ್ಷಗಳ ಸದಸ್ಯರು ದಾಖಲೆ ಸಂಖ್ಯೆಯಲ್ಲಿ ಅಮಾನತು, ಇದನ್ನು ಖಂಡಿಸಿ ಸಂಸತ್ತಿನ ಆವರಣದಲ್ಲಿ ಪ್ರತಿಭಟನೆ ನಡೆಸುವ ವೇಳೆ ಉಪರಾಷ್ಟ್ರಪತಿಗಳ ಬಗ್ಗೆ ಮಿಮಿಕ್ರಿ ಮಾಡಿ ಸಂಸದರು ಅಣಕ ಮಾಡುವಂತಹ ಘಟನೆಗಳು ನಡೆದಿದ್ದು, ದೇಶದ ಪ್ರಜ್ಞಾವಂತ ನಾಗರಿಕರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ದೇಶದ ಜನಸಾಮಾನ್ಯರನ್ನು ಕಾಡುತ್ತಿರುವ ಹಾಗೂ ರಾಜ್ಯ–ರಾಷ್ಟ್ರಗಳನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಡಲು ಪ್ರತಿಯೊಬ್ಬ ಸಂಸದನಿಗೂ ಸಂಸತ್ತಿನ ಅಧಿವೇಶನ ಎಂಬುದು ಒಂದು ಅದ್ಭುತ ವೇದಿಕೆ. ದೇಶದಲ್ಲಿ ಜಾರಿಗೆ ಬರಲಿರುವ ಕಾನೂನುಗಳು ಮೊದಲು ಚರ್ಚೆಯಾಗುವುದು ಇಲ್ಲಿಯೇ. ಅದರಿಂದ ಜನಸಾಮಾನ್ಯರಿಗೆ ಅನಾನುಕೂಲವಾಗುತ್ತಿದ್ದರೆ ದೇಶದ ಹಿತಾಸಕ್ತಿಗೆ ತೊಂದರೆಯಾಗುತ್ತಿದ್ದರೆ ಸಂಸದರು ಅದನ್ನು ನೇರವಾಗಿ ಸರ್ಕಾರದ ಗಮನಕ್ಕೆ ತಂದು ಸರಿಪಡಿಸಬಹುದು. ಆದರೆ ಸಂಸತ್ತು ಎಂಬ ವೇದಿಕೆ ಇತ್ತೀಚಿನ ವರ್ಷಗಳಲ್ಲಿ ಅನಾವಶ್ಯಕ ವಿಷಯಗಳಿಗೆ ಸುದ್ದಿಯಾಗುತ್ತಿದೆ ಎಂಬುದಕ್ಕೆ ನಿದರ್ಶನಗಳು ಬೇಕಿಲ್ಲ.

ದೇಶದಲ್ಲಿ ಪ್ರತಿವರ್ಷ ಸರಿಸುಮಾರು 60 ದಿನ ಮಾತ್ರ ಸಂಸತ್ ಕಲಾಪ ನಡೆಯುತ್ತದೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಆ ಕಲಾಪಗಳು ಗದ್ದಲ ಪ್ರತಿಭಟನೆಯಲ್ಲೇ ಮುಳುಗೇಳುತ್ತವೆ. ಸಂಸತ್ತಿನ ಕಲಾಪಕ್ಕಾಗಿ ನೂರಾರು ಕೋಟಿ ರೂ.ಗಳನ್ನು ಸರ್ಕಾರ ಖರ್ಚು ಮಾಡುತ್ತದೆ. ಅದರ ಮೂಲ ಜನರ ತೆರಿಗೆದಾರರ ಹಣ. ಆ ಬಗ್ಗೆ ಸಂಸದರಿಗೆ ಮೊದಲು ಸ್ಪಷ್ಟ ಅರಿವಿರಬೇಕು ಎಂದು ಜನರು ಬಯಸುತ್ತಾರೆ ಸಂಸತ್ ಭದ್ರತಾ ಲೋಪದ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಸುವ ಅವಕಾಶವಿತ್ತು. ಸಭಾಧ್ಯಕ್ಷರು ಕೂಡ ಈ ಪ್ರಕರಣವನ್ನು ಸೂಕ್ತವಾಗಿ ನಿರ್ವಹಿಸಬಹುದಿತ್ತು ಎಂಬುದೇನೋ ನಿಜ. ನೂರಾರು ಸಂಖ್ಯೆಯಲ್ಲಿ ಸದಸ್ಯರನ್ನು ಸ್ಪೀಕರ್ ಹಾಗೂ ಸಭಾಧ್ಯಕ್ಷರು ಅಮಾನತು ಮಾಡುವಂತಹ ಕಠಿಣ ಕ್ರಮ ಕೈಗೊಳ್ಳುವ ಮುನ್ನ ಸಮಾಲೋಚನೆ ನಡೆಸುವ ಅಗತ್ಯವಿತ್ತು. ಹಾಗೆಯೇ ಅಮಾನತು ಖಂಡಿಸಿ ಪ್ರತಿಭಟನೆ ನಡೆಸುವ ವೇಳೆ ಉಪರಾಷ್ಟ್ರಪತಿಗಳನ್ನು ಮಿಮಿಕ್ರಿ ಮಾಡಿ ಸಂಸದರೊಬ್ಬರು ಅಣಕ ಮಾಡಿದ್ದನ್ನು ಇತರೆ ಸಂಸದರು ತಮಾಷೆಯಾಗಿ ಪರಿಗಣಿಸಿದ್ದು ಒಳ್ಳೆಯ ಲಕ್ಷಣವಲ್ಲ. ಉಪರಾಷ್ಟ್ರಪತಿ ಸ್ಥಾನ ಸಾಂವಿಧಾನಿಕ ಸ್ಥಾನ. ಅದನ್ನು ಸಂಸದರೇ ಈ ರೀತಿ ಲಘುವಾಗಿ

ಪರಿಗಣಿಸಬಾರದು. ಸರ್ಕಾರ ಹಾಗೂ ಪ್ರತಿಪಕ್ಷಗಳು ಕೂತು ಈಗಿನ ಬಿಕ್ಕಟ್ಟನ್ನು ಸೌಹಾರ್ದಯುತ ಬಗೆಹರಿಸಿಕೊಳ್ಳಬಹುದು. ಸಂಸತ್ತಿನ ಘನತೆ, ಗೌರವವನ್ನು ಹಾಳುಮಾಡದೆ ಅದನ್ನು ಕಾಪಾಡುವ ಜವಾಬ್ದಾರಿ ಎಲ್ಲಾ ಸದಸ್ಯರ ಮೇಲಿದೆ.

**ಆಧಾರ:** ಕನ್ನಡ ಪ್ರಭ, ದಿನಾಂಕ: 21.12.2023

## 5. ಸಂಹಿತೆಗಳ ಪ್ರಮುಖ ವೈಶಿಷ್ಟ್ಯಗಳು

ಭಾರತೀಯರ ಅಥವಾ ಭಾರತೀಯ ಸಾಮಾಜಿಕ ಅಗತ್ಯಗಳಿಗೆ ತಕ್ಕಂತೆ ವಿವಿಧ ಆಯಾಮಗಳಿಗೆ ಆದ್ಯತೆ ನೀಡಿರುವುದು ಈ ಸಂಹಿತೆಯ ಎದ್ದು ಕಾಣುವ ಅಂಶ. ಕೊಲೆ ಅಥವಾ ಮಹಿಳೆಯರ ವಿರುದ್ಧದ ದೌರ್ಜನ್ಯಗಳಿಗಿಂತ ಹೆಚ್ಚಾಗಿ, ಸರಕಾರಿ ಬೊಕ್ಕಸಕ್ಕೆ ರಕ್ಷಣೆ ಮತ್ತು ದೇಶದ್ರೋಹಕ್ಕೆ ಪ್ರತಿರಕ್ಷಣೆ ಒದಗಿಸುವುದು ಮುಖ್ಯವೆಂದು ಬ್ರಿಟಿಷ್ ಸರಕಾರವು ಪರಿಗಣಿಸಿತ್ತು. ಅದರೀಗ ಈ ಮೂರು ಪ್ರಸ್ತಾವಿತ ವಿಧೇಯಕಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳು, ಕೊಲೆ ಹಾಗೂ ರಾಷ್ಟ್ರವಿರೋಧಿ ಅಪರಾಧಗಳಿಗೆ ಪ್ರಾಮುಖ್ಯವನ್ನು ನೀಡಲಾಗಿದೆ. ಭಾರತೀಯರಿಗೆ ನ್ಯಾಯ ಒದಗಿಸುವಂತಾಗಬೇಕು ಹಾಗೂ ಅವರ ಮಾನವ ಹಕ್ಕುಗಳ ಸಂರಕ್ಷಣೆಯಾಗಬೇಕು ಎಂಬುದು ಹೀಗೆ ಆದ್ಯತೆ ನೀಡಿರುವುದರ ಹಿಂದಿನ ಉದ್ದೇಶಗಳಾಗಿವೆ.

**ಮಹಿಳೆಯರ ಮತ್ತು ಮಕ್ಕಳ ವಿರುದ್ಧದ ಅಪರಾಧಗಳು:**

- ಲೈಂಗಿಕ ಅಪರಾಧಗಳ ನಿಭಾವಣೆ/ನಿರ್ವಹಣೆಗೆಂದು 'ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳು' ಎಂಬ ಶೀರ್ಷಿಕೆಯ ಹೊಸ ಅಧ್ಯಾಯವೊಂದನ್ನು ಭಾರತೀಯ ನ್ಯಾಯ ಸಂಹಿತೆ ಪರಿಚಯಿಸಿದೆ.
- 18ರ ವಯೋಮಾನಕ್ಕೂ ಕೆಳಗಿನ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರಕ್ಕೆ ಸಂಬಂಧಿಸಿದ ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಮಾಡಲು ಈ ವಿಧೇಯಕ ಪ್ರಸ್ತಾವಿಸಿದೆ.
- ಅಪ್ರಾಪ್ತ ಹೆಣ್ಣಿನ ಮೇಲಾಗುವ ಸಾಮೂಹಿಕ ಅತ್ಯಾಚಾರಕ್ಕೆ ಸಂಬಂಧಿಸಿದ ನಿಬಂಧನೆಯು 'ಪೋಕ್ಸೋ' ಕಾಯ್ದೆಯೊಂದಿಗೆ ಸುಸಂಗತವಾಗಲಿದೆ/ಹೊಂದಿಕೊಳ್ಳಲಿದೆ.
- 18ರ ವಯೋಮಾನಕ್ಕಿಂತ ಕೆಳಗಿನ ಹೆಣ್ಣು ಮಕ್ಕಳ ವಿಷಯದಲ್ಲಿ ಜೀವಾವಧಿ ಶಿಕ್ಷೆ ಅಥವಾ ಮರಣದಂಡನೆಗೆ ಸಂಬಂಧಿಸಿ ಅವಕಾಶ ಕಲ್ಪಿಸಲಾಗಿದೆ/ನಿಬಂಧನೆಯೊಂದನ್ನು ರೂಪಿಸಲಾಗಿದೆ.
- ಸಾಮೂಹಿಕ ಅತ್ಯಾಚಾರದ ಎಲ್ಲ ಪ್ರಕರಣಗಳಲ್ಲಿ 20 ವರ್ಷಗಳ ಜೈಲುವಾಸ ಅಥವಾ ಜೀವಾವಧಿ ಶಿಕ್ಷೆಗೆ ಅವಕಾಶ ಕಲ್ಪಿಸಲಾಗಿದೆ/ನಿಬಂಧನೆಯನ್ನು ರೂಪಿಸಲಾಗಿದೆ.
- 18ರ ವಯೋಮಾನಕ್ಕಿಂತ ಕೆಳಗಿನ ಹೆಣ್ಣಿನ ಮೇಲಾಗುವ ಸಾಮೂಹಿಕ ಅತ್ಯಾಚಾರಕ್ಕೆ ಸಂಬಂಧಿಸಿ ಹೊಸತೊಂದು ಅಪರಾಧ ವರ್ಗವನ್ನು ಸೃಷ್ಟಿಸಲಾಗಿದೆ.
- ಮೋಸದಿಂದ ಲೈಂಗಿಕ ಸಂಬಂಧಲ್ಲಿ ತೊಡಗಿಸಿಕೊಳ್ಳುವ ಅಥವಾ ಮದುವೆಯಾಗುವ ನೈಜ ಆಶಯವಿಲ್ಲದೆಯೇ ಮದುವೆಯಾಗುವುದಾಗಿ ಭರವಸೆ ಕೊಡುವ ವ್ಯಕ್ತಿಗಳಿಗೆ ಸಂಬಂಧಿಸಿ ಉದ್ದೇಶಿತ ದಂಡಗಳನ್ನು ವಿಧಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

**ಭಯೋತ್ಪಾದನೆ** : ಭಾರತೀಯ ನ್ಯಾಯ ಸಂಹಿತೆಯಲ್ಲಿ ಇದೇ ಮೊದಲ ಬಾರಿಗೆ ಭಯೋತ್ಪಾದನೆಯನ್ನು ವ್ಯಾಖ್ಯಾನಿಸಲಾಗಿದ್ದು, ಇದನ್ನು ಶಿಕ್ಷಾರ್ಹ ಅಪರಾಧವಾಗಿ ಪರಿಗಣಿಸಲಾಗಿದೆ. ಈ ಕುರಿತಂತೆ ಸಂಹಿತೆಯ ಕಲಮು 113(1) ವಿವರಿಸುವುದು ಹೀಗೆ: 'ಭಾರತದ ಏಕತೆ, ಸಮಗ್ರತೆ, ಸಾರ್ವಭೌಮತೆ, ಭದ್ರತೆ ಅಥವ ಆರ್ಥಿಕ ಭದ್ರತೆಗೆ ಅಪಾಯವೊಡ್ಡುವ ಆಶಯವಿರುವ ಅಥವಾ ಅಪಾಯ ತರುವ ಸಾಧ್ಯತೆಯಿರುವ, ಅಥವಾ ಭಾರತ ಅಥವಾ ಯಾವುದೇ ವಿದೇಶದಲ್ಲಿನ ಜನರ ಮಧ್ಯೆ ಅಥವಾ ಜನಸಮುದಾಯದ ಯಾವುದೇ ಭಾಗದಲ್ಲಿ ಭಯೋತ್ಪಾದನೆ ಉಂಟುಮಾಡುವ ಅಥವಾ ಹಬ್ಬಿಸುವ ಆಶಯವಿರುವ ಯಾರೇ ಆಗಲಿ, ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಾವುಂಟುಮಾಡುವ, ಆಸ್ತಿಪಾಸ್ತಿಗಳಿಗೆ ಹಾನಿಯುಂಟುಮಾಡುವ ಅಥವಾ ಖೋಟಾನೋಟು ತಯಾರಿಕೆ/ಕಳ್ಳಸಾಗಣೆಯಲ್ಲಿ ತೊಡಗುವ ಆಶಯದೊಂದಿಗೆ ಬಾಂಬುಗಳು, ಡೈನಮೈಟ್ ಸ್ಫೋಟಕ ವಸ್ತುಗಳು, ವಿಷಕಾರಿ ಅನಿಲಗಳು, ಪರಮಾಣು ಅಸ್ತ್ರಗಳನ್ನು ಬಳಸಿ ಯಾವುದೇ ಕೃತ್ಯವನ್ನೆಸಗಿದರೆ, ಆತ ಭಯೋತ್ಪಾದಕ ಕೃತ್ಯಗಳನ್ನು ಎಸಗಿದಂತಾಗುತ್ತದೆ.

ಗಮನಿಸಬೇಕಾದ ಸಂಗತಿಯೆಂದರೆ ಭಯೋತ್ಪಾದಕ ಕೃತ್ಯಗಳಿಗೆ ಪೆರೋಲ್–ರಹಿತವಾದ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯನ್ನು ನೀಡಲು ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಭಯೋತ್ಪಾದಕ ಅಪರಾಧಗಳ ಶ್ರೇನಿಧಿಯೊಂದನ್ನು ಇದರಲ್ಲಿ ಪರಿಚಯಿಸಲಾಗಿದ್ದು, ಸರಕಾರಿ ಸೌಲಭ್ಯಗಳು ಅಥವಾ ಖಾಸಗಿ ಆಸ್ತಿ–ಪಾಸ್ತಿಗಳನ್ನು ನಾಶಪಡಿಸುವುದು ಒಂದು ಅಪರಾಧ ಎನಿಸಿಕೊಳ್ಳುತ್ತದೆ. ನಿರ್ಣಾಯಕ ಮೂಲಭೂತ ಸೌಕರ್ಯಗಳ ನಾಶ ಅಥವಾ ಅವುಗಳಿಗೆ ಹಾನಿಯುಂಟುಮಾಡುವ ಮೂಲಕ ವ್ಯಾಪಕ ನಷ್ಟಕ್ಕೆ ಕಾರಣವಾಗುವ ಕೃತ್ಯಗಳೂ ಈ ವಿಭಾಗದಡಿ ಬರುತ್ತವೆ.

**ಸಂಘಟಿತ ಅಪರಾಧ :** ಸಂಘಟಿತ ಅಪರಾಧಕ್ಕೆ ಸಂಬಂಧಿಸಿದ ಹೊಸತೊಂದು ಅಪರಾಧ ಕಲಮನ್ನು ಸೇರಿಸಲಾಗಿದ್ದು, ಭಾರತೀಯ ನ್ಯಾಯ ಸಂಹಿತೆಯ 111(1) ಕಲಂನಲ್ಲಿ ಇದೇ ಮೊದಲ ಬಾರಿಗೆ ಸಂಘಟಿತ ಅಪರಾಧವನ್ನು ವ್ಯಾಖ್ಯಾನಿಸಲಾಗಿದೆ. ಈ ಸಂಹಿತೆಯ ವೈಶಿಷ್ಟ್ಯಗಳು ಹೀಗಿವೆ.

- ವ್ಯಕ್ತಿಗಳ ಕೂಟವು ಎಸಗುವ ಅಕ್ರಮ ಚಟುವಟಿಕೆಯನ್ನು ಶಿಕ್ಷಾರ್ಹ ಅಪರಾಧವಾಗಿ ಪರಿಗಣಿಸಲಾಗಿದೆ.
- ಭಾರತದ ಸಾರ್ವಭೌಮತೆ ಅಥವಾ ಏಕತೆ ಮತ್ತು ಸಮಗ್ರತೆಗೆ ಬೆದರಿಕೆಯೊಡ್ಡುವ ಸಶಸ್ತ್ರ ದಂಗೆ, ವಿಧ್ವಂಸಕ ಚಟುವಟಿಕೆಗಳು, ಪ್ರತ್ಯೇಕತಾವಾದಿ ಚಟುವಟಿಕೆಗಳು ಅಥವಾ ಯಾವುದೇ ಕೃತ್ಯವನ್ನು ಹೊಸ ನಿಬಂಧನೆಗಳು ಒಳಗೊಳ್ಳುತ್ತವೆ.
- ಸಣ್ಣ ಪ್ರಮಾಣದ ಸಂಘಟಿತ ಅಪರಾಧಗಳೂ ಶಿಕ್ಷಾರ್ಹವಾಗಿದ್ದು 7 ವರ್ಷಗಳವರೆಗೆ ಇವಕ್ಕೆ ಸೆರೆವಾಸ ವಿಧಿಸಬಹುದಾಗಿದೆ. ಇದಕ್ಕೆ ಸಂಬಂಧಿಸಿದ ನಿಬಂಧನೆಗಳು ಕಲಂ 112ರಲ್ಲಿ ಅಡಕವಾಗಿವೆ.
- ಕರೆನ್ಸಿ ನೋಟುಗಳು, ಬ್ಯಾಂಕ್ ನೋಟುಗಳು ಮತ್ತು ಸರಕಾರಿ ಸ್ಟ್ಯಾಂಪ್‌ಗಳನ್ನು ಅಕ್ರಮವಾಗಿ ತಿದ್ದುವುದು/ಬದಲಾಯಿಸುವುದು, ಯಾವುದೇ ಬ್ಯಾಂಕು/ಹಣಕಾಸು ಸಂಸ್ಥೆಯಲ್ಲಿ ಕಾಣಬರುವ ಯಾವುದೇ ಯೋಜನೆಯ ಅಥವಾ ಹಣದ ದುರುಪಯೋಗ ಇವುಗಳನ್ನು ಆರ್ಥಿಕ ಅಪರಾಧಗಳು ಎಂದು ವ್ಯಾಖ್ಯಾನಿಸಲಾಗಿದೆ.
- ಸಂಘಟಿತ ಅಪರಾಧದಂಥ ಕೃತ್ಯದ ವೇಳೆ ವ್ಯಕ್ತಿಯೊಬ್ಬ ಕೊಲ್ಲಲ್ಪಟ್ಟರೆ, ಆರೋಪಿಗೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯನ್ನು ವಿಧಿಸಬಹುದಾಗಿದೆ.
- ಸಂಘಟಿತ ಅಪರಾಧಕ್ಕೆ 10ಲಕ್ಷ ರೂಪಾಯಿಗಿಂತ ಕಡಿಮೆಯಿಲ್ಲದ ದಂಡವನ್ನು ವಿಧಿಸಲಾಗುವುದು ಹಾಗೂ ಸಂಘಟಿತ ಅಪರಾಧದಲ್ಲಿ ನೆರವಾಗುವವರಿಗೆ ಶಿಕ್ಷೆ ನೀಡುವುದಕ್ಕೂ ಅವಕಾಶ ಕಲ್ಪಿಸಲಾಗಿದೆ.

- ಅಪರಾಧ ಸಂಬಂಧಿತ ಕಾನೂನು ಕ್ರಮಗಳಿಗೆ ಚಾಲನೆ, ಬಂಧನ, ತನಿಖೆ, ಆರೋಪಪಟ್ಟಿ ಸಲ್ಲಿಕೆ, ಮ್ಯಾಜಿಸ್ಟ್ರೇಟರ್ ಸಮ್ಮುಖದಲ್ಲಿನ ವಿಚಾರಣೆಗಳು, ವಿಚಾರಣಾಧಿಕಾರ/ನ್ಯಾಯವಿಚಾರಣೆ, ಷರತ್ತಿನವಾದ, ಸಹಾಯಕ ಸಾರ್ವಜನಿಕ ಫಿರ್ಯಾದಿ ಅಥವಾ ಪಬ್ಲಿಕ್ ಪ್ರಾಸಿಕ್ಯೂಟರ್‌ನ ನೇಮಕ, ವಿಚಾರಣೆ, ಜಾಮೀನು, ತೀರ್ಪು ಮತ್ತು ಶಿಕ್ಷೆ, ಕ್ಷಮಾಧಾನ ಅರ್ಜಿ ಇವುಗಳಿಗೆ ಸಂಬಂಧಿಸಿದಂತೆ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.
- 35 ವಿಭಾಗಗಳಲ್ಲಿ ಹೀಗೆ ಕಾಲಮಿತಿಯನ್ನು ಸೇರಿಸಲಾಗಿದ್ದು, ಇದರಿಂದಾಗಿ ಕ್ಷಿಪ್ರ ನ್ಯಾಯದಾನವು ಕೈಗೂಡಲಿದೆ.
- ವ್ಯಕ್ತಿಯ ವಿದ್ಯುನ್ಮಾನ ಸಂವಹನದ ಮೂಲಕ ದೂರು ನೀಡಿದ 3 ದಿನಗಳ ಒಳಗಾಗಿ ಎಫ್‌ಐಆರ್ ಅನ್ನು ದಾಖಲಿಸಲಾಗುತ್ತದೆ.
- ಲೈಂಗಿಕ ಕಿರುಕುಳದ ಬಲಿಪಶುವಿನ ವೈದ್ಯಕೀಯ ಪರೀಕ್ಷೆಯ ವರದಿಯನ್ನು ವೈದ್ಯಕೀಯ ಪರೀಕ್ಷಕರ ಕಡೆಯಿಂದ ತನಿಖಾಧಿಕಾರಿಗೆ 7 ದಿನದೊಳಗೆ ಕಳಿಸಿಕೊಡಲಾಗುತ್ತದೆ; ತನಿಖೆಯ ಸ್ಥಿತಿಗತಿಯ ಕುರಿತಾಗಿ ಬಲಿಪಶುವಿಗೆ/ಮಾಹಿತಿದಾರರಿಗೆ 90 ದಿನದೊಳಗೆ ಮಾಹಿತಿ ನೀಡಲಾಗುತ್ತದೆ.

**ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ :** ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಗಳು, ಕಂಪ್ಯೂಟರ್‌ನಲ್ಲಿ ಲಭ್ಯವಿರುವ ಇ–ಮೇಲ್‌ಗಳು, ಸರ್ವರ್ ಲಾಗ್‌ಗಳು, ಸಂದೇಶಗಳು, ಜಾಲತಾಣಗಳು, ಸ್ಮಾರ್ಟ್‌ಫೋನ್ ಅಥವಾ ಲ್ಯಾಪ್‌ಟಾಪ್‌ನ ಸ್ಥಾನಿಕ/ಸ್ಥಳ ಪುರಾವೆ ಇವೇ ಮೊದಲಾದವನ್ನು ಒಳಗೊಳ್ಳುವಂತಾಗಲು ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ 'ದಾಖಲೆ ಪತ್ರಗಳು' ಎಂಬ ಪರಿಕಲ್ಪನೆಯ ವ್ಯಾಖ್ಯಾನವನ್ನು ವಿಸ್ತರಿಸಲಾಗಿದ್ದು, ಇದು ಮಹತ್ತರ ಬದಲಾವಣೆ ಎನಿಸಿಕೊಂಡಿದೆ.

- ದಾಖಲೆ ಪತ್ರ ಅಥವಾ ದಸ್ತಾವೇಜು' ಎಂಬುದರ ವ್ಯಾಖ್ಯೆಯಲ್ಲಿ ವಿದ್ಯುನ್ಮಾನ ದಾಖಲೆಗಳನ್ನು ಹೀಗೆ ಸೇರ್ಪಡೆ ಮಾಡಲಾಗಿದ್ದು, ಹೀಗೆ ವಿದ್ಯುನ್ಮಾನ ಸ್ವರೂಪದಲ್ಲಿ ಪಡೆಯಲಾದ ಹೇಳಿಕೆಗಳನ್ನು 'ಸಾಕ್ಷ್ಯ'ದ ವ್ಯಾಖ್ಯಾನದಲ್ಲಿ ಸೇರಿಸಲಾಗುತ್ತದೆ.
- ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಗಳನ್ನು ಸೂಕ್ಷ್ಮವಾಗಿ ಕಾನೂನಾತ್ಮಕವಾಗಿ ಸ್ವೀಕರಿಸುವಿಕೆ, ಸಿಂಧುತ್ವ ನೀಡುವಿಕೆ ಹಾಗೂ ಜಾರಿಗೊಳಿಸುವಿಕೆಯನ್ನು ಈ ಅಧಿನಿಯಮವು ಊರ್ಜಿತಗೊಳಿಸುತ್ತದೆ.

**ಆಧಾರ:** ವಿಶ್ವವಾಣಿ, ದಿನಾಂಕ: 26.12.2023

## 6. ನ್ಯಾಯವೇ ದೇವರು

ಬ್ರಿಟಿಷರ ಕಾಲದಿಂದ ಚಾಲ್ತಿಯಲ್ಲಿದ್ದ ಕಾನೂನುಗಳಿಗೆ ಇತಿಶ್ರೀ ಹಾಡಿರುವ ಸಂಸತ್ತು, ಹೊಸ 3 ಅಪರಾಧ ವಿಧೇಯಕಗಳಿಗೆ ಹಸಿರು ನಿಶಾನೆ ತೋರಿದೆ. 'ಭಾರತೀಯ ನ್ಯಾಯ ಸಂಹಿತೆ' 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ' ಮತ್ತು 'ಭಾರತೀಯ ಸಾಕ್ಷ್ಯ ಅಧಿನಿಯಮ, 2023' ಎಂಬ 3 ಅಪರಾಧ ವಿಧೇಯಕಗಳನ್ನು ಲೋಕಸಭೆಯ ಮೊನ್ನೆ ಬುಧವಾರ ಅಂಗೀಕರಿಸಿದ್ದು ಇವಕ್ಕೆ ಕಳೆದ ರಾಜ್ಯ ಸಭೆಯಲ್ಲೂ ಅನಮೋದನೆ ದಕ್ಕಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿಧೇಯಕಗಳಿಗೆ ಅಂಕಿತ ಹಾಕಿದ್ದು, ಕಾಯಿದೆಗಳಾಗಿ ಜಾರಿಯಾಗಿವೆ. ದೇಶವಾಸಿಗಳ ದಶಕಗಳ ಕನಸಾಗಿದ್ದ 'ಭಾರತೀಯ ನ್ಯಾಯಶಕೆ'ಗೆ ಇವು ಮುನ್ನುಡಿಯಾಗಲಿವೆ ಎಂಬುದು ಬಲ್ಲವರು ಬರೆದಿರುವ ಷರಾ.

ಹಿಂದೆ ಇದ್ದಂಥ 3 ಕಾಯ್ದೆಗಳು ವಸಾಹತುಶಾಹಿ ಕಾಲಘಟ್ಟದವಾಗಿದ್ದರಿಂದ, ವರ್ತಮಾನದ ಒಂದಷ್ಟು ಬೆಳವಣಿಗೆಗಳು ಹಾಗೂ ಅನಿವಾರ್ಯಗಳಿಗೆ ಸಂಬಂಧಿ ಅಪ್ರಸ್ತುತವಾಗಿದ್ದವು. ಅದರಲ್ಲೂ ನಿರ್ದಿಷ್ಟವಾಗಿ 'ಸಂಘಟಿತ ಭಯೋತ್ಪಾದನೆ' ಯಂಥ ಸಮಸ್ಯೆಯ ದಿನಗಳೆದಂತೆ ಹೊಸ ಸ್ವರೂಪವನ್ನು ಮೈಗೂಡಿಸಿಕೊಳ್ಳುತ್ತ ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ದುರುಪಯೋಗಪಡಿಸಿಕೊಂಡು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದುದರಿಂದ ಇಂಥದೊಂದು ಆಮೂಲಾಗ್ರ ಬದಲಾವಣೆ ಅಗತ್ಯವಾಗಿತ್ತು. ಅದಕ್ಕೆಂದೇ ಸಂಕಲ್ಪಿಸಿದ ಕೇಂದ್ರ ಸರಕಾರ, ಅಗತ್ಯ ಮಾರ್ಪಾಡುಗಳನ್ನು ಸೇರಿಸಿ ಈ ಹೊಸ ಮೂರು ಸಂಹಿತೆಗಳನ್ನು ಕಟ್ಟಿಕೊಟ್ಟಿದ್ದು, ಇವುಗಳಲ್ಲಿ ಭಯೋತ್ಪಾದನೆಗೆ ಹೊಸ ವ್ಯಾಖ್ಯೆ ನೀಡಿರುವುದರ ಜತೆಗೆ ರಾಷ್ಟ್ರೀಯ ಭದ್ರತೆಗೆ ಧಕ್ಕೆಯುಂಟು ಮಾಡುವ ಅಪರಾಧಗಳಿಗೆ ಹಾಗೂ ಗುಂಪು ಹತ್ಯೆಗೆ ಉಗ್ರಶಿಕ್ಷೆ ವಿಧಿಸುವತ್ತಲೂ ಗಮನ ಹರಿಸಿದೆ ಎಂಬುದು ಗಮನಾರ್ಹ.

ಭಾರತೀಯ ಕಾನೂನು ವ್ಯವಸ್ಥೆಯ ಸುಧಾರಣೆ ಅಥವಾ ನಿರ್ದಿಷ್ಟ ಬದಲಾವಣೆ ಎಂಬುದು ಅಂದುಕೊಂಡಷ್ಟು ಸಲೀಸಾದ ಬಾಬತ್ತಲ್ಲ ಅಥವಾ ಹರಿಬರಿಯಲ್ಲಿ ಒಂದೆರಡು ದಿನಗಳಲ್ಲಿ ನೆರವೇರಿಬಿಡುವ ಪ್ರಕ್ರಿಯೆಯೂ ಅಲ್ಲ. ನಮ್ಮ ಸಾಮಾಜಿಕ ಪರಿಸ್ಥಿತಿಯ ತಲಸ್ಪರ್ಶಿ ಅಧ್ಯಯನ ಮತ್ತು ಉತ್ತರದಾಯಿತ್ವ ಇಲ್ಲಿ ಅನಿವಾರ್ಯವಾಗಿದ್ದವು. ಹೀಗಾಗಿ ಕೂಲಂಕಷ ಸಮಾಲೋಚನೆ ಸಲಹೆ–ಮಾರ್ಗದರ್ಶನಗಳಿಗೆ ಒಡ್ಡಿಕೊಂಡ ನಂತರವಷ್ಟೇ ಕಾನೂನು ವ್ಯವಸ್ಥೆಯ ಸುಧಾರಣೆಗೆ ಮುಂದಡಿ ಇಡಲಾಯಿತು. ಅದರ ಹಂತ ಹಂತದ ವಿವರವಿಲ್ಲಿದೆ ನೋಡಿ:

- ಅಪರಾಧ ನ್ಯಾಯ ವ್ಯವಸ್ಥೆಗೆ ಸಂಬಂಧಿಸಿದ ಕಾನೂನುಗಳಲ್ಲಿ ಸುಧಾರಣೆ ತರುವ ಈ ಪ್ರಕ್ರಿಯೆಗೆ ಕೇಂದ್ರ ಗೃಹಖಾತೆಯಿಂದ ಚಾಲನೆ ಸಿಕ್ಕಿದ್ದು 2019ರಲ್ಲಿ.
- ಈ ಪ್ರಕ್ರಿಯೆಗೆ ಸಂಬಂಧಿಸಿ ಸಮಾಜದ ವಿವಿಧ ಕಾರ್ಯಕ್ಷೇತ್ರಗಳ ಪರಿಣತರು, ಸಹಭಾಗಿಗಳು, ಮಧ್ಯಸ್ಥಗಾರರ ಸಲಹೆ–ಸೂಚನೆಗಳನ್ನು ಪಡೆಯಲಾಯಿತು.
- ಎಲ್ಲ ರಾಜ್ಯಗಳ ರಾಜ್ಯಪಾಲರು, ಮುಖ್ಯಮಂತ್ರಿಗಳು ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು/ಆಡಳಿತಗಾರರಿಗೆ 2019ರ ಸೆಪ್ಟೆಂಬರ್‌ನಲ್ಲಿ ಹಾಗೂ ಭಾರತದ ಮುಖ್ಯ ನ್ಯಾಯಮೂರ್ತಿಗಳು, ಉಚ್ಚನ್ಯಾಯಾಲಗಳ ಮುಖ್ಯ ನ್ಯಾಯಮೂರ್ತಿಗಳು, ಬಾರ್ ಕೌನ್ಸಿಲ್‌ಗಳು ಹಾಗೂ ಕಾನೂನು ವಿಶ್ವವಿದ್ಯಾಲಗಳಿಗೆ 2020ರ ಜನವರಿಯಲ್ಲಿ ಕೇಂದ್ರ ಗೃಹಸಚಿವರು ಈ ಕುರಿತಾಗಿ ಪತ್ರ ಬರೆದರು.
- ಈ ನಿಟ್ಟಿನಲ್ಲಿ ಸಂಸತ್ತಿನ ಗೌರವಾನ್ವಿತ ಸದಸ್ಯರಿಂದಲೂ 2021ರ ಡಿಸೆಂಬರ್‌ನಲ್ಲಿ ಸಲಹೆಗಳನ್ನು ಪಡೆಯಲಾಯಿತು. ಸಲಹೆ–ಸೂಚನೆ ನೀಡುವಂತೆ 'ಬ್ಯೂರೋ ಆಫ್ ಪೊಲೀಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್' ಎಲ್ಲಾ ಐಪಿಎಸ್ ಅಧಿಕಾರಿಗಳಿಗೆ ಕೇಳಿಕೊಂಡಿತು.
- ದೆಹಲಿಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ 2020ರ ಮಾರ್ಚ್‌ನಲ್ಲಿ ಒಂದು ಸಮಿತಿಯನ್ನೂ ರಚಿಸಲಾಯಿತು. ಈ ಎಲ್ಲ ಸಂಘಟಿತ ಯತ್ನದ ಫಲವಾಗಿ ಒಟ್ಟು 3,200 ಸಲಹೆ–ಸೂಚನೆಗಳನ್ನು ಸ್ವೀಕರಿಸಲಾಯಿತು ಹಾಗೂ ಇವನ್ನು ಗೃಹ ಖಾತೆಯ ಆಶ್ರಯದಡಿ ಕೂಲಂಕಷ ಚರ್ಚೆಗೆ ಒಳಪಡಿಸಲಾಯಿತು. ಗೌರವಾನ್ವಿತ ಗೃಹ ಸಚಿವರು 150ಕ್ಕೂ ಹೆಚ್ಚು ಸಭೆಗಳನ್ನು ನಡೆಸಿದರು.

ಕೇಂದ್ರ ಗೃಹಖಾತೆಯ ಕೈಗೊಂಡ ಕೂಲಂಕುಷ ಚರ್ಚೆ ಮತ್ತು ಸಮಾಲೋಚನೆಗಳ ಪರಿಣಾಮವಾಗಿ, ಹೊಸ ಮೂರು ವಿಧೇಯಕಗಳಲ್ಲಿ ಒಂದಷ್ಟು ಬದಲಾವಣೆಗಳಿಗೆ ಆಸ್ಪದ ಸಿಕ್ಕಿದೆ ಒಂದೊಂದಾಗಿ ಅವನ್ನು ಅವಲೋಕಿಸೋಣ.

1.**ಭಾರತೀಯ ನ್ಯಾಯ ಸಂಹಿತೆ:**

- ಇದು 358 ಕಲಂಗಳನ್ನು ಒಳಗೊಳ್ಳಲಿದೆ (ಭಾರತೀಯ ದಂಡ ಸಂಹಿತೆ ಅಥವಾ 'ಐಪಿಸಿ'ಯಲ್ಲಿ ಇದ್ದ 511 ಕಲುಗಳಿಗೆ ಬದಲಾಗಿ).
- ಹೊಸ 20 ಅಪರಾಧಗಳನ್ನು ಸೇರ್ಪಡೆ ಮಾಡಲಾಗಿದೆ.
- 33 ಅಪರಾಧಗಳಲ್ಲಿ ಸೆರೆವಾಸದ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ.
- 83 ಅಪರಾಧಗಳಲ್ಲಿ ದಂಡದ ಮೊತ್ತವನ್ನು ಹೆಚ್ಚಿಸಲಾಗಿದೆ.
- 23 ಅಪರಾಧಗಳಲ್ಲಿ ಕಡ್ಡಾಯ ಕನಿಷ್ಠ ತಮ್ಮ ಶಿಕ್ಷೆಯನ್ನು ಪರಿಚಯಿಸಲಾಗಿದೆ.
- 6 ಅಪರಾಧಗಳಲ್ಲಿ ಸಮುದಾಯದ ಸೇವೆಯ ದಂಡವನ್ನು ಪರಿಚಯಿಸಲಾಗಿದೆ.
- 19 ಕಲಮುಗಳನ್ನು ಬದಲಿಸಲಾಗಿದೆ/ತೆಗೆದುಹಾಕಲಾಗಿದೆ.

2. **ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ:**

- ಇದು 531 ಕಲಂಗಳನ್ನು ಒಳಗೊಳ್ಳಲಿದೆ (ಅಪರಾಧ ಪ್ರಕ್ರಿಯಾ ಸಂಹಿತೆ ಅಥವಾ ಸಿಆರ್‌ಪಿಸಿಯ 484 ಕಲಮುಗಳ ಸ್ಥಾನದಲ್ಲಿ)
- ಒಟ್ಟು 177 ನಿಬಂಧನೆಗಳನ್ನು ಬದಲಿಸಲಾಗಿದೆ.
- 9 ಹೊಸ ಕಲಂಗಳು, 39 ಹೊಸ ಉಪಕಲಮುಗಳನ್ನು ಸೇರ್ಪಡೆ ಮಾಡಲಾಗಿದೆ ಹಾಗೂ 44 ಹೊಸ ಉಪಬಂಧಗಳು ಹಾಗೂ ಸ್ಪಷ್ಟೀಕರಣಗಳನ್ನು ಸೇರಿಸಲಾಗಿದೆ.
- 35 ಕಲಮುಗಳಿಗೆ ಸಕಾಲಿಕತೆ/ಕಾಲೋಚಿತತೆಯನ್ನು ಸೇರಿಸಲಾಗಿದೆ.
- 35 ಸ್ಥಳಗಳಲ್ಲಿ ಆಡಿಯೋ–ವಿಡಿಯೋ ನಿಬಂಧನೆಯನ್ನು ಸೇರಿಸಲಾಗಿದೆ.
- 14 ಕಲಮುಗಳನ್ನು ರದ್ದುಮಾಡಲಾಗಿದೆ/ತೆಗೆದುಹಾಕಲಾಗಿದೆ.

3. ಭಾರತೀಯ ಸಾಕ್ಷ್ಯ ಅಧಿನಿಯ:

- 170 ನಿಬಂಧನೆಗಳನ್ನು ಇದು ಒಳಗೊಳ್ಳಲಿದೆ (ಮೂಲತ: ಇದ್ದ 167 ನಿಬಂಧನೆಗಳಿಗೆ ಬದಲಾಗಿ).
- ಒಟ್ಟು 24 ನಿಬಂಧನೆಗಳನ್ನು ಬದಲಿಸಲಾಗಿದೆ.
- 2 ಹೊಸ ನಿಬಂಧನೆ ಹಾಗೂ 6 ಅಧೀನ ನಿಬಂಧನೆಗಳನ್ನು ಸೇರಿಸಲಾಗಿದೆ ಮತ್ತು 6 ನಿಬಂಧನೆಗಳನ್ನು ರದ್ದುಮಾಡಲಾಗಿದೆ/ತೆಗೆದುಹಾಕಲಾಗಿದೆ.

**ಆಧಾರ:** ವಿಶ್ವವಾಣಿ, ದಿನಾಂಕ: 26/12/2023

* * * * *